ನೆನಪುಗಳು

ಕೆ. ವಾಸುದೇವಾಚಾರ್ಯ

ಕಾವ್ಯಾಲಯ : ಪ್ರಕಾಶಕರು : ಮೈಸೂರು 14

ಬೆಲೆ ರೂ. 6 50

ನೆನಪುಗಳು

ಕೆ. ವಾಸುದೇವಾಚಾರ್ಯ

ಕನ್ನಡ ಕಾವ್ಯಮಾಲೆ

ನೆನಪುಗಳು

ಕೆ. ವಾಸುದೇವಾಚಾರ್ಯ

VIJAYA EVENING COLLEGE LIBRARY
BANGALORE-560 004.
Accn. No 6860
Cost, Rs 6.50
Date
T.C. Hemial
Librarian

ಕಾವ್ಯಾಲಯ : ಪ್ರಕಾಶಕರು : ಮೈಸೂರು 14

NENAPUGALU (Kannada) : *REMINISCENCES* By Vasudevacharya a musician and composer of Karnataka. First Published by Kavyalaya Publishers. Mysore-14, 1962. Reissued 1978, Reprinted 1984.

ಮೂರನೆಯ ಮುದ್ರಣ ೧೯೮೪

All Rights Reserved

This book is copyright
It may not be reproduced by any person by any process without written permission from the Publishers.

PRINTED BY G. S. NAGENDRA AT KARNATAKA PRESS
BAJJANNA LANE, CHAMARAJAPURAM, MYSORE 570 004

ಲೇಖಕನ ಮಾತು

ಈಗ್ಗೆ ಐದು ವರ್ಷಗಳ ಹಿಂದೆ, 'ನಾ ಕಂಡ ಕಲಾವಿದರು' ಎಂಬ ನನ್ನ ಮೊದಲ ಬರವಣಿಗೆಯನ್ನು ವಾಚಕರ ಮುಂದಿಟ್ಟಿದ್ದೆ. ಅದರಲ್ಲಿ, ನಾನು ಕಂಡಿದ್ದ ಕೆಲವು ಸುಪ್ರಸಿದ್ಧ ಸಂಗೀತ ವಿದ್ವಾಂಸರುಗಳ ಪರಿಚಯ ಮಾಡಿಕೊಡಲು ಪ್ರಯತ್ನಿಸಿದ್ದೆ. ಈ ಪುಟ್ಟ ಪುಸ್ತಕದಲ್ಲಿ ನಾನು ಕಂಡ, ಅನುಭವಿಸಿದ, ಕೆಲವು ರಸನಿಮಿಷಗಳನ್ನು ಚಿತ್ರಿಸಲು ಯತ್ನಿಸಿದ್ದೇನೆ.

ಐವತ್ತರ ಗಡಿ ದಾಟಿದ ಇಬ್ಬರು ಒಂದೆಡೆ ಸೇರಿದಾಗ, ಸಾಮಾನ್ಯವಾಗಿ ಒಂದೆರಡು ಸಲವಾದರೂ 'ನಮ್ಮ ಅಂದಿನ ದಿನಗಳ ಕಾಲ ಎಷ್ಟು ಚೆನ್ನಾಗಿತ್ತು! ಒಂದು ಚಿಂತೆಯೇ, ಚಿತಾವಣೆಯೇ? ಒಂದು ಅಬ್ಬರವಿಲ್ಲ, ಒಂದು ಉಬ್ಬರ ವಿಲ್ಲ! ಎಲ್ಲವೂ ನೆಮ್ಮದಿಯಾಗಿತ್ತು. ಗಡಿಬಿಡಿ, ಪರದಾಟ ಎನ್ನುವುದೇ ಇರ ಲಿಲ್ಲ. ಈಗಲೋ, ಅದೇನು ಕಾಲ ಬಂತೋ ಕಾಣೆ! ಎಲ್ಲ ಉರಿದೇಳುತ್ತದೆ. ಒಂದರಲ್ಲೂ ವ್ಯವಧಾನವಿಲ್ಲ. ಆ ಕಾಲ ಎಲ್ಲಿ? ಈ ಕಾಲ ಎಲ್ಲಿ?'—ಎಂದು ಉದ್ಗಾರ ತೆಗೆಯದೆ ಮಾತು ಮುಗಿಯುವುದಿಲ್ಲ. ನಾನೂ ಹಿಂದಿನ ತಲೆಮಾರಿಗೆ ಸೇರಿದವನೇ, ನಿಜ. ಆದರೂ 'ಕಾಲಾಯ ತಸ್ಮೈ ನಮಃ' ಎಂದು ತೆಪ್ಪಗಿರುವ ಮನೋವೃತ್ತಿ ನನ್ನದಲ್ಲವಾದ್ದರಿಂದ, ಕಾಲ ಚೆನ್ನಾಗಿತ್ತು ಅಥವಾ ಚೆನ್ನಾಗಿಲ್ಲ ಎಂದು ಹೇಳುವುದು ಸಾಧುವೇ? ಸಮಂಜಸವೇ? ಎಂದು ನನ್ನನ್ನು ನಾನೇ ಕೇಳಿಕೊಂಡಿದ್ದೇನೆ. ಕಾಲ ಚೆನ್ನಾಗಿರುವುದಕ್ಕೆ, ಚೆನ್ನಾಗಿಲ್ಲದಿರುವುದಕ್ಕೆ ಹೊಣೆಗಾರರು ಯಾರು? ನಾವೇ ಅಲ್ಲವೇ? ಕಾಲ ಉರುಳುತ್ತಲೇ ಇದೆ; ಅದು ನಿಯತಿನಿಯಮ. ಅದಕ್ಕೊಂದು ರೂಪು ಕೊಡುವವರು ನಾವು ಆ ಕಾಲದಲ್ಲಿ ಒಂದಾಗಿ ಜೀವಿಸುವವರು. ಜನರ ನೀತಿ ನಡವಳಿಕೆ, ಆಚಾರವ್ಯವ ಹಾರ, ಸ್ಥಿತಿಗತಿ, ಜೀವನದೃಷ್ಟಿ, ಆವಿಷ್ಕಾರ, ಪರಿಷ್ಕಾರ, ಇವುಗಳನ್ನು ಅನುರಿಸಿ ಕಾಲಚಕ್ರಕ್ಕೆ ಒಂದು ಆಕೃತಿ ಬರುತ್ತದೆ—ಎಂದು ನನ್ನ ನಂಬಿಕೆ. ಹಿಂದಿನವರಿಗೆ ಹಿಂದಿನದು ಒಗ್ಗಿತ್ತು. ಆದ್ದರಿಂದ ಇಂದಿನ ಹೂರ್ಪಾಡು ಅವರಿಗೆ ಹಿತವೆನಿಸಲಿಕ್ಕಿಲ್ಲ. ಅಂತೆಯೇ, ಹಿಂದಿನದನ್ನು ನೆನೆದು ಇಂದಿನದನ್ನು ಅಲ್ಲಗಳೆಯುತ್ತಾರೆ, ಅವರು. ಅದರಂತೆ, ಇಂದಿನವರು ಹಿಂದಿನ ಆ ದಿನಗಳ ಲ್ಲಿದ್ದಂತೆ ಭಾವಿಸಿಕೊಂಡರೆ, ಅವರ ಪ್ರತಿಕ್ರಿಯೆಗಳು ಬೇರೆಯಾಗಿರಬಹು ದಲ್ಲವೆ? ಅಂದಿನ ಕಾಲ ಚೆನ್ನಾಗಿದ್ದಿದ್ದರೆ, ಹಾಗೆ ಮಾಡಿದ ಜನರ ಜೀವನದ ಧಾಟಿ ಹೇಗಿತ್ತು? ಇಂದು, ಅಂದಿನ ಕಾಲ ಇಲ್ಲ, ನಿಜ. ಆದ ಮಾರ್ಪಾಟು ಗಳೇನು? ಜನಜೀವನದಲ್ಲಿ ಕಂಡುಬರುವ ವ್ಯತ್ಯಾಸಗಳು ಯಾವುವು?—

ಎಂಬ ಪ್ರಶ್ನೆಗಳನ್ನು ಮೆಲುಕುಹಾಕಿದಾಗ ನನ್ನ ಸ್ಮೃತಿಪಟಲದ ಮೇಲೆ ಮೂಡಿ ಬಂದ ಅಂದಿನ ಕೆಲವು ಚಿತ್ರಗಳೇ ಈ ನೆನಪುಗಳು.

ಇಂದು ನವನಾಗರಿಕ ಜೀವನ ಮೊದಲಾಗಿದೆ. ಜನರಲ್ಲಿ ತಿಳಿವಳಿಕೆ ಹೆಚ್ಚಿದೆ. ಹತ್ತು ಸುತ್ತಿನಿಂದ ಜೀವನವೃತ್ತವನ್ನು ಅಳೆಯುವ ಚಪಲ ಹೆಚ್ಚಿದೆ. ಇಂದು ನಾಲ್ಕು-ಐದು ವರ್ಷದ ಮಗುವಿಗೆ ಇರುವ ವ್ಯವಹಾರಚಾತುರ್ಯ ಬಹುಶಃ ಅಂದಿನ ವಯಸ್ಕರಿಗೂ ಇತ್ತೋ ಇಲ್ಲವೋ ಹೇಳಲಾರೆ. ಇಂದಿನವರ ಜ್ಞಾನ ವಿಸ್ತಾರವಾದದ್ದು, ವಿವಿಧ ಮುಖವುಳ್ಳದ್ದು. ಅಂದಿನವರದು ಹೀಗಿರಲಿಲ್ಲವೇನೋ! ಅವರ ಜ್ಞಾನ ಆಳವಾದದ್ದು, ನಿಕರವಾದದ್ದು, ಪ್ರಾಯಿಕವಾಗಿ ಏಕಮುಖ ವುಳ್ಳದ್ದು. ಇಂದಿನ ಗಡಿಬಿಡಿ, ಆತುರ ಯಾವುದರಲ್ಲೂ ಅಂದು ಇರಲಿಲ್ಲ. ಆಗ, ಎಲ್ಲದರಲ್ಲಿಯೂ ಒಂದು ಬಗೆಯ ನಿಧಾನ, ಸಾವಧಾನ. ಜನಜೀವನವೂ ಅಷ್ಟೆ. ಇಂದು ಹೊಟ್ಟೆಬಟ್ಟೆಗೆ ಜನರು ಪಡುವ ಪಾಡು ಅಂದು ಇರಲಿಲ್ಲ. ಊಟ-ಉಪಚಾರಕ್ಕೆ ಇಂದಿನ ಆತಂಕ ಅವರನ್ನು ಕಾಡುತ್ತಿರಲಿಲ್ಲ. ಆದ್ದರಿಂದ ಸಹಜ ವಾಗಿಯೇ ಜನರ ಗಮನ ಸಂಗೀತ,—ಸಾಹಿತ್ಯ, ನಾಟಕ, ಹಾಸ್ಯ—ವಿನೋದ, ಆಟ—ನೋಟಗಳಲ್ಲಿ ಸಂಪೂರ್ಣವಾಗಿ ಬೆರೆಯಲು ಅವಕಾಶ ಬಹಳವಾಗಿತ್ತು. ಅಂದರೆ, ಇಂದಿನ ಪ್ರಗತಿಪರ ಜೀವನಯಾತ್ರೆಯಲ್ಲಿ ಈ ವಿಧದ ಕಲಾಸಕ್ತಿಗೆ ಅವಕಾಶವಿಲ್ಲ ಎಂದಲ್ಲ ನನ್ನ ಅರ್ಥ; ಆಗಿನಷ್ಟು ನಿಶ್ಚಿಂತತೆ ಈಗಿಲ್ಲ, ಇಲ್ಲಿಯೂ ಅವರಿಗೆ ಆತುರ, ಗಡಿಬಿಡಿ ತಪ್ಪಿಲ್ಲ—ಎಂಬುದನ್ನು ತಿಳಿಸಲಿಕ್ಕೆ ಮಾತ್ರ. ಇಂದಿನ ನಾಗಾಲೋಟದ ಯಂತ್ರಯುಗದ ಜೀವನಯಾತ್ರೆಯಲ್ಲಿ ಅಂದಿನ ಆ ರಸ ನಿಮಿಷಗಳು ಬೆರೆಯಲು ಸಾಧ್ಯವಿಲ್ಲವೇ ಎಂಬ ಪ್ರಶ್ನೆ ನನ್ನಲ್ಲಿ ಹಲವಾರು ಸಲ ಮೂಡಿದೆ. ಪ್ರಶ್ನೆ ದೊಡ್ಡದು. ಅದಕ್ಕೆ ಉತ್ತರಕೊಡುವ ಸಾಹಸಕ್ಕೆ ನಾನು ಕೈ ಹಾಕಿಲ್ಲ. ಆ ಪ್ರಶ್ನೆ ಮೂಡಿದಾಗ, ಅಂದು-ಇಂದು, ಈ ಎರಡನ್ನೂ ಕಂಡು ಕೊಂಡಿರುವ ನನ್ನ ಕಣ್ಣ ಮುಂದೆ ಸುಳಿದಾಡಿದ ಅಂದಿನ ಜನಜೀವನಕ್ಕೆ ಕನ್ನಡಿ ಹಿಡಿಯಲು ಮಾತ್ರ ಯತ್ನಿಸಿದ್ದೇನೆ. ಏಕೆಂದರೆ, ದೇವರು ನನಗೆ ಕರುಣಿಸಿರುವ ದೀರ್ಘಜೀವನಕ್ಕೆ ಮೂಲಶಕ್ತಿ ಈ ರಸನಿಮಿಷಗಳಲ್ಲಿ ಇದೆ ಎಂದು ನಾನು ಭಾವಿಸಿದ್ದೇನೆ. ಹಾಗೆಯೇ, ಇಂದಿನ ಪ್ರಗತಿಪರ ಜೀವನ ಪರಂಪರೆಗೆ ಅಂದಿನ ಆ ರಸದೃಷ್ಟಿ ಬೆರೆತರೆ, ನಮ್ಮ ಬಾಳು ಇನ್ನೂ ಪುಷ್ಟಿಯುತವಾಗಬಹುದೆಂದೂ ನಂಬಿದ್ದೇನೆ.

ಮೈಸೂರಿನ ರತ್ನಸಿಂಹಾಸನಾಧೀಶ್ವರರು ಎಂದಿನಿಂದಲೂ ವಿದ್ವಜ್ಜನ ಪೋಷ ಕರು, ಕಲಾಭಿಮಾನಿಗಳು, ಮುಕ್ತಹಸ್ತರು. ಅಂತೆಯೇ, ನನ್ನ ನಾಲ್ಕನೆಯ ವರ್ಷದಲ್ಲಿ ಮೈಸೂರು ಅರಮನೆಯ ಹೊಸಿಲನ್ನು ದಾಟಿದ ನಾನು ಇಂದಿಗೂ

ರಾಜಮನೆತನದ ಕೃಪಾಛತ್ರದ ನೆರಳಿನಲ್ಲಿ ನಡೆದು ಬಂದಿದ್ದೇನೆ. ನಾನು ಅರಮನೆಗೆ ಪ್ರವೇಶಮಾಡಿದ ಸನ್ನಿವೇಶ, ಅಲ್ಲಿ ಕಂಡುಂಡ ರಸದೌತಣಗಳು, ನೋಡಿ ತಣಿದ ವೈಭವ ವಿಶೇಷಗಳು, ಜನಜೀವನದ ಕೆಲವು ಚಿತ್ರಗಳು, ನಾನು ಕಂಡ ಕನ್ನಡ ರಂಗಭೂಮಿ, ಕೆಲವು ರಸಿಕಬಾಂಧವರು—ಇವು ಈ ಪುಟ್ಟ ಪುಸ್ತಕದ ವಸ್ತುವಿಶೇಷ. ಈ ರಸಬಿಂದುಗಳನ್ನು ನನ್ನ ಜೀವನಕ್ಕೆ ಧಾರೆಯೆರೆದ ಮೈಸೂರಿನ ರಾಜಮನೆತನಕ್ಕೆ ನಾನು ಚಿರಋಣಿ.

ನನ್ನ ಪರಮಮಿತ್ರರೂ ಕರ್ಣಾಟಕದ ಸಾಹಿತ್ಯಾಚಾರ್ಯರೂ ಆದ ಶ್ರೀಮಾನ್ ಡಿ.ವಿ.ಜಿ.ಯವರು ರಸಿಕರು, ಗಾನಲೋಲರು. ಅವರ ಒಲವನ್ನು ಸಂಪಾದಿಸಬೇಕಾದರೆ ಯಾವ ಸಂಗೀತ ವಿದ್ವಾಂಸರಾದರೂ ಸ್ವಲ್ಪ ಎದೆಮುಟ್ಟಿ ನೋಡಿಕೊಳ್ಳಬೇಕು! ಬಹು ದೊಡ್ಡ ಸಂಗೀತಗಳನ್ನು ಕೇಳಿರುವ ಅವರ ಜ್ಞಾನ ದೊಡ್ಡದು, ವಿಶಾಲವಾದುದು. ಮೊದಲಿಂದಲೂ ನನ್ನ ಹಿತಕೋರುತ್ತ ಬಂದಿರುವವರಲ್ಲಿ ಶ್ರೀಮಾನ್ ಗುಂಡಪ್ಪನವರು ಒಬ್ಬರು. ಈಗ್ಗೆ ಏಳು ವರ್ಷಗಳ ಹಿಂದೆ, ನನ್ನ ತೊಂಭತ್ತನೆಯ ವರ್ಷದ ಹುಟ್ಟಿದ ದಿನದಂದು, 'ನಾ ಕಂಡ ಕಲಾವಿದರು' ಎಂಬ ನನ್ನ ಚೊಚ್ಚಲ ಪುಸ್ತಕ ಕನ್ನಡ ಬಂಧುಗಳ ಕೈ ಸೇರುವಂತೆ ಮಾಡಿದವರು ಈ ಮಿತ್ರರು. ಅವರಿತ್ತ ಬೆಂಬಲ, ಸಹೃದಯ ವಾಚಕರು ಪತ್ರಿಕೋದ್ಯಮಿಗಳಿಂದ ಮುಂದೆ ಬಂದ ಪ್ರೋತ್ಸಾಹಪೂರ್ವಕ ವಿಮರ್ಶೆಗಳಿಂದಾಗಿ ಈ ಎರಡನೆಯ ಪುಸ್ತಕನನ್ನು ಬೆಳಕಿಗೆ ತರುವ ಸಾಹಸಮಾಡಿದ್ದೇನೆ. ಶ್ರೀಯುತ ಗುಂಡಪ್ಪನವರಿಗೂ ವಿಮರ್ಶಕರಿಗೂ ನನ್ನ ಮನಃಪೂರ್ವಕ ವಂದನೆಗಳನ್ನು ಸಲ್ಲಿಸ ಬಯಸುತ್ತೇನೆ.

ನಾನು ಆಗಾಗ ಹೇಳುತ್ತಿದ್ದ ಸಂಗತಿಗಳನ್ನೆಲ್ಲ ನನ್ನ ಮಗ ಚಿ॥ ಸುಬ್ರಹ್ಮಣ್ಯ ಮತ್ತು ಮೊಮ್ಮಗ ಚಿ॥ ಕೃಷ್ಣಮೂರ್ತಿ ಇವರು ಕಾದಿರಿಸದೇ ಇದ್ದ ಪಕ್ಷದಲ್ಲಿ ಈ ಪುಸ್ತಕ ಬೆಳಕಿಗೆ ಬರಲು ಸಾಧ್ಯವಾಗುತ್ತಿರಲಿಲ್ಲ. ನನ್ನೊಡನೆ ಕುಳಿತು, ಸಂಗತಿಗಳನ್ನು ಕ್ರಮಪಡಿಸಿ, ಪುಸ್ತಕವನ್ನು ಒಂದು ರೂಪಕ್ಕೆ ತಂದ ಕೃಷ್ಣಮೂರ್ತಿಗೆ ನನ್ನ ಒಲವಿನ ಆಶೀರ್ವಾದಗಳು.

ಒಂದು ನಿಮಿಷದಲ್ಲಿ ಸರಿ ಎಂದು ತೋರಿದ್ದು ಮರುನಿಮಿಷದಲ್ಲಿ ಸರಿಯಲ್ಲ ಎಂದು ತೋರುವುದು ನನ್ನ ವಯೋಧರ್ಮದ ಗುಣ. ಇದರಿಂದಾಗಿ, ಮುದ್ರಣದ ಸಮಯದಲ್ಲಿ, ಕೆಲವು ಸಲ ಕೊನೆಯ ಘಳಿಗೆಯ ಬದಲಾವಣೆಗಳನ್ನು ಮಾಡುವ ಪ್ರಮೇಯ ಬಂದಿತು. ಸ್ವಲ್ಪವೂ ಮನಸ್ಸಿಗೆ ಆಯಾಸಪಡದೆ, ಸ್ವತಃ ಆಸಕ್ತಿ ತೋರಿ, ಈ ಪುಸ್ತಕವನ್ನು ಅಂದವಾಗಿ ಪ್ರಕಟಿಸಲು ಸಹಾಯಕರಾದ ಕಾವ್ಯಾಲಯದ ಶ್ರೀಮಾನ್ ಕೂಡಲಿ ಚಿದಂಬರಂ ಅವರಿಗೆ ನನ್ನ ವಂದನೆಗಳು.

೧-೧೨-೧೯೬೦

ವಾಸುದೇವಾಚಾರ್ಯ

ಪ್ರಕಾಶಕರ ಮಾತು

ಬೆಂಗಳೂರು ವಿಶ್ವವಿದ್ಯಾನಿಲಯದ 1984-85ರ ಬಿ.ಎ., ಬಿ.ಎಸ್‌ಸಿ., ಮತ್ತು ಬಿ.ಕಾಂ., ತರಗತಿಯ ಪಠ್ಯಪುಸ್ತಕವಾಗಿ ಈ ಪುಸ್ತಕವನ್ನು ಗೊತ್ತು ಪಡಿಸಿರುವುದರಿಂದ ಇದರ ಮೂರನೆಯ ಆವೃತ್ತಿ ಇಷ್ಟು ಬೇಗ ಸಾಧ್ಯವಾಗಿದೆ. ಈ ಸಂದರ್ಭದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಜಿ. ಎಸ್. ಶಿವರುದ್ರಪ್ಪನವರಿಗೂ ಡಾ. ಎಂ. ಚಿದಾನಂದಮೂರ್ತಿ ಎಂ.ಎ. ಪಿ.ಎಚ್.ಡಿ. ಮತ್ತು ಇತರ ಸದಸ್ಯರಿಗೂ ನಮ್ಮ ವಿಶೇಷ ಕೃತಜ್ಞತೆಗಳು.

ಈ ಕೃತಿಯನ್ನು ಕಾವ್ಯಾಲಯದ ಮೂಲಕ ಪುನಃ ಪ್ರಕಟಿಸಲು ಅನುಮತಿ ಇತ್ತ ಎಸ್. ಕೃಷ್ಣಮೂರ್ತಿ ಅವರಿಗೂ ಸಕಾಲದಲ್ಲಿ ಅಂದವಾಗಿ ಮುದ್ರಿಸಿರುವ ಕರ್ನಾಟಕ ಪ್ರೆಸ್ಸಿನ ಜಿ. ಎಸ್. ನಾಗೇಂದ್ರ ಅವರಿಗೂ ನಮ್ಮ ಕೃತಜ್ಞತೆಗಳು.

ಶೇಷಮ್ಮ ಚಿದಂಬರಂ

ವಿಷಯಸೂಚಿಕೆ

	ಲೇಖಕನ ಮಾತು	೫
೧.	ಅರಮನೆಗೆ ಪ್ರವೇಶ	೯
೨.	ಅರಮನೆಯಲ್ಲಿ	೨೯
೩.	ಜನಜೀವನ	೪೭
೪.	ಆಗಿನ ನಾಟಕ ಕಂಪನಿಗಳು	೫೯
೫.	ಇಬ್ಬರು ನಟವರರು	೭೩
೬.	ಕೇಳಿದ ಕೆಲವು ಕಥೆಗಳು	೮೩
೭.	ರಸಿಕರ ಸರಸ	೯೧
೮.	ಕೆಲವು ರಚನಾಪ್ರಸಂಗಗಳು	೧೦೯
	ಕಡೆಯ ನುಡಿ	೧೧೮

[ಶ್ರೀ ದರೋಗ ಚೆಲುವಯ್ಯನವರ ಚಿತ್ರ ಶ್ರೀ ಜಯಚಾಮರಾಜೇಂದ್ರ ಆರ್ಟ್ ಗ್ಯಾಲರಿಯ ಅಧಿಕಾರಿಗಳ ಕೃಪೆಯಿಂದಲೂ ಶ್ರೀ ಎ. ವಿ. ವರದಾಚಾರ್ಯರ ಚಿತ್ರ ಶ್ರೀ ಎಂ. ಯಾಮುನಾಚಾರ್ಯರ ಕೃಪೆಯಿಂದಲೂ ದೊರೆತಿವೆ. ಅವರಿಗೆ ನಮ್ಮ ಕೃತಜ್ಞತೆಯ ವಂದನೆಗಳು.]

೧. ಅರಮನೆಗೆ ಪ್ರವೇಶ

ಅಂದು ಶುಕ್ರವಾರ. ಬೆಳಗಿನ ಜಾವ ಐದು ಘಂಟೆಗೇ ಎದ್ದು ಸ್ನಾನ ಸಂಧ್ಯಾದಿಗಳನ್ನು ಮುಗಿಸಿ ಚಾಮುಂಡಿ ಬೆಟ್ಟವನ್ನು ಹತ್ತಿದೆ. 'ತಾಯೀ! ಚಾಮುಂಡೇಶ್ವರಿ! ಏನೇ ಆಗಲಿ ಈ ದಿನ ಮಹಾರಾಜರಲ್ಲಿ ನನ್ನ ಅಭಿಲಾಷೆಯನ್ನು ನಿವೇದಿಸಿಯೇಬಿಡುತ್ತೇನೆ—ಅಭಯ ನೀಡು. ದೊರೆಗಳ ಕುಲದೇವತೆಯಾದ ನೀನು ಅವರಲ್ಲಿ ನಿಂತು ನನ್ನ ಕರೆಗೆ ಓಗೊಡು ಮಹಾಮಾತೇ!' ಎಂದು ಪ್ರಾರ್ಥನೆ ಸಲ್ಲಿಸಿ ದೀರ್ಘದಂಡ ಪ್ರಣಾಮಮಾಡಿ ಸರಸರನೆ ಬೆಟ್ಟ ಇಳಿಯಲು ಪ್ರಾರಂಭಿಸಿದೆ.

ಬೆಟ್ಟದ ಸಾವಿರ ಮೆಟ್ಟಲುಗಳನ್ನು ಇಳಿದು ಬರುತ್ತಿದ್ದಂತೆ ನನ್ನ ಬಾಲ್ಯದ ಹಲವಾರು ಘಟನೆಗಳು ಮನಸ್ಸಿನಲ್ಲಿ ಮೆಟ್ಟಲು ಮೆಟ್ಟಲಾಗಿ ಮೂಡಿ ಮರೆಯಾದವು. ಆ ನೆನಹುಗಳಲ್ಲಿ ಕೆಲವು ಸಿಹಿ ಹಲವು ಕಹಿ!

ಮುಮ್ಮಡಿ ಕೃಷ್ಣರಾಜ ಒಡೆಯರವರ ವೈದುಷ್ಯ, ವಿದ್ಯಾಪಕ್ಷಪಾತ, ಕಲಾಭಿಮಾನ, ಔದಾರ್ಯಗಳ ಕೀರ್ತಿ, ಮೈಸೂರು ಗಡಿಯನ್ನು ದಾಟಿ ನೆರೆನಾಡುಗಳಿಗೆಲ್ಲಾ ಹಬ್ಬಿತ್ತು. ಮೈಸೂರಿನ ಈ ಕೀರ್ತಿಯಿಂದ ಆಕರ್ಷಿತರಾಗಿ ಮೈಸೂರಿಗೆ ವಲಸೆ ಬಂದು ಮುಮ್ಮಡಿಯವರಲ್ಲಿ ಆಶ್ರಯಪಡೆದ ಅನೇಕ ವಿದ್ವಜ್ಜನರಲ್ಲಿ ನನ್ನ ತೀರ್ಥರೂಪರವರೂ ಒಬ್ಬರು. ಸುಬ್ರಹ್ಮಣ್ಯಾಚಾರ್ಯರೆಂದು ಅವರ ನಾಮಧೇಯ. ಕೊಯಮತ್ತೂರು ಜಿಲ್ಲೆಯ ಚೇವೂರಿನಲ್ಲಿ ಪ್ರಖ್ಯಾತವಾಗಿದ್ದ ವೈದಿಕ ಮನೆತನದಲ್ಲಿ ಹುಟ್ಟಿದವರು. ಹುಟ್ಟಿನಿಂದಲೇ ಅಸಾಧಾರಣ ಜ್ಞಾಪಕಶಕ್ತಿ, ಚಿಕ್ಕ ವಯಸ್ಸಿನಲ್ಲಿಯೇ ಸಂಸ್ಕೃತಸಾಹಿತ್ಯದಲ್ಲಿ ಅಪಾರ ಪಾಂಡಿತ್ಯವನ್ನು ಗಳಿಸಿಕೊಂಡಿದ್ದರು. ಪುಸ್ತಕದ ಸಹಾಯವಿಲ್ಲದೆ ಸಂಸ್ಕೃತ ಭಾಗವತದಂತಹ ಬೃಹದ್ಗ್ರಂಥವನ್ನು ಮೊದಲಿನಿಂದ ಕೊನೆಯವರೆಗೆ ಪೂರ್ಣವಾಗಿ ಬಾಯಿಪಾಠ ಹೇಳುತ್ತಿದ್ದರಂತೆ! ಪಿತೃವಿಯೋಗವಾದಾಗ ನನ್ನ ತಂದೆಗೆ ಇನ್ನೂ ಚಿಕ್ಕ ವಯಸ್ಸು. ಸ್ವಭಾವತಃ ಧರ್ಮಭೀರುಗಳೂ ದೈವಭಕ್ತರೂ ವಿದ್ಯಾರ್ಜನಾಕಾಂಕ್ಷಿಗಳೂ ಆದ ಅವರ ಲೋಕವ್ಯವಹಾರಜ್ಞಾನ ಅಷ್ಟಕಷ್ಟೆ. ಅವರ ಈ ಅನನುಭವ ಸೌಮ್ಯಸ್ವಭಾವಗಳನ್ನು ತಿಳಿದಿದ್ದ ಅವರ ದಾಯಾದಿಗಳು ತಮ್ಮ ಸ್ವಾರ್ಥವನ್ನು ಸಾಧಿಸಲು ಅವನ್ನು ಬಳಸಿಕೊಂಡರು. ನನ್ನ ತಾತನವರು ಕಾಲವಾದೊಡನೆಯೇ ಅವರ ಆಸ್ತಿಪಾಸ್ತಿಗಳಲ್ಲಿ ಹೆಚ್ಚಿನಭಾಗ ತಮಗೆ ಸೇರಬೇಕೆಂದು ವ್ಯಾಜ್ಯಹೂಡಿದರು. ನನ್ನ ತಂದೆಯವರ ಮನಸ್ಸಿಗೆ ಇದರಿಂದ ತುಂಬ

ನೋವುಂಟಾಯಿತಾದರೂ ದಾಯಾದಿಗಳ ವಿರುದ್ಧವಾಗಿ ನ್ಯಾಯಸ್ಥಾನದಲ್ಲಿ ಪ್ರತಿವ್ಯಾಜ್ಯ ಹೂಡಿ ಹೋರಾಡಲು ಮನಸ್ಸು ಬರಲಿಲ್ಲ. ದುಷ್ಟರನ್ನು ಕಂಡರೆ ದೂರವಿರುತ್ತಿದ್ದುದು ಅವರ ಹುಟ್ಟುಗುಣ. ಹಾಗೆಯೇ ಆತ್ಮಸಾಮರ್ಥ್ಯದಲ್ಲಿ ಪೂರ್ಣ ನಂಬಿಕೆ ಅವರಿಗೆ. 'ದುಡಿದು ಉಣ್ಣಲು ಚೇವೂರಾದರೇನು, ಯಾವೂರಾದರೇನು ?' ಎಂದು ಯೋಚಿಸಿ, ದಾಯಾದಮತ್ಸರದಿಂದ ಕಲುಷಿತವಾಗಿದ್ದ ಚೇವೂರನ್ನು ಬಿಟ್ಟು ಹೊರಡಲು ನಿರ್ಣಯಿಸಿದರು. ತಮ್ಮ ತಮ್ಮಂದಿರಾದ ಗುಂಡಾಚಾರ್ಯರಿಗೆ ಅವರು ಈ ನಿರ್ಣಯವನ್ನು ತಿಳಿಸಿದಾಗ ಅವರೂ ಸಹ ಅಣ್ಣಂದಿರ ತೀರ್ಪಿಗೇ ಒಪ್ಪಿದರು. ಸರಿ, ಅಣ್ಣತಮ್ಮಂದಿರಿಬ್ಬರೂ ಸಂಸಾರ ಸಮೇತರಾಗಿ ಚೇವೂರನ್ನು ಬಿಟ್ಟು ಮೈಸೂರು ಕಡೆಗೆ ಪ್ರಯಾಣ ಬೆಳಸಿ ಬೆಂಗಳೂರಿಗೆ ಬಂದರು.

ಪಿತ್ರಾರ್ಜಿತ ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ಬಂದಿದ್ದ ಅಣ್ಣತಮ್ಮಂದಿರಿಗೆ ಈಗ ಉಳಿದಿದ್ದ ಆಸ್ತಿ ಎಂದರೆ ಒಂದೇ, ಹಿರಿಯರು ಅವರಿಗೆ ಕಲಿಸಿದ್ದ ವಿದ್ಯೆ. ಬೆಂಗಳೂರಿನಲ್ಲಿ ಪುರಾಣ ಪ್ರವಚನಗಳನ್ನು ನಡಸುತ್ತ ಜೀವನ ನಡಸಲಾರಂಭಿಸಿದರು. ಈ ಸನ್ನಿವೇಶದಲ್ಲಿ ಅಣ್ಣತಮ್ಮಂದಿರಿಬ್ಬರಿಗೂ ದಾಸಾಚಾರ್ಯರೆಂಬ ಸುಪ್ರಸಿದ್ಧ ವಿದ್ವಾಂಸರ ಪರಿಚಯವಾಯಿತು. ಅವರಲ್ಲಿ ಇಬ್ಬರೂ ಶಾಸ್ತ್ರಾಧ್ಯಯನ ಮಾಡಲಾರಂಭಿಸಿದರು. ನನ್ನ ತಂದೆ ದ್ವೈತ ವೇದಾಂತದಲ್ಲಿ ಅಪಾರ ಪಾಂಡಿತ್ಯವನ್ನು ಗಳಿಸಿಕೊಂಡರು.

ಹೀಗೆ ಬೆಂಗಳೂರಿನಲ್ಲಿ ಕೆಲವು ಕಾಲ ಕಳೆದ ಮೇಲೆ ಮೈಸೂರಿಗೆ ಹೋಗಿ ಅಲ್ಲಿಯೇ ನೆಲಸಬೇಕೆಂಬ ಅಭಿಲಾಷೆಯುಂಟಾಯಿತು, ನನ್ನ ತಂದೆಗೂ ಚಿಕ್ಕಪ್ಪಂದಿರಿಗೂ. ಮೈಸೂರಿಗೆ ಹೋಗಿ ಪ್ರಯತ್ನಿಸಿದರೆ ಮುಮ್ಮಡಿಯವರ ಆಸ್ಥಾನದಲ್ಲಿ ಆಶ್ರಯ ಸಿಕ್ಕಬಹುದೆಂಬ ಆಸೆ ನನ್ನ ತಂದೆಯವರಲ್ಲಿ ದಿನದಿನಕ್ಕೆ ಬೆಳೆಯುತ್ತಿತ್ತು. ಕೊನೆಗೆ ಇಬ್ಬರೂ ಮೈಸೂರಿಗೆ ಹೊರಟರು. ಇವರಿಬ್ಬರೂ ಮೈಸೂರು ಸೇರಿದ್ದು ಮುಮ್ಮಡಿಯವರ ತುಂಬು ಜೀವನದ ಸಂಧ್ಯಾ ಕಾಲದಲ್ಲಿ.

ಆಗ್ಗೆ ಮೈಸೂರಿಗೆ ಬಂದ ವಿದ್ವಾಂಸರು ಪ್ರಭುದರ್ಶನ ಪಡೆಯಲು ವೀಣೆ ವೆಂಕಟಸುಬ್ಬಯ್ಯನವರನ್ನಾಗಲೀ ಅಳಿಯಂದಿರು ಲಿಂಗರಾಜೇ ಅರಸರನ್ನಾಗಲೀ ಆಶ್ರಯಿಸಿ ಅವರ ಮೂಲಕ ಪ್ರಯತ್ನಿಸಬೇಕಾಗಿತ್ತು. ಇವರಿಬ್ಬರೂ ವಿದ್ವಾಂಸರು, ಸಂಗೀತ ಸಾಹಿತ್ಯಪ್ರೇಮಿಗಳು, ವಿದ್ವಜ್ಜನ ಪೋಷಕರು, ಉದಾರಿಗಳಾದ ಶ್ರೀಮಂತರು. ನನ್ನ ಚಿಕ್ಕಪ್ಪ ಭಕ್ಷಿ ವೀಣೆ ವೆಂಕಟಸುಬ್ಬಯ್ಯನವರ ಆಶ್ರಯ ಪಡೆಯಲು ಪ್ರಯತ್ನಿಸಿದರು. ವೆಂಕಟ

ಸುಬ್ಬಯ್ಯನವರ ಮನೆ ಎಂದರೆ ಎರಡನೆಯ ರಾಜಾಸ್ಥಾನವೆಂದರೂ ತಪ್ಪಲ್ಲ. ವಿದ್ವಾಂಸರನ್ನೂ ಕಲಾವಿದರನ್ನೂ ಬಹುಮಾನಿಸುವಲ್ಲಿ ವೆಂಕಟಸುಬ್ಬಯ್ಯನವರು ಅವರ ಪ್ರಭುಗಳಾದ ಮುಮ್ಮಡಿಯವರಂತೆ ಮುಕ್ತಹಸ್ತರು. ಆದ್ದರಿಂದ ವೆಂಕಟಸುಬ್ಬಯ್ಯನವರ ಮನೆಯಲ್ಲಿ ಆಶ್ರಯಪಡೆಯಲು ನನ್ನ ಚಿಕ್ಕಪ್ಪನಿಗೆ ಸುಲಭಸಾಧ್ಯವಾಯಿತು.

ನನ್ನ ತಂದೆಯವರು ಮೈಸೂರಿಗೆ ಬರುವಹೊತ್ತಿಗೆ ಅಳಿಯಂದಿರು ಲಿಂಗರಾಜ ಅರಸರ ಕೀರ್ತಿ ಎಲ್ಲೆಲ್ಲಿಯೂ ಹಬ್ಬಿತ್ತು. ಕೆಲವಾರು ಯಕ್ಷಗಾನಗಳನ್ನು ಬರೆದು ದಕ್ಷರಾದ ನಟರಿಂದ ಅವನ್ನು ಅತ್ಯುತ್ತಮರೀತಿಯಲ್ಲಿ ಆಡಿಸುತ್ತಿದ್ದ ಲಿಂಗರಾಜರು ಉತ್ತಮ ಕವಿಗಳೆಂದೂ ಕಲಾಪ್ರೇಮಿಗಳೆಂದೂ ವಿಖ್ಯಾತರಾಗಿದ್ದರು. ಅವರ ಔದಾರ್ಯವೂ ಅಷ್ಟೇ ಪ್ರಖ್ಯಾತವಾಗಿತ್ತು. ಯಕ್ಷಗಾನ ಕವಿಗಳಾದ ಲಿಂಗರಾಜರಿಗೆ ಸಹಜವಾಗಿಯೇ ಪುರಾಣಗಳಲ್ಲಿ ವಿಶೇಷವಾದ ಆಸಕ್ತಿ. ಅವುಗಳ ಕಥಾಸಂವಿಧಾನ, ಪಾತ್ರರಚನೆ, ವಿಶಿಷ್ಟ ಸನ್ನಿವೇಶಗಳ ಮೂಲ ಐತಿಹ್ಯ ಮುಂತಾದುವನ್ನು ಕುರಿತು ವಿದ್ವಜ್ಜನರೊಡನೆ ಚರ್ಚಿಸುವು ದೆಂದರೆ ಲಿಂಗರಾಜ ಅರಸಿನವರಿಗೆ ಅಚ್ಚುಮೆಚ್ಚು. ಈ ಕಾರಣದಿಂದ ಪುರಾಣಗಳನ್ನು, ಅದರಲ್ಲೂ ಶ್ರೀಮದ್ಭಾಗವತವನ್ನು, ಅತ್ಯಂತ ಲಕ್ಷ್ಯಪೂರ್ವಕವಾಗಿ ಅಧ್ಯಯನಮಾಡಿ ಕಂಠಪಾಠ ಮಾಡಿಕೊಂಡಿದ್ದ ನನ್ನ ತಂದೆಯವರ ಮೇಲೆ ಅರಸರಿಗೆ ಅಪಾರ ವಿಶ್ವಾಸವುಂಟಾದದ್ದರಲ್ಲಿ ಆಶ್ಚರ್ಯವೇನಿಲ್ಲ. ಲಿಂಗರಾಜರ ಆಶ್ರಯ ಪಡೆದಮೇಲೆ ತಂದೆಯವರ ಹೆಸರು ಪ್ರಭುಗಳ ಕಿವಿ ಮುಟ್ಟಲು ಹೆಚ್ಚು ಕಾಲ ಬೇಕಾಗಲಿಲ್ಲ. ಭಾಗವತರಲ್ಲಿ ಅವರಿಗಿದ್ದ ಪ್ರೌಢಿಯ ವಿವರಗಳನ್ನು ಕೇಳಿದ್ದ ಪ್ರಭುಗಳು, ಅರಮನೆಯಲ್ಲಿ ಅವರ ಪುರಾಣ ನಡೆಯಲೆಂದು ಆಜ್ಞೆ ಮಾಡಿದರು. ನನ್ನ ತಂದೆಯವರು ಮುಮ್ಮಡಿ ಕೃಷ್ಣರಾಜ ಒಡೆಯರ ಕೃಪಾ ಕಟಾಕ್ಷಕ್ಕೆ ಪಾತ್ರರಾದದ್ದು ಹೀಗೆ.

ಕೆಲವು ದಿನಗಳು ಪುರಾಣಶ್ರವಣ ಮಾಡುವುದರೊಳಗಾಗಿ ಪ್ರಭುಗಳಿಗೆ ಸಂಗೀತ, ಸಾಹಿತ್ಯ, ವೇದ, ಪುರಾಣಗಳಲ್ಲಿ ನನ್ನ ತಂದೆಯವರಿಗಿದ್ದ ಪ್ರೌಢಿ ಮನದಟ್ಟಾಯಿತು. ಇದರಿಂದಾಗಿ ನನ್ನ ತಂದೆಯವರ ವಿಚಾರದಲ್ಲಿ ಹಬ್ಬಿದ್ದ ಒಂದು ಪ್ರತೀತಿಯನ್ನು ಪರೀಕ್ಷಿಸಿ ನೋಡಬೇಕೆಂಬ ಕುತೂಹಲ ಬೆಳೆಯಿತು ಪ್ರಭುಗಳಿಗೆ. ಆ ಪರೀಕ್ಷೆ ನಡೆದು ಹೋಗಲು ಅವಕಾಶವೊಂದು ತಾನಾಗಿ ಒದಗಿಬಂತು.

ಒಂದು ದಿನ ತಂದೆಯವರು ಪದ್ಧತಿಯಂತೆ, ನಿಯಮಿತವಾದ ಹೊತ್ತಿಗೆ ಸರಿಯಾಗಿ ಪುರಾಣಪ್ರವಚನಕ್ಕಾಗಿ ಅರಮನೆಗೆ ಹೋದರು. ಆದರೆ ಆ

ಹೊತ್ತಿಗೆ ಸರಿಯಾಗಿ ಪ್ರಭುಗಳು ಯಾವುದೋ ಮುಖ್ಯವಾದ ರಾಜಕಾರ್ಯದಲ್ಲಿ ನಿರತರಾಗಿದ್ದುದರಿಂದ ಸ್ವಲ್ಪ ಹೊತ್ತು ಕಾಯಬೇಕೆಂದು ಆಜ್ಞೆಯಾಗಿರುವುದಾಗಿ ಊಳಿಗದವರು ಹೇಳಿದರು. ತಂದೆ ಅಲ್ಲೇ ಒಂದು ಕಂಭವನ್ನೊರಗಿ ಕುಳಿತರು. ಅಷ್ಟು ಹೊತ್ತಾಯಿತು, ಇಷ್ಟು ಹೊತ್ತಾಯಿತು; ಎಷ್ಟು ಹೊತ್ತಾದರೂ ಪ್ರಭುಗಳಿಂದ ಕರೆ ಬರಲೇ ಇಲ್ಲ! ಕೂತು ಕೂತು ತೂಕಡಿಕೆ ಬಲವಾಯಿತು, ತಂದೆಯವರಿಗೆ. ಕೈಯ್ಯಲ್ಲಿದ್ದ ಭಾಗವತದ ಗಂಟನ್ನು ಅಲ್ಲೇ ಪಕ್ಕದಲ್ಲಿಟ್ಟು ಕಂಭದ ಮರೆಯಲ್ಲಿ ಉತ್ತರೀಯವನ್ನೇ ಮುಸುಕು ಹಾಕಿ ಮಲಗಿಬಿಟ್ಟರು! ಒಂದೆರಡು ನಿಮಿಷಗಳೊಳಗಾಗಿ ಗಾಢವಾದ ನಿದ್ರೆ ಬಂದಿತು. ಸಣ್ಣ ಗೊರಕೆಯೂ ಆರಂಭವಾಯಿತು! ಆ ಹೊತ್ತಿಗೆ ಸರಿಯಾಗಿ ಪ್ರಭುಗಳ ಊಳಿಗದವನು ಬಂದ, ತಂದೆಯವರನ್ನು ಪ್ರಭುಗಳ ಸನ್ನಿಧಿಗೆ ಕರೆದುಕೊಂಡು ಹೋಗುವದಕ್ಕೆಂದು. ಅವರು ಮೈಮರೆತು ಮಲಗಿದ್ದಾರೆ! ಅರಮನೆಯಲ್ಲಿ ಎಷ್ಟು ಗಟ್ಟಿಯಾಗಿ ಕೂಗಬಹುದೋ ಅಷ್ಟು ಗಟ್ಟಿಯಾಗಿ ಒಂದಲ್ಲ ನಾಲ್ಕಾರು ಬಾರಿ ಕೂಗಿ ನೋಡಿದ ಊಳಿಗದವನು; ತಂದೆಗೆ ಎಚ್ಚರವಾಗಲಿಲ್ಲ. ತಂದೆಯವರು ನಿಷ್ಠಾವಂತರು, ಅವರ ಮೈಮುಟ್ಟಿ ಎಬ್ಬಿಸುವಂತಿಲ್ಲ; ಪ್ರಭುಗಳು ಕಾದಿರಲೆಂದು ಸುಮ್ಮನಿರುವಂತಿಲ್ಲ! ಎಷ್ಟು ಕೂಗಿದರೂ ಪ್ರಯೋಜನವಿಲ್ಲವೆಂದು ಮನಗಂಡಮೇಲೆ ಊಳಿಗದವನು ಪ್ರಭುಸನ್ನಿಧಾನಕ್ಕೆ ಹೋಗಿ ಇದ್ದ ಸಂಗತಿಯನ್ನು ಅರಿಕೆಮಾಡಿದ. ಪ್ರಭುಗಳ ಮುಖದಲ್ಲಿ ಕಿರುನಗೆ ಮೂಡಿತು. 'ಆಚಾರ್ಯರ ಪಕ್ಕದಲ್ಲಿರುವ ಆ ಭಾಗವತದ ಗಂಟನ್ನು ಸದ್ದುಮಾಡದೆ ಇಲ್ಲಿ ತೆಗೆದುಕೊಂಡು ಬಾ' ಎಂದು ಆಜ್ಞಾಪಿಸಿದರು. ಕಣ್ಣು ಮುಚ್ಚಿ ತೆರೆಯುವುದರೊಳಗಾಗಿ, ಅದು ಪ್ರಭುಗಳ ಕೈಗೆ ಬಂದಿತ್ತು.

ಇಷ್ಟಾದಮೇಲೆ, 'ಆಚಾರ್ಯರನ್ನು ಒಡನೆಯೇ ಎಚ್ಚರಗೊಳಿಸಿ ಕರೆದು ತನ್ನಿ' ಎಂದು ಪ್ರಭುಗಳ ಆಜ್ಞೆಯಾಯಿತು. ಹರಿಕಾರರ ಕೂಗಿನಿಂದ ಎಚ್ಚರಗೊಂಡ ತಂದೆಯವರು ಥಟ್ಟನೆ ಎದ್ದು ಕೂತರು. ಒಡನೆಯೇ ಸಮ್ಮುಖಕ್ಕೆ ಬರಬೇಕೆಂಬ ಪ್ರಭುಗಳ ಆಜ್ಞೆಯನ್ನು ಕೇಳಿ ಭಾಗವತದ ಗಂಟಿಗಾಗಿ ಹುಡುಕಾಡಿದರು! ಆದರೆ ಅದೆಲ್ಲಿ ಸಿಕ್ಕಬೇಕು? 'ಹೊತ್ತಾಯಿತು, ಪ್ರಭುಗಳು ಬಹಳ ಹೊತ್ತಿನಿಂದ ಕಾದಿದ್ದಾರೆ' ಎಂಬ ಹರಿಕಾರನ ಒತ್ತಾಯ ಬಲವಾಯಿತು. ಗ್ರಂಥ ಎಲ್ಲಿ ಹೋಯಿತೋ ಏನಾಯಿತೋ ಎಂದು ವಿಚಾರಿಸುವುದಕ್ಕೆ ಕೂಡ ಅವಕಾಶವಿಲ್ಲ. ಸರಿ, ಗ್ರಂಥವಿಲ್ಲದೆ ಪ್ರಭುಗಳ ಸನ್ನಿಧಿಗೆ ಹೋದದ್ದಾಯಿತು. ಪ್ರಭುಗಳು ತಂದೆಯವರ ಮುಖ ಕಂಡೊಡನೆಯೇ ತಾವು ಅವಸರದ ರಾಜಕಾರ್ಯದಲ್ಲಿದ್ದುದರಿಂದ ತಡವಾಯಿತೆಂದು ಹೇಳಿ ಕೂಡಲೇ ಪುರಾಣವಾಚನವನ್ನು

ಮುಂದುವರಿಸಬೇಕೆಂದು ಸೂಚಿಸಿದರು. ಈ ಮಾತನ್ನು ಕೇಳಿ ತಂದೆಯವರು ಸ್ವಲ್ಪವಾದರೂ ಕಳವಳಗೊಳ್ಳದೆ ಹಿಂದಿನ ದಿನ ತಾವು ಯಾವ ಶ್ಲೋಕಕ್ಕೆ ಪ್ರವಚನವನ್ನು ನಿಲ್ಲಿಸಿದ್ದರೋ ಆದರ ಮುಂದಿನ ಶ್ಲೋಕದಿಂದ ಪುರಾಣ ಪಠಣವನ್ನಾರಂಭಿಸಿದರು. ಗ್ರಂಥದ ನೆರವೇ ಇಲ್ಲದೆ ಶ್ಲೋಕದ ಮೇಲೆ ಶ್ಲೋಕ ಹೇಳುತ್ತ ವಿದ್ವತ್ಪೂರ್ಣವಾದ ವ್ಯಾಖ್ಯೆಯನ್ನು ಕೊಡುತ್ತ ಮುಂದುವರಿದರು. ಸಂಪ್ರದಾಯದಂತೆ ಒಂದೆರಡು ಗಂಟೆಗಳ ಕಾಲ ಹೀಗೆ ಪುರಾಣ ಶ್ರವಣ ನಡೆಯಿತು. ಪ್ರಭುಗಳು ತಂದೆಯವರ ಅಪಾರ ವಿದ್ವತ್ತಿಗೂ ಅಸಾಧಾರಣ ಜ್ಞಾಪಕಶಕ್ತಿಗೂ ಮೆಚ್ಚಿ, ಅವರಿಗೆ ಒಂದು ರತ್ನಹಾರವನ್ನೂ ಉಚಿತವಾದ ಖಿಲ್ಲತ್ತುಗಳನ್ನೂ ದಯಪಾಲಿಸಿ ಗೌರವಿಸಿದರು. ಹೀಗೆ, ನನ್ನ ತಂದೆಗಳಿಗೆ ಮೈಸೂರು ರಾಜಾಸ್ಥಾನದಲ್ಲಿ ಒಂದು ಸ್ಥಿರವಾದ ಸ್ಥಾನ ದೊರೆಯಿತು. ಅವರು ಮೈಸೂರಿನಲ್ಲಿಯೇ ನೆಲಸಿದರು. ಈ ಹೊತ್ತಿಗಾಗಲೇ ನನ್ನ ತಂದೆಯವರ ಮೊದಲ ಹೆಂಡತಿ ವೆಂಕಮ್ಮ, ಶೇಷಮ್ಮನೆಂಬ ಹೆಣ್ಣುಮಗುವನ್ನು ಹೆತ್ತು ಕಾಲವಾಗಿದ್ದರು. ಮದುವೆಯಾದ ಕೆಲವು ದಿನಗಳಲ್ಲೇ ಕೋನಮ್ಮನೆಂಬ ಎರಡನೆಯ ಹೆಂಡತಿಯೂ ಮೃತಿಹೊಂದಿದ್ದರು. ಈಗ ನರಸೀಪುರದ ತಾಲ್ಲೂಕು ಅಶ್ವತ್ಥಪುರ ಅಗ್ರಹಾರದಲ್ಲಿದ್ದ ಗೋಪಾಲಾಚಾರ್ಯರ ಮಗಳು ಕೃಷ್ಣಾಬಾಯಿಯನ್ನು ವಿವಾಹಮಾಡಿಕೊಂಡರು. ಈ ಮಹಾತಾಯಿಯೇ ನನಗೆ ೧೮೬೫ನೆಯ ಮೇ ೧೨ರಂದು ಜನ್ಮವಿತ್ತವಳು. ಒಂದೆರಡು ವರ್ಷದಲ್ಲಿ ನನಗೊಬ್ಬ ತಂಗಿಯೂ ಪ್ರಾಪ್ತಳಾದಳು.

ತಂದೆಯವರಿಗೆ ನನ್ನ ಮೇಲೆ ಅಪಾರ ಪ್ರೇಮ. ಒಂದು ಕ್ಷಣ ನನ್ನನ್ನು ಬಿಟ್ಟಿರುತ್ತಿರಲಿಲ್ಲ. ಮನೆಯಲ್ಲಿರುವಾಗ ಮೂರು ಹೊತ್ತೂ ನನ್ನನ್ನೆತ್ತಿಕೊಂಡು ಭಾಗವತಾದಿಗಳಿಂದ ಶ್ಲೋಕಗಳನ್ನು ಸುಶ್ರಾವ್ಯವಾಗಿ ಹಾಡುತ್ತ ತಿರುಗಾಡುತ್ತಿದ್ದರು. ನನಗೆ ಎರಡು ಎರಡೂವರೆ ವರ್ಷವಾದೊಡನೆಯೇ ನನ್ನನ್ನು ಜತೆಯಲ್ಲಿ ಕರೆದುಕೊಂಡೇ ಅರಮನೆಗೆ ಹೋಗುತ್ತಿದ್ದರು, ಪುರಾಣವಾಚನಕ್ಕೆ. ನನ್ನ ಅರಮನೆಯ ಸಂಬಂಧ ಅಂದಿನಿಂದಲೇ ಮೊದಲಾಗಿತ್ತು. ಎರಡು ಮೂರು ವರ್ಷ ವಯಸ್ಸಿನ ಹಸುಗೂಸಾಗಿದ್ದಾಗಲೇ ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಪ್ರಭುಗಳ ಹಸ್ತಸ್ಪರ್ಶದಿಂದ ಅನುಗ್ರಹೀತನಾಗಿದ್ದೆ! ಆದರೆ ನನ್ನ ತಂದೆಯವರ ಸಂಸಾರ ಬಹುದಿನ ಸುಖ ಕಾಣಲಿಲ್ಲ. ನನಗೆ ಮೂರು ವರ್ಷ ಕಳೆಯುವ ಹೊತ್ತಿಗೆ ದುರ್ದೈವ ಅವರನ್ನು ಕೊಂಡೊಯ್ದು ಸಂಸಾರವನ್ನು ಅನಾಥರನ್ನಾಗಿ ಮಾಡಿತು!

ಚಿಕ್ಕ ವಯಸ್ಸಿನ ಹೆಂಗಸು, ನನ್ನ ತಾಯಿ ಕೃಷ್ಣಾಬಾಯಿ. ಎರಡು ಹಸು

ಕಂದಗಳನ್ನು ಕಟ್ಟಿಕೊಂಡು ಮೈಸೂರಿನಂಥ ದೊಡ್ಡ ಪಟ್ಟಣದಲ್ಲಿ ಏನುತಾನೆ ಮಾಡಿಯಾರು? ತಮ್ಮ ಯಜಮಾನರ ಸೋದರರಾದ ಗುಂಡಾಚಾರ್ಯರ ಆಶ್ರಯ ಪಡೆಯಲು ಪ್ರಯತ್ನಮಾಡಿದರು. ಆದರೆ ಆ ಪ್ರಯತ್ನವೂ ಫಲ ಕಾರಿಯಾಗಲಿಲ್ಲ. ಏಕೆಂದರೆ ಆ ಹೊತ್ತಿಗೆ ಪಂಡಿತಪೋಷಕರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ದಿವಂಗತರಾಗಿದ್ದರು. ಬ್ರಿಟಿಷ್ ಸರ್ಕಾರದವರು ಮುಮ್ಮಡಿಯವರ ಆದಾಯವೆಚ್ಚಗಳ ಪುನರ್ವ್ಯವಸ್ಥೆಗೆ ಆರಂಭಿಸಿದ್ದರು. ಅರಮನೆಯ ಆಶ್ರಯದಲ್ಲಿದ್ದ ಅನೇಕರಿಗೆ ಆ ಆಶ್ರಯ ತಪ್ಪಿಹೋಗುತ್ತದೆಂಬ ಹೆದರಿಕೆ ಬಲವಾಗಿದ್ದ ಕಾಲ ಅದು. ಹೀಗೆ ತನ್ನ ಭಾವನ್ಮೈದುನ ಗುಂಡಾಚಾರ್ಯ ರಿಂದ ತಮಗೆ ಸಹಾಯ ದೊರೆಯುವ ಸಂಭವವಿಲ್ಲವೆಂಬುದು ಖಚಿತವಾದ ಮೇಲೆ ನನ್ನ ತಾಯಿ ತನ್ನ ತಂದೆ ಗೋಪಾಲಾಚಾರ್ಯರನ್ನೇ ಆಶ್ರಯಿಸ ಬೇಕಾಯಿತು. ಚಿಕ್ಕ ವಯಸ್ಸಿನಲ್ಲಿಯೇ ವಿಧವೆಯಾದ ಮಗಳನ್ನೂ ಶೈಶವ ದಲ್ಲಿಯೇ ಅನಾಥರಾದ ಇಬ್ಬರು ಮೊಮ್ಮಕ್ಕಳನ್ನೂ ನೋಡಿ ನನ್ನ ತಾತನ ಹೃದಯ ಕರಗಿ ಕಣ್ಣೀರಾಗಿ ಹರಿಯಿತು. 'ಬೇಕಾದ್ದಾಗಲಿ, ಚಿಂತಿಸಬೇಡ. ವಾಸುವನ್ನು ಅವನ ತಂದೆಯಂತೆ ಪಂಡಿತನನ್ನಾಗಿ ಮಾಡಿ ವಂಶದ ಕೀರ್ತಿ ಯನ್ನು ಉಳಿಸುತ್ತೇನೆ' ಎಂದು ಮಗಳಿಗೆ ಸಮಾಧಾನ ಹೇಳಿ ನನ್ನನ್ನು ಜೊತೆಯಲ್ಲಿ ಕರೆದುಕೊಂಡು ನರಸೀಪುರದಿಂದ ಮೈಸೂರಿಗೆ ಬಂದರು, ಅರಮನೆಯ ಅಧಿಕಾರಿಗಳನ್ನು ಕಂಡು ನನ್ನ ತಂದೆಯವರ ವೇತನವನ್ನು ನನ್ನ ಹೆಸರಿಗೆ ಮಾಡಿಸಬೇಕೆಂದು. ಆದರೆ ನರಸೀಪುರವನ್ನು ಬಿಟ್ಟು ಹೊರಡುವಾಗ ಅಜ್ಜನಿಗೆ ಇದ್ದ ಧೈರ್ಯ ಮೈಸೂರನ್ನು ಸೇರಿದ ಮೇಲೆ ಉಳಿಯಲಿಲ್ಲ.

ಅವರು ಮೈಸೂರಿಗೆ ಬಂದು ನೋಡುವ ಹೊತ್ತಿಗೆ ಅರಮನೆಯ ಆಡಳಿತವೆಲ್ಲ ಪೂರ್ತಿಯಾಗಿ ಬದಲಾಗಿತ್ತು. ಮೇಜರ್ ಎಲಿಯಟ್ ಅವರ ಸೂಚನೆಯಂತೆ ರಂಗಾಚಾರ್ಲು ಅವರು ಮದರಾಸು ಪ್ರಾಂತದಿಂದ ಮೈಸೂರಿಗೆ ಬಂದು ಅರಮನೆಯ ಖರ್ಚು ವೆಚ್ಚಗಳನ್ನು ಒಂದು ಹದಕ್ಕೆ ತರಲೂ ಲೇಣಿದೇಣಿ ಗಳನ್ನು ನಿರ್ಣಯಿಸಲೂ ಮೊದಲು ಮಾಡಿದ್ದರು. ಮುಮ್ಮಡಿಯವರು ಅಧಿಕಾರಚ್ಯುತರಾಗಿದ್ದ ಕಾಲದಲ್ಲಿ ಕೂಡ ತಮ್ಮ ರಾಜಪದವಿಗೆ ತಕ್ಕ ವೈಭವದಿಂದ ತಮ್ಮ ಸ್ಥಾನವನ್ನು ನಡಸಿಕೊಂಡು ಬಂದು, ವಿದ್ವಜ್ಜನ ಪೋಷಣೆ ದೇವಸೇವೆಗಳನ್ನು ನಡಸಿದ್ದರಿಂದ, ಅವರ ಆದಾಯಕ್ಕಿಂತ ಖರ್ಚು ಹೆಚ್ಚಾಗಿ ಸಾಲ ಏರಿತ್ತು. ಮುಮ್ಮಡಿಯವರ ಕಾರುಣ್ಯಭಾವವನ್ನು ಅತಿ ಯಾಗಿ ಉಪಯೋಗಕ್ಕೆ ತಂದುಕೊಂಡು ಹಲವಾರುಮಂದಿ ಅನವಶ್ಯ ಜನರೂ ಸಹ ಅರಮನೆಯ ಪೋಷಣೆಯನ್ನು ಸಾಧಿಸಿಕೊಂಡಿದ್ದರು. ಆದ್ದರಿಂದ

ರಂಗಾಚಾರ್ಲು ಅವರು ಅರಮನೆಯ ಆದಾಯವೆಚ್ಚಗಳ ಪುನರ್ವ್ಯವಸ್ಥೆಗಾಗಿ ಎರಡು ಮಾರ್ಗಗಳನ್ನು ಅವಲಂಬಿಸಬೇಕಾಯಿತು. ಮೊದಲನೆಯದು— ಅರಮನೆಯ ಆಶ್ರಯದಲ್ಲಿದ್ದವರ ಸಂಖ್ಯೆಯನ್ನು ಆದಷ್ಟು ತಗ್ಗಿಸುವುದು; ಮತ್ತು ಅರಮನೆಯ ಇತರ ವೆಚ್ಚಗಳನ್ನು ಆದಷ್ಟು ಹ್ರಸ್ವಮಾಡಿ ಅರಮನೆಯ ವೆಚ್ಚವನ್ನು ಆದಾಯಕ್ಕಿಂತ ಕಡಮೆ ಮಾಡುವುದು; ಎರಡನೆಯದು— ಅರಮನೆಗೆ ಸಾಲ ಕೊಟ್ಟಿದ್ದವರ ಲೆಕ್ಕಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅವರಿಗೆ ನ್ಯಾಯವಾಗಿ ಸಲ್ಲಬೇಕಾದ ಮೊಬಲಗನ್ನು ಗೊತ್ತುಮಾಡಿ ಅರಮನೆಯ ವೆಚ್ಚ ಕಳೆದು ಉಳಿದ ಮೊಬಲಗಿನಿಂದಾಗಲೀ ಬೇರೆ ಮತ್ತಿನ್ನಾವುದಾದರೂ ನಿಧಿಯಿಂದಾಗಲೀ ಆ ಸಾಲವನ್ನು ಪರಿಹರಿಸಲು ವ್ಯವಸ್ಥೆ ಮಾಡುವುದು. ಇಂಥ ಕೆಲಸದಲ್ಲಿ ತೊಡಗಿದ್ದ ರಂಗಾಚಾರ್ಲು ಅವರು ಆಗಿನ ಕಾಲಕ್ಕೆ ಅನೇಕರಿಗೆ ಅಪ್ರಿಯರಾಗಿ ಪರಿಣಮಿಸಿದ್ದುದು ಅನಿವಾರ್ಯವಾಗಿತ್ತು. ಅವರು ಮಾಡಲಿದ್ದ ಹೊಸ ವ್ಯವಸ್ಥೆಯಲ್ಲಿ ತಮ್ಮ ಆದಾಯಕ್ಕೆ ಊನ ಬರದಂತೆ ನೋಡಿಕೊಳ್ಳ ಬೇಕೆಂದು ಅವರನ್ನು ಪ್ರಾರ್ಥಿಸಲು ನೂರಾರು ಜನರು ಅವರ ಮನೆ ಮತ್ತು ಕಛೇರಿಯನ್ನು ಮುತ್ತಿರುತ್ತಿದ್ದರು. ಈ ಜನರ ಕಾಟದಿಂದ ಅವರು ಯಾರಿಗೂ ಭೇಟಿ ಕೊಡುತ್ತಿರಲಿಲ್ಲ. 'ಸಂಬಂಧಪಟ್ಟ ದಾಖಲೆಗಳನ್ನು ನೋಡಿ ನ್ಯಾಯವಾಗಿ ನಿರ್ಣಯಿಸುತ್ತೇನೆ' ಎಂದು ಹೇಳಿಕಳಿಸುತ್ತಿದ್ದರು.

ಇಂಥ ಪರಿಸ್ಥಿತಿಯಲ್ಲಿ ನನ್ನ ಅಜ್ಜನಿಗೆ ರಂಗಾಚಾರ್ಲು ಅವರ ಭೇಟಿ ಹೇಗೆ ದೊರೆತೀತು? ಆದರೂ ಎದೆಗೆಡಲಿಲ್ಲ ಅವರು. ಪಟ್ಟಾಗಿ ವಾರ ವಾರಗಳಾದರೂ ಪ್ರತಿದಿನವೂ ತಪ್ಪದಂತೆ, ರಂಗಾಚಾರ್ಲು ಅವರ ಕಛೇರಿಗೆ ಹೋಗಿ ಅವರನ್ನು ಕಂಡು ಮಾತಾಡಲು ಪ್ರಯತ್ನಿಸುತ್ತಲೇ ಬಂದರು. ಹೀಗೆ ಕೆಲವು ವಾರ ಬಿಡದೆ ಪ್ರಯತ್ನಪಟ್ಟ ಮೇಲೆ ಒಂದು ದಿನ ರಂಗಾಚಾರ್ಲು ಅವರು ತಾತನನ್ನು ಭೇಟಿಗೆ ಕರೆಸಿಕೊಂಡರು. ನನ್ನ ಅಜ್ಜನ ಆನಂದಕ್ಕೆ ಪಾರವೇ ಇಲ್ಲ. ತಮ್ಮ ಪ್ರಯತ್ನವೂ ನನ್ನ ಅದೃಷ್ಟವೂ ಫಲಿಸಿತೆಂದು ಹಿಗ್ಗಿದರು. ಸಿಕ್ಕಿದ ಈ ಸಂದರ್ಭ ವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕೆಂದು ನಿರ್ಧರಿಸಿ ಮೂರು ಮೂರೂವರೆ ವರ್ಷದ ನನ್ನನ್ನೂ ಕಂಕುಳಲ್ಲೆತ್ತಿಕೊಂಡು ರಂಗಾಚಾರ್ಲು ಅವರನ್ನು ಕಂಡರು. ನನ್ನ ತಂದೆಯವರ ಸಂಸಾರಕ್ಕೆ ಒದಗಿದ್ದ ವಿಪತ್ತನ್ನೂ ನಾನೂ ನನ್ನ ತಂಗಿಯೂ ಅನಾಥರಾಗಿರುವುದನ್ನೂ ದಿವಂಗತ ಪ್ರಭುಗಳಿಗೆ ನನ್ನ ತಂದೆ ಸುಬ್ರಹ್ಮಣ್ಯಾಚಾರ್ಯರಲ್ಲಿ ಎಂಥ ಪ್ರೇಮ ಗೌರವಗಳಿದ್ದವೆಂಬು ದನ್ನೂ ವಿವರಿಸಿ ಅವರಿಗಿದ್ದ ವಿದ್ವತ್ಸಂಭಾವನೆಯನ್ನು ನನ್ನ ಹೆಸರಿಗೆ ಮಂಜೂರು ಮಾಡಿಸಿಕೊಡಬೇಕೆಂದೂ ಬೇಡಿಕೊಂಡರು. ಇದೆಲ್ಲವನ್ನು ಸಾವಧಾನವಾಗಿ

ಕೇಳಿ 'ಇಂದಿನ ಪರಿಸ್ಥಿತಿಯಲ್ಲಿ ಮಗುವಿಗೆ ಅರಮನೆಯಿಂದ ಯಾವ ಸಹಾಯವೂ ದೊರೆಯಲು ಸಾಧ್ಯವಿಲ್ಲ' ಎಂದು ಖಂಡಿತವಾಗಿ ಹೇಳಿ ಕಳುಹಿಸಿಬಿಟ್ಟರು ರಂಗಾಚಾರ್ಲು. ಭೂಮಿಗೆ ಇಳಿದುಹೋದರು ನನ್ನ ತಾತ. ಆದರೂ ಹಿಡಿದ ಕೆಲಸವನ್ನು ಸಾಧಿಸಿಯೇತೀರಬೇಕೆಂಬ ಛಲ ಅವರನ್ನು ಮತ್ತೆ ಪ್ರಯತ್ನದ ಹಾದಿಯಲ್ಲಿ ದೂಡಿತು; ಮತ್ತೆ ರಂಗಾಚಾರ್ಲು ಅವರ ಕಛೇರಿಯ ಬಾಗಿಲು ಕಾಯುವುದಕ್ಕೆ ಪ್ರಾರಂಭಮಾಡಿದರು. ಕೆಲವು ದಿವಸಗಳ ಬಳಿಕ ಭೇಟಿಗೆ ಅವಕಾಶವೇನೋ ದೊರೆಯಿತು. ಆದರೆ ಅವರನ್ನು ನೋಡಲು ಹೋದ ಹೊತ್ತು ಚೆನ್ನಾಗಿರಲಿಲ್ಲವೆಂದು ಕಾಣುತ್ತದೆ. ಯಾವುದೋ ವಿಚಾರಮಗ್ನ ರಾಗಿದ್ದ ರಂಗಾಚಾರ್ಲು ಅವರು ನನ್ನ ತಾತಂದಿರನ್ನು ಕಾಣುತ್ತಲೇ ಅನವಶ್ಯ ವಾದ ಕೋಪವ ಕಾರಿಸಿಕೊಂಡು 'ಏನಯ್ಯ, ಸಾಲಕೊಟ್ಟವನ ಹಾಗೆ ಬಿಡದೆ ಬೆನ್ನು ಹತ್ತಿದ್ದೀಯೆ! ಆಗಲೇ ಹೇಳಲಿಲ್ಲವೇ? ಸದ್ಯಕ್ಕೆ ಯಾವ ಸಹಾಯವೂ ಸಾಧ್ಯವಿಲ್ಲವೆಂದು? ಹೊರಡು ಇಲ್ಲಿಂದ, ಮತ್ತೆ ಇಲ್ಲಿಗೆ ಕಾಲಿಟ್ಟೀಯೆ' ಎಂದು ಗುಡುಗಿದರು. ಸ್ವಾಭಿಮಾನಿಯಾದ ತಾತನಿಗೆ ಮೈಯೆಲ್ಲ ಬೆಂಕಿಯಾಯಿತು. 'ಸ್ವಾಮಿ! ಜನರ ಯೋಗ್ಯತೆ ತಿಳಿದು ಮಾತನಾಡಬೇಕು. ಸುಮ್ಮನೆ ನಾಲಿಗೆ ಹರಿಯಬಿಡಬಾರದು. ಸರಿ ಇನ್ನು ಮುಂದೆ ನಿಮ್ಮ ಮುಖ ನೋಡುವುದಿಲ್ಲ' ಎಂದು ಹೇಳಿ ಅಲ್ಲಿಂದ ಹೊರಟುಬಿಟ್ಟರು.

ಅಜ್ಜನ ಗಂಭೀರ ಮತ್ತು ಕೆಚ್ಚೆದೆಯ ನಡತೆ, ರಂಗಾಚಾರ್ಲು ಅವರ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಿತು ಎಂದು ತೋರುತ್ತದೆ. ಅವರ ಅರ್ಜಿಯನ್ನು ತೆಗೆಸಿ ಅದನ್ನು ಮತ್ತೆ ಪರಿಶೀಲಿಸಿದರು. ಏತಕ್ಕಾಗಿ ಅಜ್ಜ ಅಷ್ಟು ಒದ್ದಾಡುತ್ತಿದ್ದಾರೆಂಬುದು ಅವರಿಗೆ ಅರ್ಥವಾಗಿರಬೇಕು. ತೀರ ಚಿಕ್ಕ ವಯಸ್ಸಿನಲ್ಲೇ ನಿರಾಶ್ರಿತನಾಗಿದ್ದ ಮಗುವಿಗೆ ಒಂದು ಉತ್ತಮ ಭವಿಷ್ಯವನ್ನು ಕಲ್ಪಿಸುವುದಕ್ಕಾಗಿಯೇ ಅವರು ಅಷ್ಟೊಂದು ಕಾಲವನ್ನೂ ಶ್ರಮವನ್ನೂ ವ್ಯಯಮಾಡುತ್ತಿರುವರೆಂದೂ ಹಾಗಿಲ್ಲದಿದ್ದ ಪಕ್ಷದಲ್ಲಿ ಅಷ್ಟು ಅಭಿಮಾನ ಶಾಲಿಯೂ ಸ್ವಾತಂತ್ರ್ಯಶೀಲನೂ ಆದ ಆ ವ್ಯಕ್ತಿ ಕೈನೀಡಿ ಬೇಡುತ್ತಿರಲಿಲ್ಲ ವೆಂಬುದನ್ನೂ ಮನಗಂಡರು. ಕಛೇರಿಯ ಕೆಲಸ ಮುಗಿದಮೇಲೆ ರಂಗಾಚಾರ್ಲು ಅವರೇ ನಮ್ಮ ಮನೆಗೆ ಬಂದು ನನ್ನನ್ನು ಕರೆಸಿ ನನ್ನ ತಲೆಯಮೇಲೆ ಕೈಯಾಡಿ ಸುತ್ತ 'ಗೋಪಾಲಾಚಾರ್ಯರೇ ನಿಮ್ಮ ಮೊಮ್ಮಗನಿಗೆ ತಿಂಗಳಿಗೆ ಹದಿನೈದು ಹಣ (ಸುಮಾರು ನಾಲ್ಕೂವರೆ ರೂಪಾಯಿ) ಸಂಬಳ ಸಂದಾಯವಾಗುವಂತೆ ಏರ್ಪಾಡು ಮಾಡಿದ್ದೇನೆ. ಏನೋ ಕೆಲಸದ ಆತುರದಲ್ಲಿದ್ದಾಗ ನಿಮ್ಮ ಮೇಲೆ ಸ್ವಲ್ಪ ಕಠಿಣವಾಗಿ ಮಾತನಾಡಿದೆ. ಅದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಡಿ.

ಮರೆತುಬಿಡಿ. ವಾಸು ಅವನ ತಂದೆಗಿಂತ ದೊಡ್ಡ ವಿದ್ವಾಂಸನಾಗಬೇಕೆಂಬುದೇ ನನ್ನ ಅಪೇಕ್ಷೆ!' ಎಂದು ಹೇಳಿ ನನ್ನನ್ನು ಆಶೀರ್ವದಿಸಿ ಹೊರಟುಹೋದರು!

ತಾವು ಮಾಡಿದ ಪ್ರಯತ್ನ ಕೈಗೂಡಿತಲ್ಲ ಎಂದು ಸಂತೋಷ ಉಕ್ಕಿಬಂತು ತಾತನಿಗೆ. ಆ ಸಂತೋಷದ ಭರದಲ್ಲಿ ನನ್ನನ್ನು ನನ್ನ ತಂದೆಗಿಂತ ದೊಡ್ಡ ಸಂಸ್ಕೃತ ವಿದ್ವಾಂಸನನ್ನಾಗಿ ಪುರಾಣಿಕನನ್ನಾಗಿ ಮಾಡಬೇಕೆಂಬ ಉತ್ಸಾಹವೂ ಮೂಡಿತು ಅವರ ಮನಸ್ಸಿನಲ್ಲಿ. ಕೆಲವು ತಿಂಗಳುಗಳಲ್ಲಿ ನನಗೆ ಚೌಲಕರ್ಮಾದಿಗಳನ್ನು ನೆರವೇರಿಸಿ ಅಕ್ಷರಾಭ್ಯಾಸಮಾಡಿಸಿದರು. ಅನಂತರ ನನ್ನನ್ನು ಮೈಸೂರಿಗೆ ಕರೆತಂದು ಪೆರಿಯಸ್ವಾಮಿ ತಿರುಮಲಾಚಾರ್ಯರಲ್ಲಿ ಸಂಸ್ಕೃತವನ್ನು ವ್ಯಾಸಂಗ ಮಾಡಲು ಶಿಷ್ಯವೃತ್ತಿಗೆ ಸೇರಿಸಿದರು.

ಆಗ್ಗೆ ಮೈಸೂರಿನಲ್ಲಿ ಪೆರಿಯಸ್ವಾಮಿ ತಿರುಮಲಾಚಾರ್ಯರದು ಬಹು ದೊಡ್ಡ ಹೆಸರು. ಸಂಸ್ಕೃತ ಪಾಠ ಹೇಳುವುದರಲ್ಲಿ ಅವರು ನಿಸ್ಸೀಮರೆಂಬ ಖ್ಯಾತಿ ಬೆಳೆದಿತ್ತು. ಸಂಸ್ಕೃತಭಾಷೆ ಸಾಹಿತ್ಯಗಳಲ್ಲಿ ಅವರಿಗಿದ್ದ ಆಳವಾದ ಜ್ಞಾನ, ತಮ್ಮ ಅಪಾರಜ್ಞಾನವನ್ನು ತಮ್ಮ ವಿದ್ಯಾರ್ಥಿಗಳಿಗೆ ಹಂಚುವುದರಲ್ಲಿ ಅವರಿಗಿದ್ದ ಉತ್ಸಾಹ, ವಿದ್ಯಾರ್ಥಿಗಳನ್ನು ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗಿಂತ ಹೆಚ್ಚಾಗಿ ಕಾಣುತ್ತಿದ್ದ ಅವರ ಶಿಷ್ಯವಾತ್ಸಲ್ಯ, ಇವು ಪೆರಿಯಸ್ವಾಮಿಗಳನ್ನು ಮೈಸೂರಿನ ಆದರ್ಶಗುರುಗಳನ್ನಾಗಿ ಮಾಡಿದ್ದವು. ಅವರ ರಸಜ್ಞತೆ ಕೂಡ ಅಪೂರ್ವವಾದುದು. ವಿದ್ಯಾರ್ಥಿಗಳಿಗೆ ಪಾಠ ಹೇಳುವಾಗಲೂ ಸಹ ಒಂದು ರಸಘಟ್ಟದ ನಡುವೆ ಪಾಠವನ್ನು ನಿಲ್ಲಿಸದೆ ಆ ಘಟ್ಟ ಮುಗಿಯುವವರೆಗೂ ಪಾಠ ಹೇಳುತ್ತಿದ್ದರು. ಇವರು ಮೈಸೂರಿನ ಸದ್ವಿದ್ಯಾಪಾಠಶಾಲೆಯಲ್ಲಿ ಅಧ್ಯಾಪಕರಾಗಿದ್ದಾಗ ಒಮ್ಮೆ ಇವರ ಪಾಠಕ್ರಮವನ್ನು ಪರೀಕ್ಷಿಸಲು ಬಂದ ಇನ್‌ಸ್ಪೆಕ್ಟರು ಇವರು 'ವೇಣೀಸಂಹಾರ ನಾಟಕ'ವನ್ನು ಪಾಠ ಹೇಳುವ ವೈಖರಿಗೆ ಬೆರಗಾಗಿ ಪಾಠ ಮುಗಿಯುವವರೆಗೆ ತಾವೂ ವಿದ್ಯಾರ್ಥಿಗಳೊಡನೆ ಕುಳಿತು ಕೇಳಿದರು. ಅಷ್ಟರಮಟ್ಟಿಗಿತ್ತು ಪೆರಿಯಸ್ವಾಮಿ ತಿರುಮಲಾಚಾರ್ಯರ ವಿದ್ವತ್ತು, ನಿರೂಪಣಾ ಸಾಮರ್ಥ್ಯ.

ಪೆರಿಯಸ್ವಾಮಿಯವರಲ್ಲಿ ಕೆಲವು ವರ್ಷ ವಿದ್ಯಾಭ್ಯಾಸಮಾಡಿದ ಮೇಲೆ ಪ್ರೌಢ ವಿದ್ಯಾಭ್ಯಾಸವನ್ನು ಮಾಡಿಸುವ ಉದ್ದೇಶದಿಂದ ನನ್ನ ಅಜ್ಜ ನನ್ನನ್ನು ಮೈಸೂರು ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಗೆ ಸೇರಿಸಿದರು.

ಪಾಠಶಾಲೆಗೆ ನಾನು ಹೋಗುತ್ತಿದ್ದಾಗ ನಾನು ಹಾಕಿಕೊಳ್ಳುತ್ತಿದ್ದ ವೇಷ ಭೂಷಣಗಳ ವೈಖರಿಯ ಚಿತ್ರ ಬರೆಯುವ ಶಕ್ತಿ ನನಗಿರಬಾರದಾಗಿತ್ತೆ ಎಂದೆನ್ನಿಸುತ್ತದೆ ನನಗೆ! ತಾಯಿಯ ಮುದ್ದಿನ ಮಗನಾಗಿ ಬೆಳೆದಿದ್ದ ನನಗೆ ಕಯ್ಯಲ್ಲಿ

ಬೆಳ್ಳಿ ಕಾಪು; ಕಾಲಲ್ಲಿ ಬೆಳ್ಳಿಯ ಕಾಲಂದಿಗೆ! ನನ್ನ ವೇಷಭೂಷಣಗಳು ನನಗೇ ತೀರಾ ಅನಾಗರಿಕವಾಗಿ ಕಾಣಿಸಿದವು. ಆದ್ದರಿಂದ ಮಹಾ ಪಾಠಶಾಲೆಯ ವಿದ್ಯಾರ್ಥಿಗೆ ಒಪ್ಪುವ ನಾಗರಿಕತೆಯನ್ನು ಮೆರೆಯಬೇಕೆಂದು ತಾಯಿಯ ಮಾತನ್ನೂ ಲಕ್ಷಿಸದೆ ಅವನ್ನೆಲ್ಲ ಕಿತ್ತೆಸೆದು 'ನಾಗರಿಕನಾದೆ!'

ಪಾಠಶಾಲೆಯಲ್ಲಿ ನನಗೆ ದೊರೆತ ಮೊದಲನೆಯ ಗೆಳೆಯರೆಂದರೆ ಮಂಡ್ಯದ ಶ್ಯಾಮಾಚಾರ್ಯರು. ನನಗಿಂತ ಎರಡು ಮೂರು ವರ್ಷ ಹಿರಿಯರಾದ ಇವರು ಪಾಠಶಾಲೆಯಲ್ಲಿ ನನ್ನ ಮಾರ್ಗದರ್ಶಿ-ಮಿತ್ರರಾದರು. ನನ್ನ ತಾಯಿಗೆ ಶ್ಯಾಮಾಚಾರ್ಯರಲ್ಲಿ ನಂಬಿಕೆ. 'ಶ್ಯಾಮಣ್ಣ, ನಮ್ಮ ವಾಸುವಿಗೆ ಏನೂ ತಿಳಿಯದು. ಅವನನ್ನು ಯಾವಾಗಲೂ ನಿನ್ನ ಸಂಗಡಲೇ ಇಟ್ಟುಕೊಂಡು ಜಾಗರೂಕತೆಯಿಂದ ನೋಡಿಕೊಳ್ಳಪ್ಪಾ' ಎನ್ನುತ್ತಿದ್ದರು ನನ್ನ ತಾಯಿ. ಆದರೆ, ನಾನು ನನ್ನ ತಾಯಿ ಭಾವಿಸಿಕೊಂಡಷ್ಟು ಸಾಧುಪ್ರಾಣಿಯಾಗಿರಲಿಲ್ಲ! ನನ್ನ ಸಹಪಾಠಿಗಳಾಗಿದ್ದ ಹುಟ್ಟಳ್ಳಿದುರ್ಗದ ಶ್ರೀಕಂಠಶಾಸ್ತ್ರಿ, ಕಳಲೆ ನರಸಿಂಹಾಚಾರ್ಯ, ಪರವಸ್ತು ರಾಮಾನುಜಾಚಾರ್ಯ, ಆನಂದ ಆಳ್ವಾರ್, ವೆಂಕಟರಮಣಶ್ರೌತಿ, ಇವರಲ್ಲಿ ನಾನು ತುಂಬ ಕುಚೇಷ್ಟೆ ಮಾಡುವ ಹುಡುಗನೆಂದೂ ಶ್ಯಾಮಾಚಾರ್ಯ ಅದಕ್ಕೆ ಬೆಂಬಲಕೊಡುವ ತುಂಟನೆಂದೂ ಪ್ರಸಿದ್ಧಿಯಿತ್ತು!

ನಮ್ಮಿಬ್ಬರ ಕೈವಾಡಕ್ಕೆ ಉದಾಹರಣೆಯಾದ ಈ ಒಂದು ಪ್ರಸಂಗವನ್ನು ನೆನೆಸಿಕೊಂಡರೆ ಈಗಲೂ ನಗು ಬರುತ್ತದೆ ನನಗೆ. ಪುಣ್ಯತಿಥಿ ಪರ್ವಕಾಲಗಳಲ್ಲಿ ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ಹೋಗಿ ಕಾವೇರಿ ಸ್ನಾನಮಾಡಿ ಶ್ರೀರಂಗನಾಥನ ದರ್ಶನ ಮಾಡಿಕೊಂಡು ಬರುವುದು ಆಗ್ಗೆ ಸರ್ವತ್ರ ಪ್ರಚಾರದಲ್ಲಿದ್ದ ಪದ್ಧತಿ. ಈಗಿನಂತೆ ಆಗ ವಾಹನಸೌಕರ್ಯಗಳು ಅಷ್ಟಾಗಿರಲಿಲ್ಲವಾಗಿ ಕಾಲುನಡಗೆಯಿಂದಲೇ ಹೋಗುವುದು ಸಾಮಾನ್ಯವಾಗಿತ್ತು. ಯಾವುದೋ ಒಂದು ಪುಣ್ಯತಿಥಿಯಂದು ನಾನೂ ಶ್ಯಾಮಾಚಾರ್ಯರೂ ಸ್ನಾನಕ್ಕಾಗಿ ಪಟ್ಟಣಕ್ಕೆ ಹೋಗಬೇಕೆಂದು ನಿರ್ಧರಿಸಿದೆವು. ಬೆಳಗಿನ ಜಾವಕ್ಕೆ ಮೊದಲೇ ಎದ್ದು ಇಬ್ಬರೂ ಹೊರಟೆವು. ಆ ಹೊತ್ತಿಗಾಗಲೇ ದಾರಿಯ ತುಂಬ ಜನರ ಓಡಾಟ ಪ್ರಾರಂಭವಾಗಿತ್ತು. ನಮ್ಮ ಜತೆಯಲ್ಲಿ ಅಷ್ಟೊಂದು ಮಂದಿ ನಡೆದು ಬರುತ್ತಿರುವುದನ್ನು ನೋಡಿದ ಮೇಲೆ ಅವರ ಮೇಲೆ ಏನಾದರೊಂದು ಹಾಸ್ಯದ ಚಟಾಕಿಯನ್ನು ಹಾರಿಸಿ ನೋಡಬೇಕೆಂಬ ಅಭಿಲಾಷೆ ಮೂಡಿತು ನಮ್ಮಿಬ್ಬರಲ್ಲೂ. ಏನು ಮಾಡಬೇಕೆಂದು ನಮ್ಮನಮ್ಮಲ್ಲಿಯೇ ಪಿಸುಮಾತಾಡಿಕೊಂಡೆವು. ಶ್ಯಾಮಾಚಾರ್ಯರು ಕಿವುಡನಂತೆ ನಟಿಸಬೇಕೆಂದೂ ನಾನು ಮೂಕನಂತೆ ನಟಿಸಬೇಕೆಂದೂ ನಮ್ಮಿಬ್ಬರ ಒಗ್ಗೆ ಜನರು ಕನಿಕರಪಡುವುದನ್ನು

ನೋಡಿ ನಮ್ಮೊಳಗೇ ನಾವು ನಗತಕ್ಕದ್ದೆಂದೂ ಗೊತ್ತುಮಾಡಿಕೊಂಡೆವು. ಸರಿ, ಸ್ವಲ್ಪ ವೇಗವಾಗಿ ನಡೆದು ಮುಂದೆ ಹೋಗುತ್ತಿದ್ದ ಪ್ರಯಾಣಿಕರ ಗುಂಪೊಂದನ್ನು ಸೇರಿಕೊಂಡು ನಮ್ಮ ನಟನೆಯನ್ನು ಪ್ರಾರಂಭಮಾಡಿದೆವು. ನಮ್ಮನ್ನು ಕಂಡು ಸುತ್ತಮುತ್ತಲಿದ್ದ ಪ್ರಯಾಣಿಕರೆಲ್ಲರಿಗೂ ಕನಿಕರ! ಪಾಪ, ಕಿವುಡ ಮೂಕರಾಗಿದ್ದರೂ ಶ್ರದ್ಧೆಯಿಂದ ತೀರ್ಥಸ್ನಾನಕ್ಕೆ ಬರುತ್ತಿದ್ದಾರಲ್ಲ ಎಂಬ ಮೆಚ್ಚುಗೆ. ಶ್ರೀರಂಗಪಟ್ಟಣವನ್ನು ಸೇರಿ ನದಿಯಲ್ಲಿ ಸ್ನಾನಕ್ಕಿಳಿಯುವ ವರೆಗೂ ನಡದೇ ನಡೆಯಿತು ಈ ನಾಟಕ. ಘಟ್ಟದಲ್ಲಿ ಸ್ನಾನಕ್ಕಿಳಿದು ನದಿಯಲ್ಲಿ ನಿಂತೊಡನೆಯೇ ಕಾವೇರಿ ತಾಯಿಯ ಅನುಗ್ರಹದಿಂದ 'ಶಾಪ' ವಿಮೋಚನೆ ಯಾಯಿತು! ಸಂಕಲ್ಪ ಮಂತ್ರೋಚ್ಚಾರಣೆಗಳು ಸ್ಫುಟವಾಗಿ, ಗಂಭೀರವಾಗಿ ಆರಂಭವಾದುವು ಮೂಕನ ಮುಖದಿಂದ; ಆಡಿದ್ದೆಲ್ಲ ಕೇಳಿಸಿತು ಕಿವುಡನಿಗೆ! ಅದುವರೆಗೂ ತಮ್ಮ ಮೇಲೆ ಚೆಲ್ಲಾಟ ನಡೆಸಿ ತಮ್ಮನ್ನು ಮೂರ್ಖರನ್ನಾಗಿ ಮಾಡಿದರಲ್ಲ ಎಂದು ನಮ್ಮ ಜತೆಯಲ್ಲಿ ಬಂದಿದ್ದವರಿಗೆ ನಮ್ಮ ಮೇಲೆ ಕೋಪ ಒಂದು ಕಡೆ; ಇನ್ನೊಂದು ಕಡೆ ನಮ್ಮ ಚಾತುರ್ಯ ನೋಡಿ ಮೆಚ್ಚಿಗೆ, ಆ ಹಾಸ್ಯ ಪ್ರಸಂಗ ನೆನೆದು ನಗು!

ಪೆರಿಯಸ್ವಾಮಿ ತಿರುಮಲಾಚಾರ್ಯರಲ್ಲಿ ಸಂಸ್ಕೃತಾಭ್ಯಾಸ ಮಾಡು ತ್ತಿದ್ದಾಗಲೂ ಅಷ್ಟೆ, ಅನಂತರ ಪಾಠಶಾಲೆಯಲ್ಲಿ ಸಜ್ಜಯಂ ತಾತಾಚಾರ್ಯರಲ್ಲಿ ಶಿಷ್ಯವೃತ್ತಿ ಮಾಡುತ್ತಿದ್ದಾಗಲೂ ಅಷ್ಟೇ, ಹೇಳಿಕೊಟ್ಟ ಪಾಠಗಳನ್ನು ಓದಿ ಒಪ್ಪಿಸುತ್ತಿದ್ದೆನಾದರೂ ನನಗೆ ಸಂಸ್ಕೃತವನ್ನು ಕಲಿತು ದೊಡ್ಡ ವಿದ್ವಾಂಸನಾಗ ಬೇಕೆಂಬ ಅಭಿಲಾಷೆಯೇ ಇರಲಿಲ್ಲ. ವಾಸ್ತವವಾಗಿ ನನಗೆ ಆ ಪಾಠದಲ್ಲಿ ಆಸಕ್ತಿಯೇ ಅಷ್ಟಾಗಿರಲಿಲ್ಲ. ಆದರೆ ಕೊಟ್ಟ ಪಾಠವನ್ನು ಸರಿಯಾಗಿ ಒಪ್ಪಿಸ ದಿದ್ದರೆ ಶಿಕ್ಷೆಗೆ ಗುರಿಯಾಗಬೇಕಾಗುತ್ತಿತ್ತು. ಹೀಗೆ ಶಿಕ್ಷೆಗೆ ಗುರಿಯಾಗಿ ಸಹಪಾಠಿಗಳ ಮುಂದೆ ಅವಮಾನಕ್ಕೀಡಾಗಲು ಎಂದೂ ಸಿದ್ಧನಿರಲಿಲ್ಲ ನಾನು. ಏಕೆಂದರೆ ಬಾಲ್ಯದಿಂದಲೂ ನನಗೆ ಸ್ವಾಭಿಮಾನ ಹೆಚ್ಚು, ಪ್ರಾಯಶಃ ಅಜ್ಜನ ಉಡುಗೆರೆಯೋ ಏನೋ!

ಸ್ವಾಭಿಮಾನ ಎಂದಾಗ ಒಂದು ಪ್ರಸಂಗ ನೆನಪಿಗೆ ಬರುತ್ತದೆ. ಅರಮನೆ ಯಿಂದ ಸ್ವಲ್ಪ ಮಾಸಾಶನವೇನೋ ನನಗೆ ಬರುತ್ತಿತ್ತಷ್ಟೆ. ಹೀಗೆ ಅಲ್ಪಸ್ವಲ್ಪ ಆದಾಯ ಬರುತ್ತಿದ್ದವರಿಗೆ ಸಹಾಯಮಾಡುವ ಉದ್ದೇಶದಿಂದ ಅರಮನೆ ಯವರು ಸೀತಾವಿಳಾಸ ಛತ್ರದಲ್ಲಿ ಹಣ್ಣು ಹಾಲು ಮೊಸರುಗಳನ್ನು ಉಚಿತ ವಾಗಿ ಹಂಚುವ ವ್ಯವಸ್ಥೆ ಮಾಡಿದ್ದರು. ಪ್ರತಿದಿನ ಇವನ್ನು ಛತ್ರದಿಂದ ಮನೆಗೆ ತರುವುದು ನನ್ನ ಪಾಲಿಗೆ ಬಿದ್ದಿತ್ತು. ಒಂದು ದಿನ ಇವುಗಳನ್ನು ಮನೆಗೆ

ತರುತ್ತಿದ್ದಾಗ ಅದನ್ನು ಕಂಡ ಯಾರೋ ಒಬ್ಬರು 'ಏನಯ್ಯ? ಆಯಿತೋ ನಿತ್ಯ ಯಾತ್ರೆ?' ಎಂದು ನನ್ನನ್ನು ಕುಚೋದ್ಯಮಾಡಿದರು. ಸರಿ ಛತ್ರದಿಂದ ತಂದಿದ್ದ ಹಾಲು ಮೊಸರನ್ನು ಅಲ್ಲಿಯೇ ಬಿಸಾಡಿ ಬರಿಗೈಯಲ್ಲಿ ಮನೆಗೆ ಬಂದೆ! ಅದೇ ಕೊನೆಯಾಯಿತು ಛತ್ರದಿಂದ ಹಾಲು ಮೊಸರು ತರುವುದಕ್ಕೆ!

ಈ ಸ್ವಾಭಿಮಾನವೇ ಕಾರಣವಾಗಿ ನಾನು ಸಂಸ್ಕೃತ ವಿದ್ಯಾಭ್ಯಾಸದಲ್ಲಿ ನನ್ನ ಸಹಪಾಠಿಗಳಿಗಿಂತ ಹಿಂದೆ ಬೀಳದೆ ಇದ್ದೆನೇ ಹೊರತು ಅದನ್ನು ಕಲಿಯುಬೇಕೆಂಬ ಆಕಾಂಕ್ಷೆಯಿಂದಲ್ಲ. ಚುರುಕಾದ ಗ್ರಹಣಶಕ್ತಿಯನ್ನೂ ಬಲವಾದ ಜ್ಞಾಪಕಶಕ್ತಿಯನ್ನೂ ದೇವರು ಕೊಟ್ಟಿದ್ದ ಕಾರಣ ಹೇಳಿಕೊಟ್ಟ ಪಾಠಗಳನ್ನು ಬೇಗ ಕಲಿಯುತ್ತಲಿದ್ದೆ. ಅವುಗಳಲ್ಲಿ ಆಸಕ್ತಿಯಿಲ್ಲದ್ದರಿಂದ ಅಷ್ಟೇ ಬೇಗ ಅವನ್ನು ಮರೆತೂಬಿಡುತ್ತಿದ್ದೆ. ಇಷ್ಟಾದರೂ ಗುರುಗಳಲ್ಲಿ ಮಾತ್ರ ನನಗೆ ಅತ್ಯಂತ ಪೂಜ್ಯಭಾವನೆ. ವಿರಾಮಕಾಲದಲ್ಲಿ ಗುರುಗಳ ಮನೆಯ ಜಗುಲಿಯ ಮೇಲೆ ಕುಳಿತು ಅಭ್ಯಾಸಮಾಡುವಂತೆ ಸೋಗುಹಾಕುತ್ತಿದ್ದುದು ಕೇವಲ ನಟನೆಯಾಗಿತ್ತು ನಿಜ. ಆದರೆ ಗುರುಗಳಿಗೆ ವಿಧೇಯನಾಗಿ ನಡೆದುಕೊಳ್ಳುವುದರಲ್ಲಿಯೂ ಅವರ ಸೇವೆ ಮಾಡುವುದರಲ್ಲಿಯೂ ನಾನೇ ಮೊದಲಿಗನಾಗಿದ್ದೆ.

ಅಂದಿನ ಪದ್ಧತಿಯಂತೆ ವಿದ್ಯಾರ್ಥಿಗಳೆಲ್ಲರೂ ಬೆಳಗಿನ ಜಾವಕ್ಕೆ ಎದ್ದು ಹಳೆಯ ಪಾಠಗಳನ್ನು ಪುನರಾವರ್ತನೆ ಮಾಡುವುದು; ಅನಂತರ ಕೆರೆಗೆ ಹೋಗಿ, ಸ್ನಾನ ಸಂಧ್ಯಾವಂದನಾದಿಗಳನ್ನು ಮುಗಿಸಿಕೊಂಡು ತಮ್ಮ ಮತ್ತು ಗುರುಗಳ ಧೋತ್ರಗಳನ್ನು ಅಚ್ಚುಕಟ್ಟಾಗಿ ಒಗೆದು ಮನೆಗೆ ತರುವುದು; ಆಮೇಲೆ ನೀರು ಸೇದಿ ತುಂಬುವುದು. ಇವು ಬೆಳಗಿನ ದಿನಚರಿ, ಅನಂತರ ಪಾಠಶಾಲೆಯಲ್ಲಿ ಪಾಠಪ್ರವಚನಗಳು. ಪಾಠಶಾಲೆ ಮುಚ್ಚಿದ ಮೇಲೆ ಗುರುಗಳು ಶಿಷ್ಯರ ಸಮೇತರಾಗಿ ಕೆರೆಯ ಏರಿಯ ಮೇಲೆ ಸೇರುವುದು; ಸಾಯಂ ಸಂಧ್ಯಾದಿಗಳಾದ ಮೇಲೆ ಶ್ಲೋಕಪಠಣ, ವಾಕ್ಯಾರ್ಥಾದಿಗಳನ್ನು ನಡಸುವುದು; ಆ ಬಳಿಕ ಎಲ್ಲರೂ ಅಲ್ಲಿಂದ ಹೊರಟು ಕೋಟೆಯಲ್ಲಿದ್ದ ವರಾಹಸ್ವಾಮಿಯ ದೇವಾಲಯಕ್ಕೆ ಬಂದು ದೇವರ ದರ್ಶನಮಾಡಿಕೊಂಡು ತಮ್ಮ ತಮ್ಮ ಮನೆ ಸೇರಿಕೊಳ್ಳುವುದು —ಇವು ಸಂಧ್ಯಾಕಾಲದ ಕಾರ್ಯಕ್ರಮಗಳು. ಸಂಸ್ಕೃತ ವಿದ್ಯಾಭ್ಯಾಸಕಾಲದಲ್ಲಿ ನನ್ನ ಜೀವನ ಒಟ್ಟಿನಲ್ಲಿ ಈ ಅಚ್ಚಿಗೆ ಹೊಂದಿಕೊಂಡಂತೆ ನಡೆಯುತ್ತಿತ್ತಾದರೂ ನನ್ನ ಮನಸ್ಸೆಲ್ಲ ಸಂಗೀತದ ಕಡೆಗೆ ವಾಲಿತ್ತು.

ಸಂಸ್ಕೃತ ವಿದ್ಯಾಭ್ಯಾಸವನ್ನು ಬಿಟ್ಟು ಬೇರೆ ಯಾವುದರ ಕಡೆಗೆ ಒಲವು ತೋರಿದರೂ ಅದನ್ನು ತೀವ್ರವಾಗಿ ಪ್ರತಿಭಟಿಸುತ್ತಿದ್ದರು ನನ್ನ ತಾತ.

ಅದರಲ್ಲೂ ಸಂಗೀತವೆಂದರೆ ಅವರಿಗೆ ಸೇರದು. ಸಂಗೀತಗಾರರಿಗೆ ನೀತಿಯಿಲ್ಲ ನಿಯಮವಿಲ್ಲ; ಆಚಾರವಿಲ್ಲ ಅಧ್ಯಯನವಿಲ್ಲ. ಆದ್ದರಿಂದ ಸದ್ಬ್ರಾಹ್ಮಣ ವಂಶದಲ್ಲಿ ಹುಟ್ಟಿದವರಿಗೆ ಸಂಗೀತ ವಿದ್ಯಾಭ್ಯಾಸ ಖಂಡಿತ ಸಲ್ಲದು ಎಂಬುದು ಅವರ ನಿಶ್ಚಿತಾಭಿಪ್ರಾಯವಾಗಿತ್ತು. ಆದರೆ ಅವರ ಈ ಆಂತರ್ಯಾಭಿಪ್ರಾಯ ನನಗೇನು ಗೊತ್ತು? ನಾನು ಕಲಿಯಲೇಬೇಕಾಗಿದ್ದ ಸಂಸ್ಕೃತ ಶ್ಲೋಕಗಳನ್ನು ರಾಗಠಾಗವಾಗಿ ಹೇಳುತ್ತ ಪಾಠಮಾಡುವುದರಲ್ಲಿ ಸಂಗೀತದ ಕಡೆ ಗಿದ್ದ ನನ್ನ ಒಲವು ಮೊದಲು ಒಡಮೂಡಿತು. ತಾತ ಇದನ್ನು ಅಷ್ಟಾಗಿ ಲಕ್ಷಿಸಲಿಲ್ಲ. ಆದರೆ ಸಂಗೀತದಲ್ಲಿ ನನಗಿದ್ದ ಒಲವು ಹಂಬಲಗಳನ್ನು ಮೊದಲು ಗುರುತಿಸಿದವರೆಂದರೆ ನನ್ನ ಸೋದರಮಾವ ಪದ್ಮನಾಭಾಚಾರ್ಯರು. ಅವರೇ ನನಗೆ ಮೊದಲನೆಯ ಸಂಗೀತ ಗುರುಗಳನ್ನು ಗೊತ್ತುಮಾಡಿಕೊಟ್ಟವರು.

ನಮ್ಮ ಮನೆಯ ಬೀದಿಯಲ್ಲೇ ಒಬ್ಬರು ಸಂಗೀತ ವಿದ್ವಾಂಸರಿದ್ದರು; ಚಾಮರಾಜೇಂದ್ರ ಒಡೆಯರ ಆಸ್ಥಾನ ವಿದ್ವಾಂಸರು—ಸುಬ್ಬರಾಯರು ಎಂದು. ಅನೇಕ ಮಂದಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಾಠ ಹೇಳಿಕೊಡುತ್ತಿದ್ದರು. ನನಗೆ ಸಂಗೀತ ಕಲಿಯಲು ಅನುಕೂಲ ಕಲ್ಪಿಸಬೇಕೆಂದು ಯೋಚಿಸಿದ ಪದ್ಮನಾಭಾಚಾರ್ಯರು ನನ್ನನ್ನು ಸುಬ್ಬರಾಯರ ಮನೆಗೆ ಕರೆದುಕೊಂಡು ಹೋಗಿ 'ಈತ ತಬ್ಬಲಿ ಹುಡುಗ. ಸಂಸ್ಕೃತ ಪಾಠಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದಾನೆ. ಸಂಗೀತ ಕಲಿಯಬೇಕೆಂಬ ಆಸೆ ಬಹಳ. ದಯಮಾಡಿ ಇವನನ್ನು ಶಿಷ್ಯನನ್ನಾಗಿ ಅಂಗೀಕರಿಸಿ ವಿದ್ಯಾದಾನ ಮಾಡಬೇಕು' ಎಂದು ಪ್ರಾರ್ಥಿಸಿದರು. ಸುಬ್ಬರಾಯರು ಮಮತೆಯಿಂದ ನನ್ನನ್ನು ಹತ್ತಿರ ಕೂರಿಸಿಕೊಂಡು, 'ನಿನಗೆ ಏನಾದರೂ ಹಾಡುವುದಕ್ಕೆ ಬಂದರೆ ಹಾಡು ಮಗು ನೋಡೋಣ' ಎಂದರು. ನಾನೇ ಸ್ವಯಂ ಸ್ಫೂರ್ತಿಯಿಂದ ಅಭ್ಯಾಸಮಾಡಿಕೊಂಡಿದ್ದ ಕೆಲವು ಶ್ಲೋಕಗಳನ್ನು ಹಾಡಿದೆ. 'ಸಂಸ್ಕೃತ ಶ್ಲೋಕಗಳನ್ನು ಲಕ್ಷಣವಾಗಿ ಹಾಡುವಷ್ಟು ಮಟ್ಟಿಗಾದರೂ ಇವನಿಗೆ ಸಂಗೀತಜ್ಞಾನ ಲಭಿಸಿದರೆ ಸಾಕು ನಿಮ್ಮ ಕೃಪೆಯಿಂದ' ಎಂದರು ನನ್ನ ಸೋದರಮಾವ. ಸುಬ್ಬರಾಯರು ಗಂಭೀರವಾಗಿ 'ಹುಡುಗನ ಶಾರೀರ ಚೆನ್ನಾಗಿದೆ. ಅಗತ್ಯವಾಗಿ ಪಾಠ ಹೇಳುತ್ತೇನೆ' ಎಂದರು. ಸ್ವರ್ಗವೇ ಸಿಕ್ಕಷ್ಟು ಆನಂದವಾಯಿತು ನನಗೆ! ಮೂರು ನಾಲ್ಕು ದಿನಗಳು ಕಳೆದ ಮೇಲೆ ಗುರುಗಳ ಹತ್ತಿರ ಹೋಗಿ, 'ಸಂಗೀತವನ್ನು ಶಾಸ್ತ್ರೋಕ್ತವಾಗಿಯೇ ಕಲಿಯಬೇಕೆಂಬ ಆಸೆ ನನಗೆ. ದಯವಿಟ್ಟು ಕ್ರಮವಾಗಿ ಪಾಠ ಮಾಡಿಸಬೇಕು ಗುರುಗಳೇ' ಎಂದು ಕೇಳಿಕೊಂಡೆ. ಗುರುಗಳು ಅದಕ್ಕೂ ಸಮ್ಮತಿಸಿದರು. ಕೆಲವು ತಿಂಗಳುಗಳು ಕಳೆಯುವುದ

ರೊಳಗಾಗಿ ಸ್ವರಜತಿಗಳನ್ನು ಹಾಡುವ ಘಟ್ಟ ಮುಟ್ಟಿದೆ. ಸಂಗೀತದಲ್ಲಿ ಆಸಕ್ತಿ ಹೆಚ್ಚಾಯಿತು.

ಸುಬ್ಬರಾಯರಲ್ಲಿ ನಾನು ಸಂಗೀತ ಕಲಿಯುತ್ತಿದ್ದಾಗ ನಡೆದ ಒಂದು ಘಟನೆಯಿಂದ 'ಅಜಾತಶತ್ರುಗಳು ನನ್ನ ಗುರುಗಳು' ಎಂಬುದನ್ನು ಚೆನ್ನಾಗಿ ಅರಿತುಕೊಂಡೆ. ಒಂದು ದಿನ ವೃದ್ಧರೊಬ್ಬರು ಸುಬ್ಬರಾಯರಲ್ಲಿಗೆ ಬಂದರು. ತಾವು ಕಣಿವೆ ಕೆಳಗಿನವರೆಂದೂ ಮಗಳ ವಿವಾಹವಾಗಬೇಕಾಗಿದೆಯಾಗಿ ಪ್ರಭುಸನ್ನಿಧಿಯಲ್ಲಿ ಒಂದು ಸಂಗೀತಕಛೇರಿಯನ್ನು ಏರ್ಪಡಿಸಿಕೊಡಬೇಕೆಂದೂ ಕೇಳಿಕೊಂಡರು. ಹೊಸ ಪರಿಚಯವಾದ್ದರಿಂದ ಆ ವಿದ್ವಾಂಸರ ಯೋಗ್ಯತೆ ತಿಳಿಯದೆ ಪ್ರಭುಗಳಿಗೆ ಅವರನ್ನು ಶಿಫಾರಸು ಮಾಡುವುದಾದರೂ ಹೇಗೆ? 'ಒಂದು ಕೀರ್ತನೆ ಅಪ್ಪಣೆಯಾಗಲಿ' ಅಂದರು ಸುಬ್ಬರಾಯರು. ಪರಸ್ಥಳದ ವಿದ್ವಾಂಸರು ಹಾಡಿದರು. ಸಂಗೀತ ತುಂಬ ಸಾಮಾನ್ಯವಾಗಿತ್ತು. ರಾಗಾಲಾಪನೆ ಸ್ವರಕಲ್ಪನೆಯಂತೂ ಬಹಳ ಸಾಧಾರಣ. ದೊರೆಗಳ ಸನ್ನಿಧಿಯಲ್ಲಿ ಏರ್ಪಡಿಸುವಂಥ ಮಟ್ಟದ್ದಲ್ಲ ಅವರ ಹಾಡಿಕೆ. ಧರ್ಮಸಂಕಟಕ್ಕಿಟ್ಟುಕೊಂಡಿತು ಸುಬ್ಬರಾಯರಿಗೆ. ತಕ್ಕಷ್ಟು ವಿದ್ವತ್ತಿಲ್ಲದವರನ್ನು ಪ್ರಭುಗಳಿಗೆ ಶಿಫಾರಸು ಮಾಡುವುದಾದರೂ ಹೇಗೆ? ಒಂದುವೇಳೆ ಹಾಗೆ ಮಾಡಿದರೂ ಅದರಿಂದ ಅನುಕೂಲವಾಗುವುದರ ಬದಲು ಅನಾನುಕೂಲವಾದರೆ? ಪಾಪ. ಇಳಿವಯಸ್ಸಿನವರು. ಮಗಳ ಮದುವೆಗೆ ಸಹಾಯ ಬೇಕೆನ್ನುತ್ತಿದ್ದಾರೆ. ಬರಿಗೈಯ್ಯಲ್ಲಿ ಹೋಗಿ ಎನ್ನುವುದಾದರೂ ಹೇಗೆ? ಇದನ್ನೆಲ್ಲ ಯೋಚನೆ ಮಾಡಿ ನೇರವಾಗಿ ತಾವೇ ಪ್ರಭುಗಳ ಸನ್ನಿಧಿಗೆ ಹೋದರು ಗುರುಗಳು. ಮಹಾಸ್ವಾಮಿಗಳನ್ನು ಕಂಡು 'ಪ್ರಭು, ನನ್ನ ಗುರುಗಳು ಬಂದಿದ್ದಾರೆ. ಸನ್ನಿಧಿಯಲ್ಲಿ ಹಾಡಬೇಕೆಂಬ ಅಭಿಲಾಷೆ ಬಹಳವಾಗಿದೆ ಅವರಿಗೆ. ಆದರೆ ವೃದ್ಧಾಪ್ಯ. ರಾಗ ಸ್ವರಗಳನ್ನು ವಿಸ್ತಾರವಾಗಿ ಹಾಡಿ ಸಂಪ್ರದಾಯಬದ್ಧವಾದ ಸಂಗೀತ ಕಛೇರಿ ಮಾಡುವ ದೇಹಸಂಪತ್ತಿಯಿಲ್ಲ. ಆದರೂ ಕೊಂಚಕಾಲವಾದರೂ ಪ್ರಭುಗಳು ಅವರ ಕಛೇರಿ ಕೇಳುವ ಕೃಪೆಮಾಡಿ ಪ್ರೋತ್ಸಾಹಿಸಬೇಕು' ಎಂದು ಅರಿಕೆಮಾಡಿದರು. ಪ್ರಭುಗಳು ಸಮ್ಮತಿಸಿ ಆ ರಾತ್ರಿಯೇ ಕಛೇರಿ ನಡೆಯಬಹುದೆಂದು ಅಪ್ಪಣೆ ಮಾಡಿದರು. ಅರಮನೆಯಲ್ಲಿ ಕಛೇರಿ ಆರಂಭವಾಗುವುದಕ್ಕೆ ಸ್ವಲ್ಪಹೊತ್ತು ಮುಂಚೆ ಸುಬ್ಬರಾಯರು ಆ ಪರಸ್ಥಳದ ವಿದ್ವಾಂಸರನ್ನು ಗುಟ್ಟಾಗಿ ಕರೆದು 'ನೋಡಿ ಸ್ವಾಮಿ, ಸ್ವರ ರಾಗ ಹಾಡಿ ಕಛೇರಿಯನ್ನು ಕಗ್ಗಮಾಡಬೇಡಿ, ಲಕ್ಷಣವಾಗಿ ಎರಡು ಚಿಕ್ಕ ಕೃತಿಗಳನ್ನು ಹಾಡಿ ಸಾಕು' ಎಂದರು. 'ರೋಗಿ ಬಯಸಿದ್ದೂ ಹಾಲೂ ಅನ್ನ; ವೈದ್ಯ ಹೇಳಿದ್ದೂ ಹಾಲೂ ಅನ್ನ' ಎಂದಂತಾಯಿತು

ಆ ಪರಸ್ಥಳದ ವಿದ್ವಾಂಸರಿಗೆ: ಅಂತೂ ಕಛೇರಿಯಾಯಿತು. ಅವರಿಗೆ ಲಭ್ಯ ವಿದ್ದಷ್ಟು ಸಂಭಾವನೆಯೂ ದೊರೆಯಿತು! ತಮ್ಮ ವಿದ್ವತ್ತು ಅಂತಸ್ತುಗಳನ್ನು ಗಮನಕ್ಕೆ ತಂದುಕೊಂಡು ಬೀಗಿ ಕೂರದೆ ಎಲ್ಲರಿಗೂ ತಮ್ಮಿಂದಾದ ಸಹಾಯ ವನ್ನು ಮಾಡುವುದೇ ಸುಬ್ಬರಾಯರ ನಡವಳಿಕೆಯ ಸೂತ್ರವಾಗಿತ್ತು. ಸುಬ್ಬರಾಯರ ಔದಾರ್ಯವೂ ಕೂಡ ಅನುಪಮವಾಗಿತ್ತು. ಒಮ್ಮೆ ದೇವ ಪಾರ್ಥಿವರವರ ಬಂಗಲೆಯಲ್ಲಿ ಸುಬ್ಬರಾಯರ ಕಛೇರಿ ನಡೆಯಿತು. ದೇವ ಪಾರ್ಥಿವರವರು ತುಂಬ ಬೆಲೆಬಾಳುವ ಜರಿಗೆ ರುಮಾಲೊಂದನ್ನು ಸುಬ್ಬರಾಯ ರಿಗೆ ತಾವೇ ತಂದುಕೊಟ್ಟು ಗೌರವಿಸಿದರು. ಕಛೇರಿ ಮುಗಿಸಿಕೊಂಡು ಸುಬ್ಬರಾಯರು ಹಿಂದಿರುಗಿ ಬರುತ್ತಿದ್ದಾಗ ಅವರ ಪರಿಚಯಸ್ಥರೊಬ್ಬರು 'ಗುರುಗಳೇ ಇವತ್ತು ತಮಗೆ ಬಹುಮಾನವಾಗಿ ಬಂದ ಈ ಪೇಟ ತುಂಬ ಚೆನ್ನಾಗಿದೆ. ಎಂಥ ಅಮೂಲ್ಯವಸ್ತು!' ಎಂದರು. ಒಡನೆಯೇ ಸುಬ್ಬರಾಯರು 'ನಿಜ. ಬಹಳ ಸಂತೋಷ. ಈ ಪೇಟ ನನಗಿಂತ ನಿಮಗೆ ಚೆನ್ನಾಗಿ ಒಪ್ಪುತ್ತದೆ. ದಯವಿಟ್ಟು ತೆಗೆದುಕೊಳ್ಳಿ' ಎಂದು ಅದನ್ನು ಅವರ ಕೈಗೆ ಕೊಟ್ಟು 'ಕೃಷ್ಣಾ ರ್ಪಣ' ಎಂದರು. ಇವರು ತಮ್ಮ ಇಡೀ ಜೀವಮಾನದಲ್ಲೇ ಒಬ್ಬರಿಗೆ ಒಂದು ಕೇಡು ಮಾಡಲಿಲ್ಲ; ಒಬ್ಬರಿಗೆ ಒಂದು ಸಣ್ಣ ಮಾತಾಡಲಿಲ್ಲ. ಅಂಥ ಧರ್ಮಾತ್ಮರು ನನ್ನ ಗುರುಗಳು.

ಸುಬ್ಬರಾಯರಲ್ಲಿ ದೀರ್ಘಕಾಲ ಸಂಗೀತಪಾಠ ಮಾಡುವ ಅವಕಾಶ ನನಗೆ ದೊರೆಯಲಿಲ್ಲ. ಏಕೆಂದರೆ ಮೇಲಿಂದ ಮೇಲೆ ಸಂಗೀತಕಛೇರಿಗಳಿಗೆ ಹೋಗು ತ್ತಿದ್ದು ಹೊತ್ತಾಗಿ ಮನೆಗೆ ಹೋಗುತ್ತಿದ್ದುದನ್ನು ಗಮನಿಸಿದ್ದ ನನ್ನ ಅಜ್ಜನಿಗೆ ಅದಕ್ಕೆ ಕಾರಣವನ್ನು ಪತ್ತೆಹಚ್ಚಲೂ, ಅವರಿಗೆ ತಿಳಿಯದಂತೆ ನಾನು ಸಂಗೀತಾ ಭ್ಯಾಸ ಮಾಡುತ್ತಿದ್ದೆನೆಂಬುದನ್ನು ತಿಳಿದುಕೊಳ್ಳಲೂ ಹೆಚ್ಚುಕಾಲ ಬೇಕಾಗಲಿಲ್ಲ. ಈ ವಿಚಾರ ಅವರಿಗೆ ಗೊತ್ತಾದೊಡನೆಯೇ 'ವಂಶದ ಗೌರವಕ್ಕೇ ಕಳಂಕ ತರುವಂಥ ಕೆಲಸಕ್ಕೆ ಮನಸ್ಸು ಹಾಕಿದನಲ್ಲ ನಾಸು!' ಎನಿಸಿತು ಅವರಿಗೆ! ಈ ದುಶ್ಚಟವನ್ನು ಮೊಳಕೆಯಲ್ಲಿಯೇ ಮುರಿಯದಿದ್ದರೆ ಸರ್ವನಾಶವಾದೀತೆಂದು ಹೆದರಿದರು. ಅಂದಿನಿಂದ ಸುಬ್ಬರಾಯರ ಮನೆಗೆ ಪಾಠಕ್ಕಾಗಲೀ ಕಛೇರಿಗಳನ್ನು ಕೇಳುವುದಕ್ಕಾಗಲೀ ಹೋಗಕೂಡದೆಂದು ನನಗೆ ಕಟ್ಟಪ್ಪಣೆಮಾಡಿದರು. ಮೇಲುನೋಟಕ್ಕೆ ಈ ಆಜ್ಞೆಯನ್ನು ಶಿರಸಾವಹಿಸಿದಂತೆ ನಟಿಸುತ್ತಿದ್ದೆನಾದರೂ ಅಜ್ಜನ ಕಣ್ಣು ತಪ್ಪಿಸಿ ಸಂಗೀತಪಾಠಕ್ಕೆ ಹೋಗುತ್ತಲೇ ಇದ್ದೆ. ಎಷ್ಟು ದಿನ ಈ ಕಳ್ಳವ್ಯವಹಾರ ನಡಸಲು ಸಾಧ್ಯ? ಅದೂ ಒಂದು ದಿನ ಬಯಲಾಯಿತು. ನನ್ನ ತಾತನಿಗೆ ಕೋಪ ನೆತ್ತಿಗೇರಿತು. ತತ್ಕಾಲದಲ್ಲಿ ಕೈಗೆ ಸಿಕ್ಕಿದ ನೀರು

ಸೇದುವ ಹಗ್ಗದಿಂದಲೇ ಚೆನ್ನಾಗಿ ಹೊಡೆತಕೊಟ್ಟು ಸಂಸ್ಕೃತಪಾಠಶಾಲೆಯ ಪ್ರೌಢಶಿಕ್ಷಣದ ಪಾಠಗಳನ್ನು ಬಿಟ್ಟು ಮತ್ತಿನ್ನಾವ ವಿಚಾರಕ್ಕಾದರೂ, ಅದರಲ್ಲೂ ಸಂಗೀತಕ್ಕೆ, ಗಮನಕೊಟ್ಟರೆ ಅಂದೇ ಮನೆಬಿಟ್ಟು ಓಡಿಸುವುದಾಗಿ ಬಲವಾಗಿ ಬೆದರಿಕೆ ಹಾಕಿದರೆ. ಹಿಂದಿನ ಬಾರಿ ಅವರ ಕಣ್ಣು ತಪ್ಪಿಸಿ ಸಂಗೀತ ಪಾಠಕ್ಕೆ ಹೋದಂತೆ ಈ ಬಾರಿ ಆಗಬಾರದೆಂದು ನನ್ನ ಮೇಲೆ ತಮ್ಮ ಕಾವಲನ್ನು ಬಲಪಡಿಸಿದರು. ಪಾಠಶಾಲೆ; ಪಾಠಶಾಲೆ ಬಿಟ್ಟರೆ ಮನೆ. ಮನೆಯಲ್ಲಿದ್ದಾಗ ತಾತನ ಸರ್ಪಕಾವಲು. ನನ್ನ ಪಾಠದ ಶ್ಲೋಕಗಳನ್ನು ಕೂಡ ರಾಗವಾಗಿ ಓದಕೂಡದೆಂಬ ನಿಯಮನೇರ್ಪಟ್ಟಿತು! ತಾವೇ ಎದುರಿಗೆ ಕುಳಿತು ಸಂಗೀತ ಪೈತ್ಯದ ಚಿಕಿತ್ಸೆಗೇನೋ ಎಂಬಂತೆ ಪಾಣಿನಿಯ ವ್ಯಾಕರಣ ಸೂತ್ರಗಳನ್ನು ಉರು ಹೊಡೆಸಲು ಪ್ರಾರಂಭಿಸಿದರು ನನ್ನ ಅಜ್ಜ. ಹೀಗಾದ ಮೇಲೆ ಇನ್ನೆಲ್ಲಿಯ ಸಂಗೀತಪಾಠ? ಚಿಗುರುತ್ತಿದ್ದ ನನ್ನ ಆಶಾಲತೆಯ ಕುಡಿಯು ಬಾಡಿತು! ಸಂಸ್ಕೃತ ಪಾಠಮಾತ್ರ ಮುಂದುವರೆಯಿತು. ನಾಟಕಾಂತ ಸಾಹಿತ್ಯಪಾಠವಾಯಿತು!

ಇನ್ನೇನು ಹೋಯಿತು ಪ್ರಾಣ ಅನ್ನುವಷ್ಟರಮಟ್ಟಿಗಾಗಿ ಮತ್ತೆ ಜೀವ ಕೂಡಿಕೊಳ್ಳುವುದೇ ನನ್ನ ಜಾತಕದ ಲಕ್ಷಣವೆಂದು ತೋರುತ್ತದೆ! ನನ್ನ ಆಸೆಯ ಕುಡಿ ಮತ್ತೆ ಚಿಗುರುವ ಸುಸಂದರ್ಭವೊಂದನ್ನು ದೈವ ತಂದೊಡ್ಡಿತು, ನನ್ನ ಮುಂದೆ. ಪಾಠಶಾಲೆಯ ಪಠ್ಯ ವಿಷಯಗಳಲ್ಲಿ ಕೆಲವು ಬದಲಾವಣೆಗಳಾದವು. ಇದರ ಪರಿಣಾಮವಾಗಿ ಸಂಗೀತಾಧ್ಯಯನಕ್ಕೂ ಪಾಠಶಾಲೆಯಲ್ಲಿ ಅವಕಾಶ ಕಲ್ಪಿಸಲಾಯಿತು. ಪ್ರತಿಯೊಬ್ಬ ವಿದ್ಯಾರ್ಥಿಯೂ ಎರಡೆರಡು ಶಾಸ್ತ್ರಗಳನ್ನು ಕಲಿಯಬೇಕೆಂದೂ, ಪಠ್ಯ ವಿಷಯಗಳನ್ನು ಬೇರೆಬೇರೆ ಚೀಟಿಗಳಲ್ಲಿ ಗುರುತು ಮಾಡಿ ಪಾಠಶಾಲೆಯ ವಿನಾಯಕನ ಮುಂದೆ ಹಾಕಿ ಸಣ್ಣ ಮಗುವೊಂದರ ಕೈಯ್ಯಲ್ಲಿ ಎತ್ತಿಸುವುದೆಂದೂ, ವಿದ್ಯಾರ್ಥಿಗಳ ಹೆಸರಿಗೆ ಬಂದ ಎರಡು ಶಾಸ್ತ್ರಗಳನ್ನು ಅವರು ಅಭ್ಯಾಸಮಾಡತಕ್ಕದ್ದೆಂದೂ ವ್ಯವಸ್ಥೆಯಾಯಿತು. ನನ್ನ ಹೆಸರಿನಲ್ಲಿ ಚೀಟಿ ಎತ್ತಿದಾಗ 'ಸಂಗೀತ ಮತ್ತು ಸಾಹಿತ್ಯ' ಎಂದು ಬಂದಿತು! ತಲೆಯ ಮೇಲೆ ಹಾಲೆರೆದಂತಾಯಿತು! ಉಲ್ಲಾಸದಿಂದ ಮೈಯುಬ್ಬಿತು. ಯಾರ ಆಕ್ಷೇಪಣೆಯೂ ಇಲ್ಲದೆ, ಯಾರ ಹೆದರಿಕೆಯೂ ಇಲ್ಲದೆ, ಯಾವ ಮುಚ್ಚು ಮರೆಯಿಲ್ಲದೆಯೇ ನನ್ನ ಬಾಳ ಬಯಕೆಯನ್ನು ಪೂರೈಸಿಕೊಳ್ಳುವ ಸದವಕಾಶ ತಾನಾಗಿಯೇ ಪ್ರಾಪ್ತವಾಯಿತಲ್ಲ ಎಂದು ಕುಣಿದಾಡಿದೆ! ಪಾಠಶಾಲೆಯಲ್ಲಿ ಸಂಗೀತಾಧ್ಯಾಪಕರಾಗಿದ್ದ ವೀಣೆ ಪದ್ಮನಾಭಯ್ಯನವರು ಸಂಗೀತದಲ್ಲಿ ನನಗೆ ಎರಡನೆಯ ಗುರುಗಳಾದರು. ಕೆಲವು ವರ್ಷಗಳ ಕಾಲ ವ್ಯಾಸಂಗ ಸಾಗಿ ವರ್ಣ ಕೀರ್ತನೆಗಳನ್ನು ಹಾಡುವಷ್ಟು ಸಾಮರ್ಥ್ಯವೊದಗಿತು.

ಹೀಗಿರುವಲ್ಲಿ, ಒಮ್ಮೆ ಪಾಠಶಾಲೆಯಲ್ಲಿ ಪಟ್ಣಂ ಸುಬ್ರಹ್ಮಣ್ಯಯ್ಯರ್ ಮತ್ತು ಮಹಾವೈದ್ಯನಾಥಯ್ಯರ್ ಅವರ ಕಛೇರಿಗಳನ್ನು ಕೇಳುವ ಸುಯೋಗ ಪ್ರಾಪ್ತವಾಯಿತು. ಆ ಗಾಯಕ ಶಿಖಾಮಣಿಗಳ ಜೆಡಗಿನ ಸಂಗೀತವನ್ನು ಕೇಳಿ ದಿಗ್ಭ್ರಾಂತನಾದೆ, ಮೋಹಪರವಶನಾದೆ. "ಮಹಾದೇವ ಮಹಾವೈದ್ಯಂ ತ್ವಂ ಪಾಲಯ ಕೃಪಾಲಯ, ಶೂಲಿನಸ್ತೇ ಸದಾಪೇಕ್ಷ್ಯಃ ಖಲ್ವಾಯುರ್ವೇದ ಪಾರಗಃ" ಎಂದು ಶೃಂಗೇರಿ ಮಠದ ಜಗದ್ಗುರು ಶ್ರೀ ಅಭಿನವ ನೃಸಿಂಹ ಭಾರತಿಗಳು ಮಹಾವೈದ್ಯನಾಥಯ್ಯರ್ ಅವರ ಸಂಗೀತವನ್ನು ಮುಕ್ತಕಂಠದಿಂದ ಹೊಗಳಿ ಆಶೀರ್ವದಿಸಿದ್ದರು. ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರ ಬಿಕ್ಕಟ್ಟಿನ ಮಧ್ಯಮನಡೆಯ ಗಾಂಭೀರ್ಯದ ಕಣಿಯುಂತಿದ್ದ ಗಾಯನವಂತೂ ನನ್ನ ಮನಸ್ಸನ್ನು ಸಂಪೂರ್ಣವಾಗಿ ಸೂರೆಗೊಂಡಿತು. 'ಎಂತಹ ಅದ್ಭುತ ಹಾಡುಗಾರಿಕೆ! ಕಲಿತರೆ ಇಂತಹ ಸಂಗೀತವನ್ನು ಕಲಿಯಬೇಕು' ಎಂಬ ಆಸೆ ಬೇರೂರಿತು ನನ್ನಲ್ಲಿ. ಹೇಗಾದರೂ ಮಾಡಿ ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರಲ್ಲಿಗೇ ಹೋಗಿ ಅವರಲ್ಲಿ ಶಿಷ್ಯವೃತ್ತಿಮಾಡಿ ಸಂಗೀತವನ್ನು ಅಭ್ಯಾಸ ಮಾಡಬೇಕು ಎಂಬ ಅಭಿಲಾಷೆ ನನ್ನನ್ನಾವರಿಸಿತು. ಆದರೆ ಅವರಲ್ಲಿಗೆ ಹೋಗುವ ಬಗೆ? ಗುರುದಕ್ಷಿಣೆಯನ್ನು ಕೊಡಲು ಹಣ? ಪರಸ್ಥಳದಲ್ಲಿ ನಾಲ್ಕಾರು ವರ್ಷಗಳ ಕಾಲ ಇದ್ದುಕೊಂಡು ವಿದ್ಯಾರ್ಜನೆ ಮಾಡಲು ಅನುಕೂಲಗಳು? ಎಂಬಿವೇ ಮೊದಲಾದ ಹಲವಾರು ಸಮಸ್ಯೆಗಳು ನನ್ನನ್ನು ಕಾಡತೊಡಗಿದವು. ಆದರೆ ನನ್ನ ಸಂಕಲ್ಪ ಸಡಿಲಾಗಲಿಲ್ಲ. 'ದೊರೆಯತನಕ ದೂರು' ಎಂಬಂತೆ ಮಹಾರಾಜರನ್ನಾದರೂ ನೋಡಿ ಅರಮನೆಯ ಸಹಾಯ ಪಡೆದು ನನ್ನ ಆಸೆಯನ್ನು ನೆರವೇರಿಸಿಯೇಕೊಳ್ಳಬೇಕೆಂದು ದೃಢಸಂಕಲ್ಪ ಮಾಡಿದೆ.

ಪ್ರತಿ ಮಂಗಳವಾರ ಶುಕ್ರವಾರ, ಮಹಾರಾಜರು ಅವರ ಅಣ್ಣಂದಿರಾದ ಸುಬ್ರಹ್ಮಣ್ಯರಾಜೇ ಅರಸರ ಮತ್ತು ಭಾವಂದಿರಾದ ಬಸಪ್ಪಾಜಿಯವರ ಸಂಗಡ ಕುದುರೆ ಸವಾರಿ ಮಾಡಿಕೊಂಡು ಬೆಟ್ಟದ ಪಾದದ ಬಳಿ ಬಂದು, ಅಮ್ಮನವರ ಅರ್ಚನೆಮಾಡಿ ಅರಮನೆಗೆ ಹಿಂದಿರುಗುತ್ತಿದ್ದರು. ಮಹಾರಾಜರನ್ನು ಕಾಣಲು ಇದೇ ಸರಿಯಾದ ಸನ್ನಿವೇಶ ಎಂದು ಯೋಚಿಸಿದೆ. ಸರಿ, ಪ್ರತಿ ಮಂಗಳವಾರ ಶುಕ್ರವಾರ ಬೆಟ್ಟದ ಪಾದದ ಬಳಿ ಕಾದಿದ್ದು ಮಹಾಸ್ವಾಮಿಯವರ ಸವಾರಿ ಚಿತ್ತೈಸಿದಾಗ ಕೈ ಮುಗಿಯುತ್ತಿದ್ದೆ. ಪ್ರಸನ್ನವದನರಾಗಿ ಅವರೂ ಪ್ರತಿ ವಂದಿಸುತ್ತಿದ್ದರು. ನನ್ನ ಉದ್ದೇಶವೇನೆಂದು ಅವರೂ ತಿಳಿಯಲಪೇಕ್ಷಿಸಿರಲಿಲ್ಲ; ಹೇಳಿಕೊಳ್ಳಲು ನನಗೂ ಧೈರ್ಯ ಬಂದಿರಲಿಲ್ಲ.

ಕೊನೆಗೆ ಅದೊಂದು ಶುಕ್ರವಾರ, ನನ್ನ ಭಾಗ್ಯೋದಯದ ಆ ಮಂಗಳ ದಿನ, ನನ್ನ ಅಪೇಕ್ಷೆಯನ್ನು ಪ್ರಭುಗಳಲ್ಲಿ ಅರಿಕೆಮಾಡಿಯೇ ಬಿಡುವುದೆಂದು ನಿಶ್ಚಯಿಸಿಕೊಂಡೆ.

ಸಾವಿರ ಮೆಟ್ಟಲುಗಳನ್ನಿಳಿದು ಬಂದ ಅರಿವೇ ಇರಲಿಲ್ಲ ನನಗೆ! ಟಪ್ ಟಪ್, ಟಪ್ ಟಪ್, ಕುದುರೆಗಳ ಕಾಲುಸಪ್ಪಳ ಕಿವಿಗೆ ಬಿದ್ದ ಕ್ಷಣದಲ್ಲಿ ಮೈಯೆಲ್ಲ ಕಣ್ಣಾಯಿತು. ಪದ್ಧತಿಯಂತೆ ಸವಾರ ದಯಮಾಡಿಸುತ್ತಿದ್ದರು. ಅಕ್ಕಪಕ್ಕದಲ್ಲಿ ಕೆಲವು ಬೂದು ಬಣ್ಣದ ಕುದುರೆಗಳ ಮೇಲೆ ಅಣ್ಣಾಜಿ ಮತ್ತು ಭಾವಾಜಿ. ಮಧ್ಯೆ ಭವ್ಯವಾದ ಬಿಳಿಯ ಕುದುರೆಯ ಮೇಲೆ ಚಾಮರಾಜ ಒಡೆಯರು. ಪ್ರಭುಗಳು ಅಮ್ಮನ ಪಾದಗಳಿಗೆ ಪೂಜೆಮಾಡಿ ಆರತಿ ಬೆಳಗಿ ಪ್ರಸಾದ ಸ್ವೀಕರಿಸುವವರೆಗೂ ಕೈಕಟ್ಟಿ ನಿಂತಿದ್ದೆ. ಅವರು ಕುದುರೆಯೇರಿ ಹೊರಡಲು ಸನ್ನದ್ಧರಾಗುವ ಸಮಯಕ್ಕೆ ಮುಂದೆ ಕಾಣಿಸಿಕೊಂಡು ರಾಜಭಕ್ತಿಪುರಸ್ಸರದಿಂದ ಕೈಮುಗಿದೆ. ತಾಯಿ ಚಾಮುಂಡಾಂಬೆಯ ಅಭಯ ಹಸ್ತ ನನ್ನ ತಲೆಯಮೇಲೆ ಜೆರಳಾಡಿಸುತ್ತಿತ್ತೆಂದು ತೋರುತ್ತದೆ. ಮಹಾಸ್ವಾಮಿಯವರೇ ಮೌನಮುರಿದು ಮಾತನಾಡಿಸುವ ಕೃಪೆಮಾಡಿದರು. 'ಯಾರು ನೀವು? ಹೀಗೇಕೆ ಹಲವಾರು ದಿನಗಳಿಂದ ಇಲ್ಲಿಗೆ ಬಂದು ನಮಗೆ ಕೈಮುಗಿದು ಹೋಗುತ್ತಿದ್ದೀರಿ? ಏನಾಗಬೇಕು ನಮ್ಮಿಂದ?' ಎಂದು ಪ್ರಭುಗಳು ಕೇಳಿದರು. 'ಮಹಾಸ್ವಾಮಿ! ನಾನೊಬ್ಬ ಅನಾಥ. ನನ್ನ ಹಿರಿಯರು ಅರಮನೆಯ ಆಶ್ರಯದಲ್ಲಿ ಬೆಳೆದವರು. ಸುಬ್ರಹ್ಮಣ್ಯಾಚಾರ್ಯರು ಎಂದು ಅವರನ್ನು ಕರೆಯುತ್ತಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಪುರಾಣಿಕರಾಗಿದ್ದರು. ಸಂಸ್ಕೃತ ಪಾಠಶಾಲೆಯಲ್ಲಿ ಸಂಗೀತ, ಸಂಸ್ಕೃತ ಅಭ್ಯಾಸಮಾಡುತ್ತಿದ್ದೇನೆ. ದಕ್ಷಿಣ ದೇಶಕ್ಕೆ ಹೋಗಿ ಸಂಗೀತದಲ್ಲಿ ಉನ್ನತ ಶಿಕ್ಷಣ ಪಡೆಯಬೇಕೆಂಬ ಮಹದಾಸೆ ನನಗೆ. ಖಾವಂದರು ದೊಡ್ಡ ಮನಸ್ಸುಮಾಡಿ ನನ್ನ ಆಕಾಂಕ್ಷೆಯನ್ನು ನೆರವೇರಿಸಿಕೊಟ್ಟು ವಿದ್ಯಾದಾನಮಾಡಿದ ಪುಣ್ಯ ಕಟ್ಟಿಕೊಳ್ಳಬೇಕು ಮಹಾಸ್ವಾಮಿ' ಎಂದು ಅರಿಕೆ ಮಾಡಿಕೊಂಡೆ. 'ಒಳ್ಳೆಯದು ನೋಡೋಣ. ನಾಳೆಯಿಂದ ಅರಮನೆಗೆ ಬಂದು ಹೋಗುತ್ತಿರಿ' ಎಂದು ಅಪ್ಪಣೆಕೊಡಿಸಿ ಕುದುರೆಯೇರಿ ಪ್ರಭುಗಳು ತೆರಳಿದರು. ಹೃದಯ ತುಂಬಿ ಬಂದು ಮಾತೇ ಹೊರಡಲಿಲ್ಲ ಬಾಯಿಂದ. ತಾಯಿಯ ಪೂರ್ಣಾನುಗ್ರಹವನ್ನು ನೆನೆದು ಕಣ್ಣಂಚಿನಲ್ಲಿ ಹನಿಗೂಡಿತು.

ಮಹಾಸ್ವಾಮಿಯವರ ಅಪ್ಪಣೆಯಂತೆ ಮಾರನೆಯ ದಿನದಿಂದಲೇ ಅರಮನೆಗೆ ಹೋಗಿ ಬರಲು ಪ್ರಾರಂಭಮಾಡಿದೆ. ಆ ಮಹಾ ತಾಯಿಯ ಅನುಗ್ರಹವೋ,

ಮುಮ್ಮಡಿ ಕೃಷ್ಣರಾಜ ಒಡೆಯರ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದ ವಿದ್ವಾಂಸರ ಮಗನೆಂದೋ, ವಿದ್ಯಾರ್ಜನೆ ಮಾಡುವ ಆಸಕ್ತಿಯುಳ್ಳ ಅನಾಥಬಾಲಕನೆಂದೋ, ಯಾವ ಕಾರಣದಿಂದಲೋ ಏನೋ, ಪ್ರಭುಗಳು ನನ್ನಲ್ಲಿ ಅಪಾರ ಕರುಣೆ ಅನುಗ್ರಹಗಳನ್ನು ತೋರುತ್ತ ಬಂದರು. ಹತ್ತಿರದ ಬಂಧುವಿನಂತೆ ನನ್ನನ್ನು ಕಂಡು ಕೊಳ್ಳುತ್ತಿದ್ದರು. 'ಮಕ್ಕಳಿಗೆ ಸ್ವಲ್ಪ ಸಂಸ್ಕೃತ ಪಾಠ ಹೇಳಿಕೊಡುತ್ತಿರಿ' ಎಂದು ಪ್ರಭುಗಳು ಒಂದು ದಿನ ಅಪ್ಪಣೆ ಮಾಡಿದರು. ಅದರಂತೆ ಚಾಮರಾಜ ಒಡೆಯರ ಗಂಡು ಹೆಣ್ಣುಮಕ್ಕಳೆಲ್ಲರಿಗೂ ಸಂಸ್ಕೃತ ಪಾಠವನ್ನು ಹೇಳುತ್ತ ಬಂದೆ. ಒಂದು ದಿನ ನನ್ನ ಮಾನಪರೀಕ್ಷೆಯಾಗುವ ಸಂದರ್ಭ ಬಂದೊದಗಿತು. ಪಾಠ ನಡೆಯು ತ್ತಿದ್ದಾಗ ಹೆಣ್ಣುಮಗುವಿನ ಕೈಯಲ್ಲಿದ್ದ ವಜ್ರದ ಬಳೆ ಅಂದು ಕಾಣಿಸಲಿಲ್ಲ. ನನಗೆ ಬಹಳ ದಿಗಿಲಾಯಿತು. ಒಡನೆಯೇ ಪ್ರಭುಗಳ ಸನ್ನಿಧಿಗೆ ಓಡಿಹೋಗಿ ನಡೆದ ಸಂಗತಿಯನ್ನು ಅರಿಕೆಮಾಡಿದೆ, 'ಮಹಾಪ್ರಭು! ದಯಮಾಡಿ, ಈ ಗುರುತರವಾದ ಜವಾಬ್ದಾರಿಯಿಂದ ನನ್ನನ್ನು ಮನ್ನಿಸಬೇಕು. ಪುಟ್ಟ ಬುದ್ಧಿ ಯವರ ಕೈಯ್ಯಲ್ಲಿದ್ದ ವಜ್ರದ ಬಳೆ ಕಾಣಿಸಲಿಲ್ಲ ಇವತ್ತು. ಎಲ್ಲಿ ಹೋಯಿತೋ ನಾನರಿಯೆ. ಪದಾರ್ಥ ಒಂದು ಕಡೆ ಕಳುವಾದರೆ ಅನುಮಾನ ಸಾವಿರ ಕಡೆ ಹುಟ್ಟುತ್ತದೆ ಮಹಾಸ್ವಾಮಿ' ಎಂದು ಬಿನ್ನವಿಸಿಕೊಂಡೆ. 'ನೀವೇನೂ ದಿಗಿಲು ಪಡುವ ಅಗತ್ಯವಿಲ್ಲ, ನಿಮ್ಮಲ್ಲಿ ನಮಗೆ ಸಂಪೂರ್ಣ ವಿಶ್ವಾಸವಿದೆ' ಎಂದು ಪ್ರಭುಗಳು ಅಪ್ಪಣೆ ಕೊಡಿಸುತ್ತಿರುವಂತೆಯೇ 'ಮಹಾಸ್ವಾಮಿ! ಚಿಕ್ಕ ಬುದ್ಧಿ ಯವರ ವಜ್ರದ ಬಳೆ ಸುಪ್ಪತ್ತಿಗೆಯ ದಿಂಬಿನ ಸಂದಿಯಲ್ಲಿ ಬಿದ್ದಿತ್ತು. ಪರಾಂಬರಿಸ ಬೇಕು' ಎಂದು ಅರಮನೆಯ ಹಿರಿಯ ಊಳಿಗದವನೊಬ್ಬ ವಜ್ರದ ಬಳೆಯನ್ನು ಪ್ರಭುಗಳಿಗೆ ತಂದೊಪ್ಪಿಸಿದ. 'ಪಾರಾದೆಯಾ ವಿಪತ್ತಿನಿಂದ ಬಡ ಜೀವವೇ' ಎಂದು ಮನಸ್ಸು ಹಗುರಾಯಿತು.

ಪ್ರಭುಗಳ ಕಟಾಕ್ಷವೇನೋ ನನ್ನ ಮೇಲೆ ಬಿದ್ದಿತ್ತು, ನಿಜ. ಆದರೆ ನನ್ನ ಆಸೆ ಮಾತ್ರ ಇನ್ನೂ ಕನಸಾಗಿಯೇ ಉಳಿದಿತ್ತು. ಹತ್ತಿರ ಹತ್ತಿರ ಒಂದು ವರ್ಷವಾಗುತ್ತ ಬಂದರೂ ಪ್ರಭುಗಳು ನನ್ನ ಸಂಗೀತ ಶಿಕ್ಷಣದ ವಿಷಯವನ್ನೇ ಎತ್ತಿರಲಿಲ್ಲ. ಒಂದು ದಿನ ದೊರೆಗಳು ಆರೋಗಣೆ ಬೆಳಸಿ ಪ್ರಸನ್ನಚಿತ್ತರಾಗಿ ಒಬ್ಬರೇ ಆರಾಮ ಕುರ್ಚಿಯಲ್ಲಿ ಕುಳಿತಿದ್ದ ಸಮಯದಲ್ಲಿ ನನ್ನ ಕೋರಿಕೆಯನ್ನು ಮತ್ತೆ ನಿವೇದಿಸಿದೆ. ಮುಹೂರ್ತ ಕೂಡಿ ಬಂದಿತ್ತು. ಖಜಾನೆ ನರಸಿಂಹಯ್ಯ ನವರಿಗೆ ಹೇಳಿ ಕಳುಹಿಸಿ 'ಇವರಿಗೆ ಬೇಕಾದ ಉಡುಗೆ ತೊಡುಗೆಗಳನ್ನು ಮಾಡಿಸಿಕೊಟ್ಟು, ವಿದ್ಯಾರ್ಥಿವೇತನ ಕೊಟ್ಟು, ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರಿಗೆ ಪರಿಚಯ ಪತ್ರ ಬರೆಯಿಸಿಕೊಟ್ಟು ತಿರುವೈಯ್ಯಾರಿಗೆ ಕಳುಹಿಸಿಕೊಡಿ'

ಎಂದು ಅಪ್ಪಣೆ ಕೊಡಿಸಿದರು. ಸ್ವರ್ಗಕ್ಕೆ ಎರಡೇ ಬೆರಳೋ ಎನ್ನಿಸಿತು ನನಗೆ. ಅಂದು ಆ ಶುಭಘಳಿಗೆಯಲ್ಲಿ ನನ್ನ ಪ್ರಭು ನನ್ನ ಬಾಳ ಹಣತೆಗೆ ತೈಲಧಾರೆ ಯೆರೆದರು. ನನ್ನ ಜೀವನಪಥವನ್ನು ಇಂದಿಗೂ ಬೆಳಗುತ್ತಿರುವುದು ಆ ಮಂಗಳ ಜ್ಯೋತಿಯೇ ಎಂದು ನನ್ನ ನಿಶ್ಚಲ ನಂಬಿಕೆ.

ತಿರುವೆಯ್ಯಾರಿನಲ್ಲಿ ಆರು ವರ್ಷಗಳ ಕಾಲ ಗುರುಕುಲವಾಸಮಾಡಿ, ಗುರುಗಳ ಅನುಗ್ರಹಪಡೆದು ಮೈಸೂರಿಗೆ ಹಿಂದಿರುಗಿದೆ. ಎಂದಿಗೆ ನನ್ನ ಪ್ರಭುಗಳನ್ನು ನೋಡಿಯೇನೋ, ಕೆರೆಯ ನೀರನು ಕೆರೆಗೆ ಚೆಲ್ಲಿ ಕೃತಾರ್ಥನಾದೇನೋ, ಎಂಬ ತವಕದಿಂದ ಅರಮನೆಗೆ ಬಂದೆ. ಅಂದು ಪ್ರಭುಗಳ ಸಮ್ಮುಖದಲ್ಲಿ ನನ್ನ ವಿದ್ಯಾಭ್ಯಾಸಂಗದ ವಿವರಗಳನ್ನು ಅರಿಕೆಮಾಡುವಾಗ್ಗೆ ಮಹಾಸ್ವಾಮಿಯವರಿಗೆ ಮೈಯೆಲ್ಲ ಕಿವಿ, ತಾವು ನೆಟ್ಟ ಸಸಿ ಫಲಬಿಡುವಂತಾಯಿತಲ್ಲ ಎಂಬ ಮನೋಭಾವ ಎದ್ದುಕಾಣುತ್ತಿತ್ತು ಅವರಲ್ಲಿ. ಸಂಜೆ ಅರಮನೆಯಲ್ಲಿ ಎಂದಿನಂತೆ ಶೇಷಣ್ಣನವರೂ ಸುಬ್ಬಣ್ಣನವರೂ ವೀಣೆ ಸುಬ್ಬರಾಯರೂ ಸೇರಿದಾಗ ಗುರುಗಳಿಂದ ಕಲಿತ ಎರಡಕ್ಷರವನ್ನು ಮಹಾಸ್ವಾಮಿಯವರಿಗೆ ಅರ್ಪಿಸುವ ಸೌಭಾಗ್ಯವೂ ಪ್ರಾಪ್ತವಾಯಿತು. 'ಮೈಸೂರಿನ ಕೀರ್ತಿಯನ್ನು ಬೆಳಗುವಂತೆ ಆಶೀರ್ವದಿಸಿ ಆಚಾರ್ಯರನ್ನು' ಎಂದು ಪ್ರಭುಗಳು ಶೇಷಣ್ಣನವರಿಗೂ ಸುಬ್ಬಣ್ಣನವರಿಗೂ ಹೇಳಿದರು. ಆ ಸುದಿನವನ್ನು ಎಂದೆಂದೂ ಮರೆಯಲಾರೆ. ಅಂದು ಮೊದಲುಗೊಂಡು ಪ್ರಭು ಚಾಮರಾಜ ಒಡೆಯರವರು ನಮ್ಮನ್ನಗಲಿದವರೆಗಿನ ಕಾಲವನ್ನು ನನ್ನ ಜೀವಮಾನದ ಸ್ವರ್ಣಯುಗವೆಂದು ಹೇಳಬಹುದು. ಆಗರ್ಭಶ್ರೀಮಂತ ಸುಬ್ಬಣ್ಣನವರ ಮನೆಯಲ್ಲಿ ಮೃಷ್ಟಾನ್ನ ಭೋಜನ. ಉಳಿದ ಸಮಯವೆಲ್ಲ ಅರಮನೆಯಲ್ಲಿ ಪ್ರಭುಗಳ ಸನ್ನಿಧಿಯಲ್ಲಿ; ರಸಿಕ ಶಿಖಾಮಣಿಗಳ ಸಹವಾಸದಲ್ಲಿ! ವಿದ್ವಜ್ಜನರ ಸತ್ಸಂಗದಲ್ಲಿ ಕಳೆಯುತ್ತಿದ್ದ ಕಾಲ ಅದು!

೨. ಅರಮನೆಯಲ್ಲಿ

ಅರಮನೆಯಲ್ಲಿ ನಾವು ಕಂಡುನೋಡಿದ ವಿನೋದ ಪ್ರಸಂಗಗಳಿಗೆ ಲೆಕ್ಕವೇ ಇಲ್ಲ. ಅಂಥ ರಸದೌತಣವನ್ನು ನೀಡುತ್ತಿದ್ದವರಲ್ಲಿ ಮರಿಪಂಡಿತರು ಒಬ್ಬರು. ಅವರನ್ನು ಮರಿಶೆಟ್ಟರು ಎಂದೂ ಕರೆಯುವ ವಾಡಿಕೆಯಿದ್ದಿತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಹಿರಿಯರು. ದಿವಾನ್ ರಂಗಾಚಾರ್ಲು, ದಿವಾನ್ ಶೇಷಾದ್ರಿ ಅಯ್ಯರ್ ಮೊದಲು ಮಾಡಿಕೊಂಡು ಎಲ್ಲರಿಗೂ ಮರಿಶೆಟ್ಟರಲ್ಲಿ ಗೌರವ. ಅರಮನೆಯ ಆಸ್ಪತ್ರೆಯಲ್ಲಿ ಯಾವುದೋ ಒಂದು ಕೆಲಸ ಅವರಿಗೆ. ಏನು ಕೆಲಸ ಎಂಬುದು ನೆನಪಿಲ್ಲ. ಪಂಡಿತರು ಬಲು ನಿಃಸ್ಪೃಹರು, ಖಂಡಿತವಾದಿಗಳು, ಸ್ವಾಮಿಭಕ್ತರು. ಚಾಮರಾಜಒಡೆಯರ ಸನ್ನಿಧಾನದಲ್ಲೇ ನಾವು ವಿಶೇಷವಾಗಿ ಓಡಾಡಿಕೊಂಡಿದ್ದುದರಿಂದ ನನಗೂ ಪಂಡಿತರಿಗೂ ಸ್ನೇಹ ವಿಶ್ವಾಸ ಬೆಳೆಯುವುದಕ್ಕೆ ಅವಕಾಶವಾಯಿತು. ಪಂಡಿತರಿಗೆ ಕವಿತ್ವಮಾಡುವ ಹುಚ್ಚು ಬಹಳ. ಯಾವಾಗಲೂ ಕಂಕುಳ ಸಂದಿಯಲ್ಲಿ ಒಂದು ಕಂತೆ ಕಾಗದ, ಸೀಸದಕಡ್ಡಿ ಇದ್ದೇ ಇರಬೇಕು. ಯಾವಾಗ ಯಾರಲ್ಲಿಗೆ ಹೋಗುವುದಕ್ಕೂ ಅವರಿಗೆ ಕಟ್ಟುನಿಟ್ಟಿರುತ್ತಿರಲಿಲ್ಲ. ಹದಿನೈದು ದಿನಕ್ಕೊಮ್ಮೆಯಾದರೂ ದಿವಾನ್ ಶೇಷಾದ್ರಿಗಳ ಮನೆಗೆ ಹೋಗುತ್ತಿದ್ದರು.

"ಏನು ಪಂಡಿತರೇ."

"ಎಲ್ಲ ಸ್ವಾಮಿ ಕೃಪೆ."

"ಏನು ದಯಮಾಡಿಸಿದ್ದು ?"

"ಏನು ಇಲ್ಲ ನನ್ನ ಒಡೆಯ, ನನಗೇನು ಆಗಬೇಕಾದ್ದಿಲ್ಲ, ಅಥವಾ ನನ್ನ ಕಡೆಯವರಲ್ಲಿ ಯಾರಿಗೂ ಕೆಲಸಮಾಡಿಸಿಕೊಡಲೂ ಬಂದಿಲ್ಲ. ತಾವು ದೊಡ್ಡ ಪದವಿಯಲ್ಲಿದ್ದೀರಿ, ಪುಣ್ಯವಂತರು, ಸುಮ್ಮನೆ ತಮ್ಮ ದರ್ಶನ ಪಡೆದು ಹೋಗೋಣ, ಅಂತ ಬಂದೆ. ದೇವರು ತಮ್ಮನ್ನು ಚೆನ್ನಾಗಿಟ್ಟಿರಲಿ, ನನ್ನೊಡೆಯ."

ಇಷ್ಟು ಹೇಳಿ ಅಲ್ಲಿಂದ ಶೇಷಾದ್ರಿಅಯ್ಯರ್ ಅವರ ಪತ್ನಿ ಧರ್ಮಮ್ಮನವರಲ್ಲಿಗೆ ಹೋಗಿ ಕೈಮುಗಿದು, ಆ ಬಳಿಕ ಶೇಷಾದ್ರಿಅಯ್ಯರ್ ಅವರ ಮಕ್ಕಳು ದೊರೆಸ್ವಾಮಿಗಳನ್ನು ಕಂಡು, ಸುಮ್ಮನೆ ಬಂದೆ ನನ್ನೊಡೆಯಾ. ಅಪ್ಪಾಜಿಯವರನ್ನು ಕಂಡಿದ್ದೆ. ಅಮ್ಮಯ್ಯನನ್ನೂ ನೋಡಿದ್ದೆ. ಹಾಗೆಯೇ ಪುಟ್ಟಬುದ್ಧಿಯವರನ್ನೂ ಭೇಟಿಮಾಡಿ ಹೋಗೋಣ ಎಂದು ಬಂದೆ ಅಷ್ಟೆ'

ಎಂದು ಹೇಳಿ ಹೊರಡುತ್ತಿದ್ದರು. ಹೀಗೆಯೇ ಎಲ್ಲ ಉನ್ನತ ಅಧಿಕಾರಿಗಳನ್ನೂ ಆಗಿಂದಾಗ್ಗೆ ಭೇಟಿಮಾಡುತ್ತಿದ್ದರು. ಒಬ್ಬರಿಂದ ಒಂದು ಕಾಸಿನ ಸಹಾಯ ವನ್ನೂ ಅಪೇಕ್ಷಿಸುತ್ತಿರಲಿಲ್ಲ. ಆದಕಾರಣ ಯಾರನ್ನು ಕಂಡರೂ ಅವರಿಗೆ ಹೆದರಿಕೆ ಯಿರಲಿಲ್ಲ, ದಾಕ್ಷಿಣ್ಯವಿಲ್ಲದೆಯೇ ಮಾತಾಡುತ್ತಿದ್ದರು.

ಚಾಮರಾಜ ಒಡೆಯರು ವಿನೋದಪ್ರಿಯರು. ಸುತ್ತಮುತ್ತ ಇರುತ್ತಿದ್ದ ನಮ್ಮಗಳಿಂದ ಮರಿಪಂಡಿತರನ್ನು ಕೆಣಕಿಸಿ ಅವರನ್ನು ರೇಗಿಸಿ ಒಳಗೊಳಗೇ ನಕ್ಕು ಸಂತೋಷಪಡುತ್ತಿದ್ದರು. ಮಧ್ಯಾಹ್ನ ಊಟವಾದಮೇಲೆ ದೊರೆಗಳು ಆರಾಮಕುರ್ಚಿಯಲ್ಲಿ ಕುಳಿತು ಲೋಕಾಭಿರಾಮವಾಗಿ ಮಾತನಾಡುತ್ತ ವಿಶ್ರಮಿಸಿಕೊಳ್ಳುವುದು ವಾಡಿಕೆ. ಪಕ್ಕದಲ್ಲಿ ದಫೇದಾರ್ ರುದ್ರಪ್ಪನವರು ನಿಂತು ಬಿಸಿಬಿಸಿಯಾಗಿ ಹುರುಳಿ ಹಪ್ಪಳವನ್ನು ಸುಟ್ಟು, ತುಪ್ಪಸವರಿ ಚೂರುಚೂರಾಗಿ ದೊರೆಗಳಿಗೆ ಮುರಿದುಕೊಡುತ್ತಿದ್ದರು. ಕಾಂತರಾಜೇ ಅರಸಿನವರು, ದೊಡ್ಡ ಲಿಂಗಪ್ಪಾಜಿಯವರು, ಬಕ್ಷಿ ಬಸಪ್ಪಾಜಿಯವರು, ಪುರೋಹಿತ ಪುಟ್ಟಣ್ಣನವರು, ಶೇಷಣ್ಣ ಸುಬ್ಬಣ್ಣ ಸುಬ್ಬರಾಯರು ಮತ್ತು ನಾನು, ಇಷ್ಟುಮಂದಿ ಮಾತ್ರ ಪ್ರಭು ಗಳ ಸಮೀಪದಲ್ಲಿರುತ್ತಿದ್ದೆವು. ಆ ವೇಳೆಗೆ ಮರಿಪಂಡಿತರ ಪ್ರವೇಶವಾಗುತ್ತಿತ್ತು. ಕವಿತ್ವದ ಹಾಳೆಗಳ ಗಂಟು ಕಂಕುಳಲ್ಲಿ ಸಿದ್ಧವಾಗಿಯೇ ಇರುತ್ತಿತ್ತೆಂದು ಪ್ರತ್ಯೇಕ ವಾಗಿ ಹೇಳಬೇಕಾದುದೇ ಇಲ್ಲ.

"ಏನು ಮರಿಪಂಡಿತರೇ ?"

"ಅಡ್ಡಬಿದ್ದೆ ಮಹಾಪ್ರಭು."

"ಏನು ಸಮಾಚಾರ? ಏನಾದರೂ ಹೊಸ ಕವನಗಳುಂಟೋ ?"

"ಇಲ್ಲದೆ ಉಂಟೆ, ಮಹಾಸ್ವಾಮಿ ? ತಾಯಿ ಚಾಮುಂಡೇಶ್ವರಿ ಅನುಗ್ರಹ ದಿಂದ ಏನೋ ಒಂದೆರಡು ಕವನಗಳನ್ನು ಬರೆದುತಂದಿದ್ದೀನಿ. ಪರಾಂಬರಿಸ ಬೇಕು."

"ಬಹಳ ಸಂತೋಷ ಓದೋಣವಾಗಲಿ ಪಂಡಿತರೆ."

'ಅಮ್ಮ ನೀ ಕೇಳವ್ವ ಚಾಮುಂಡವ್ವ' ಎಂದು ರಾಗವಾಗಿ ಪಂಡಿತರು ತಮ್ಮ ಕವನವನ್ನು ಓದುವುದಕ್ಕೆ ಮೊದಲು ಮಾಡುತ್ತಿದ್ದರು. ಅವರು ಓದುತ್ತಿದ್ದಂತೆಯೇ ಪ್ರಭುಗಳು ಕಣ್ಣು ಸಂಜ್ಞೆಮಾಡಿ ಪುರೋಹಿತ ಪುಟ್ಟಣ್ಣನವರಿಗೆ ಯಾವುದಾದರೂ ಅಡ್ಡಮಾತನ್ನು ತೆಗೆಯುವಂತೆ ಸೂಚಿಸುತ್ತಿದ್ದರು.

"ಮಹಾಸ್ವಾಮಿ ನಿನ್ನೆ ಸಾಯಂಕಾಲ ಕಬ್ಬನ್‌ಪೇಟೆಯಲ್ಲಿ ಬರುತ್ತಿದ್ದಾಗ ...." ಎಂದು ಪುಟ್ಟಣ್ಣನವರು ಪ್ರಾರಂಭಮಾಡುತ್ತಿದ್ದಂತೆಯೇ ಪಂಡಿತರಿಗೆ ಕಣ್ಣು ಕೆಂಡವಾಗುತ್ತಿತ್ತು.

"ಏನ್ರಯ್ಯ ಅದು ಮಧ್ಯ ಮಾತಾಡೋದು?" ಎಂದು ರೇಗಿ ಮತ್ತೆ ಪಂಡಿತರು ಪ್ರಾರಂಭಮಾಡುತ್ತಿದ್ದರು: "ಅಮ್ಮ ನೀ ಕೇಳವ್ವ ಚಾಮುಂಡವ್ವ ...."

ಸರಿ, ಮತ್ತೆ ಮಹಾರಾಜರು ಕಣ್ಣು ಮಿಟುಕಿಸುವುದು. ಯಾರಾದರೂ ಅಡ್ಡಮಾತನ್ನು ತೆಗೆಯುವುದು.

"ಏನ್ರಯ್ಯ ಅದು! ಬುದ್ಧಿಗಿದ್ಧಿ ಇದೆಯೋ ಇಲ್ವೋ? ನಾನು ಕವಿತ್ವ ಓದುತ್ತಿದ್ದೀನಿ ಪ್ರಭುಗಳು ಲಾಲಿಸುತ್ತಿದ್ದಾರೆ. ಮಧ್ಯೆ ಕಾಡುಹರಟೆ ತೆಗೆಯೋಣ ಅಂದರೇನು? ಮೈಮೇಲೆ ಜ್ಞಾನ ಇದೆಯೊ ಇಲ್ಲವೋ?" ಎಂದು ರೇಗಿ ಕವನವನ್ನು ಮತ್ತೆ ಓದಲುಪಕ್ರಮಿಸುತ್ತಿದ್ದರು. ಮಹಾರಾಜರಿಗೆ ಒಳಗೊಳಗೇ ನಗು. ಹೀಗೆಯೇ, ನಾಲ್ಕಾರು ಸಲ ಕಾವ್ಯಧಾರೆಯ ಓಟಕ್ಕೆ ತಡಬಂದಾಗ, ಪಂಡಿತರ ತಾಳ್ಮೆ ಮೀರುತ್ತಿತ್ತು. "ಛೀ! ಸ್ವಲ್ಪವೂ ಮಾನ ಮರ್ಯಾದೆ ಇಲ್ಲ! ಅವಿವೇಕಿಗಳು! ರಾಜಾಸ್ಥಾನ ಎಂದರೆ ಗೌರವ, ಹೆದರಿಕೆ ಎನ್ನುವುದೇ ಇಲ್ಲ. ಅರಸಿಕರ ಮುಂದೆ ನಾಲಗೆ ಒಣಗಿಸಿಕೊಳ್ಳೋದಕ್ಕೆ ಬಂದ ನನಗೆ ಮೊದಲೇ ಬುದ್ಧಿಯಿಲ್ಲ. ಮಹಾಸ್ವಾಮಿ ಇಗೋ ಹೊರಟೆ ನಾಳೆಯಿಂದ ಇಲ್ಲಿಗೆ ಕಾಲು ಹಾಕುವದಿಲ್ಲ" ಎಂದು ಕೋಪವನ್ನು ಕಾರಿ, ಕಾಗದಗಳನ್ನು ಸುರುಳಿ ಸುತ್ತಿ ಭದ್ರವಾಗಿ ಕಂಕುಳಲ್ಲಿಟ್ಟುಕೊಂಡು ಮೇಲೇಳುತ್ತಿದ್ದರು. ಆಗ, ಪ್ರಭುಗಳು, ಏನೂ ತಿಳಿಯದವರಂತೆ, "ಏನ್ರಯ್ಯ! ಸ್ವಲ್ಪವಾದರೂ ವಿವೇಕ ಬೇಡವೇ ನಿಮಗೆ? ಪಂಡಿತರು ಕವನಗಳನ್ನು ಓದುವಾಗ ಮಧ್ಯೆ ಮಧ್ಯೆ ಮಾತಾಡೋಣ ಅಂದರೇನು? ನಾಳೆಯಿಂದ ಹಾಗೆ ಮಾಡಕೂಡದು. ತಿಳಿಯಿತೋ?" ಎಂದು ಕಟ್ಟಪ್ಪಣೆ ಮಾಡಿ, "ಪಂಡಿತರೇ ಕೋಪಿಸಿಕೊಳ್ಳ ಬೇಡಿ. ಉಳಿದ ಕವನಗಳನ್ನು ನಾಳೆ ಓದುವಿರಂತೆ" ಎಂದು ಪಂಡಿತರನ್ನು ಸಮಾಧಾನ ಮಾಡಿ ಕಳುಹಿಸುತ್ತಿದ್ದರು.

ಒಂದು ದಿನ ಬೆಳಗ್ಗೆ ಪಂಡಿತರಿಗೆ ಏನು ಸ್ಫೂರ್ತಿ ಬಂದಿತೋ ಏನೋ ಕವನ ಬರೆಯಬೇಕೆಂಬ ಬಯಕೆ ಉತ್ಕಟಾವಸ್ಥೆಗೆ ಬಂದಿತ್ತು. ಆ ಸಮಯಕ್ಕೆ ಸರಿಯಾಗಿ ಹತ್ತಿರವಿದ್ದ ಕಾಗದ ಸೀಸದ ಕಡ್ಡಿಗಳೆಲ್ಲ ಮುಗಿದಿರಬೇಕೆ? ಶಾರದೆಯ ಆವೇಶ ಇಳಿಯುವಷ್ಟರಲ್ಲಿ ಪಂಡಿತರು ದರ್ಬಾರುಭಕ್ಷಿ ಅಂಬಿಲ್ ನರಸಿಂಹಯ್ಯಂಗಾರ್ಯರ ಕಛೇರಿಗೆ ಹೋಗಿ 'ಸ್ವಲ್ಪ ಕಾಗದ ಸೀಸದಕಡ್ಡಿ ಅಪ್ಪಣೆಯಾಗಬೇಕು ಒಡೆಯಾ' ಎಂದರು. ನರಸಿಂಹಯ್ಯಂಗಾರ್ಯರು ಯಾವುದೋ ಯೋಚನೆಯಲ್ಲಿ ಸಿಕ್ಕಿಬಿದ್ದಿದ್ದರು. ಆಫೀಸಿನ ಕಾಗದ ಪತ್ರ ಗಳನ್ನೆಲ್ಲ ಸುತ್ತ ಹರಡಿಕೊಂಡು ಕುಳಿತಿದ್ದರು. ಪಂಡಿತರನ್ನು ಸ್ವಲ್ಪ ಲಘುವಾಗಿ

ಮಾತನಾಡಿಸಿದರಂತೆ. "ಏನ್ರಯ್ಯ! ಯಾರ ಸಂಗಡ ಮಾತನಾಡುತ್ತಿದ್ದೀರಿ ಅನ್ನುವ ಪರಿಜ್ಞಾನವಿದ್ದ ಹಾಗೆ ಇಲ್ಲ, ನಿಮಗೆ! ನಿಮ್ಮ ತಂದೆಯವರ ಕಾಲ ದವನು ನಾನು, ನೀವು ಯಾವ ಲೆಕ್ಕ ನನಗೆ? ಅಧಿಕಾರ ಇದೇ ಅಂತ ಬಾಯಿಗೆ ಬಂದ ಹಾಗೆ ಮಾತನಾಡ್ತೀರಾ?" ಎಂದು ಹಾರಾಡಿ ಮರಿ ಪಂಡಿತರು ಅಲ್ಲಿಂದ ನೇರವಾಗಿ ಮಹಾರಾಜರ ಬಳಿಗೆ ಬಂದು ನಡೆದ ಸಂಗತಿಯು ನ್ನೆಲ್ಲ ಅರಿಕೆ ಮಾಡಿದರು.

"ಪಂಡಿತರೇ ನಿಮ್ಮ ವಿಷಯಕ್ಕೆ ಯಾರೂ ಬರದಂತೆ ನಾವು ನೋಡಿಕೊಳ್ಳು ತ್ತೇವೆ, ನೀವು ಯೋಚಿಸಬೇಡಿ" ಎಂದು ಹೇಳಿ ಮಹಾಸ್ವಾಮಿಗಳು ಶೆಟ್ಟರನ್ನು ಸಮಾಧಾನಪಡಿಸಿದರು. ಸಂಜೆ ಪಂಡಿತರು ಬಕ್ಷಿಯವರ ಕಛೇರಿಗೆ ಬಂದರು. ಬೆಳಗ್ಗೆ ತಲೆದೋರಿದ್ದ ಸಮಸ್ಯೆ ಬಗೆಹರಿದು, ಬಕ್ಷಿಯವರು ಎಂದಿನಂತೆ ಪ್ರಶಾಂತ ರಾಗಿದ್ದರು. ಪಂಡಿತರನ್ನು ಆದರದಿಂದ ಬರಮಾಡಿಕೊಂಡರು.

"ಏನು ಪಂಡಿತರೇ !"

"ಎಲ್ಲ ಸ್ವಾಮಿ ದಯ."

"ಏನು ಬಂದದ್ದು ?"

"ಸ್ವಲ್ಪ ಕಾಗದ ಸೀಸದಕಡ್ಡಿ ಅಪ್ಪಣೆಯಾಗಬೇಕು."

"ಅಗತ್ಯವಾಗಿ, ಲಾ! ಯಾರಲ್ಲಿ! ಒಳಗೆ ಹೋಗಿ ಪಂಡಿತರಿಗೆ ನಾಲ್ಕು ದಸ್ತು ಕಾಗದ ಒಂದು ಡರ್ಜ ಸೀಸದಕಡ್ಡಿ ತಂದುಕೊಡು."

"ಬರ್‍ತೀನಿ ನನ್ನೊಡೆಯಾ! ಧರ್ಮಪ್ರಭು, ನಿಮ್ಮ ವಂಶ ತಣ್ಣಗಿರಲಿ ಮಹಾರಾಜರು ಅಂದರೆ ನೀವೇ ನಿಜವಾದ ಮಹಾರಾಜರು. ಅವರು ಕೇವಲ ಮೂಲದೇವರು ಅಷ್ಟೆ, ತಾವು ಉತ್ಸವಮೂರ್ತಿಗಳು. ಅಡ್ಡಬಿದ್ದೆ ನನ್ನೊಡೆಯಾ", ಎನ್ನುತ್ತ ಪೆನ್ಸಿಲ್ ಕಾಗದ ತೆಗೆದುಕೊಂಡು ಪಂಡಿತರು ಕಾವ್ಯಾರಾಧನೆಗೆ ಹೊರಟರು. ಬೆಳಗಿನ ಬಿರುಗಾಳಿ ಸಂಜೆಯ ತಂಗಾಳಿಯಾಯಿತು.

ಸಾಯಂಕಾಲದ ವೇಳೆ, ಚಾಮರಾಜ ಒಡೆಯರು ಪಿಟೀಲು ನುಡಿಸುವುದೂ, ವೀಣೆ ಸುಬ್ಬಣ್ಣನವರು ಜತೆಯಲ್ಲಿ ಹಾಡುವುದೂ ಪದ್ಧತಿ. ಆ ಸಮಯದಲ್ಲಿ ನಾನೂ ಹಾಜರಿರುವಂತೆ ಅಪ್ಪಣೆಯಾಗಿತ್ತು. ಸಂಜೆಯ ಉಪಹಾರಕ್ಕಾಗಿ ಎರಡು ದೊಡ್ಡ ಬೆಳ್ಳಿಯ ತಟ್ಟೆಗಳ ತುಂಬ ತಿಂಡಿತೀರ್ಥ ಹಣ್ಣುಹಂಪಲು ಮಧುವನದಿಂದ ಎಳನೀರು ಎಳೇ ಸವತೆಕಾಯಿ—ಇಷ್ಟೆಲ್ಲ ಸರಬರಾಜಾಗು ತ್ತಿತ್ತು. ಸವತೆಕಾಯಿಯ ಸಿಪ್ಪೆತೆಗೆದು ಸಣ್ಣಗೆ ಹೋಳುಮಾಡಿ ಪ್ರಭುಗಳ ಮುಂದೆ ಹಿಡಿದರೆ ಮೂರು ಅಥವ ನಾಲ್ಕು ಹೋಳುಗಳನ್ನು ಮಾತ್ರ

ಬಾಯಿಗೆ ಹಾಕಿಕೊಳ್ಳುತ್ತಿದ್ದರು. ಎಳನೀರನ್ನು ಕುಡಿಯುತ್ತಿದ್ದರು, ಅಷ್ಟೆ. ಉಳಿದದ್ದೆಲ್ಲ ನಮ್ಮ ಪಾಲೇ! ನಮ್ಮ ಕಡೆ ನೋಡಿ 'ಹೂಂ ಆಗಲಿ, ಎನ್ನುತ್ತಿದ್ದರು ದೊರೆಗಳು ಹಸನ್ಮುಖದಿಂದ. ಬ್ರಾಹ್ಮಣರ ಬಿಡದಿಯಿಂದ, ಶಿವಭಕ್ತರ ಬಿಡದಿಯಿಂದ ಬೇರೆ ಬೇರೆ ತಿಂಡಿಗಳು ಬಂದಿರುತ್ತಿದ್ದವು. ಬ್ರಾಹ್ಮಣರ ಬಿಡದಿಯಿಂದ ಬಂದಿದ್ದ ತಟ್ಟೆಯೆಲ್ಲವನ್ನು ಖಾಲಿಮಾಡಿದ ಮೇಲೆ ಪ್ರಭುಗಳು 'ಕಂಠಪೂರ್ತಿಯಾಯಿತೋ ?' ಎಂಬ ಅರ್ಥ ಬರುವಂತೆ ಮೂಗಿನ ಕೆಳಗೆ ಬೆರಳನ್ನಿಟ್ಟು ಸಂಜ್ಞೆ ಮಾಡುತ್ತಿದ್ದರು. 'ಏನು ಮಹಾಸ್ವಾಮಿ! ಹಾಸ್ಯ ಮಾಡುತ್ತೀರಿ! ಅದೇನು ಬ್ರಾಹ್ಮಣರಿಗೆ ಮಾತ್ರ ಹೊಟ್ಟೆಯಿದೆ; ಬೇರೆ ಯಾರಿಗೂ ಇಲ್ಲವೇನು ?' ಎಂದು ಕೇಳುತ್ತಿದ್ದೆ. 'ಹಾಗಲ್ಲ ಆಚಾರ್ಯರೇ! ಕೋಪಿಸಿಕೊಳ್ಳಬೇಡಿ. ಬ್ರಾಹ್ಮಣೋ ಭೋಜನಪ್ರಿಯಃ—ಎಂದು ಕೇಳಿಲ್ಲವೇ ? ಇತರರಿಗಿಂತ ನಿಮಗೆ ಊಟ ಉಪಚಾರಗಳಲ್ಲಿ ಮಮತೆ ಹೆಚ್ಚು ಎಂದು ತಾತ್ಪರ್ಯ ಅಷ್ಟೆ' ಎಂದು ಸಮಾಧಾನಮಾಡುತ್ತಿದ್ದರು. ಜಾವಳಿ, ಲಾವಣ್ಯರಾಮ, ಸುಜನ ಜೀವನ ಎಂಬ ಸಣ್ಣ ಸಣ್ಣ ಕೀರ್ತನೆಗಳೆಂದರೆ ದೊರೆಗಳಿಗೆ ಪ್ರೀತಿ. ಸಣ್ಣ ದನಿಯಲ್ಲಿ ಹಾಡಬೇಕು. ಒಂದು ಸಂಜೆ ಸುಬ್ಬಣ್ಣನವರು ಸಂಗೀತ ವಿದ್ವಾಂಸರೆಲ್ಲರನ್ನೂ ಕರೆದುಕೊಂಡು ಬಂದು ಭೋಜನ ಕೂಟಕ್ಕೆ ಹೊರಟರು. ಅರಮನೆಗೆ ಬರುವುದು ತಡವಾಯಿತು. ದೊರೆಗಳ ಮನಸ್ಸಿಗೆ ಬೇಸರವಾಗಿತ್ತು. 'ನೋಡಿದಿರಾ ಮರಿಪಂಡಿತರೆ! ಒಬ್ಬ ವಿದ್ವಾಂಸರನ್ನೂ ಕಾಣೆ!' ಎಂದರು ಪ್ರಭುಗಳು. 'ನಾನು ಮೊದಲಿಂದಲೂ ತಮಗೆ ಹೇಳುತ್ತಿಲ್ಲವೇ ಮಹಾಪ್ರಭು! ಇವರಿಗೆ ಇಷ್ಟೊಂದು ಸಲಿಗೆ ಗೌರವ ಕೊಡಬೇಡಿ ಅಂತ! ಏನಾದರೂ ರಾಜಭಕ್ತಿ ಇದೆಯೇ ?' ಎಂದು ಪಂಡಿತರು ಬೆಂಕಿಗೆ ಗಾಳಿ ಬೀಸಿದರು. ಮಹಾರಾಜರು ಪಿಟೀಲನ್ನು ತೆಗೆದಿಟ್ಟು ಹೊರಟು ಹೋದರು. ಇಷ್ಟು ಹೊತ್ತಿಗೆ ಸುಬ್ಬಣ್ಣ, ಸುಬ್ಬರಾಯರು, ನಾನು, ಅರಮನೆಗೆ ಅವಸರವಸರವಾಗಿ ಬಂದೆವು. ಕೊಠಡಿಯಲ್ಲಿ ಮಹಾಸ್ವಾಮಿಯವರಿರಲಿಲ್ಲ. ಆಗಲೇ ಅರ್ಧ ಜೀವ ಹಾರಿ ಹೋದಂತಾಯಿತು ನಮಗೆ. ಹಿಂದುಗಡೆಯಿಂದ ಮರಿಪಂಡಿತರು ಬಂದು, 'ಏನ್ರಯ್ಯ ಏನಾಗಿತ್ತು ನಿಮಗೆಲ್ಲ ಇವತ್ತು ? ಎಷ್ಟು ಹೊತ್ತು ಕಾಯಬೇಕ್ರಯ್ಯ ಮಹಾರಾಜರು ನಿಮಗೋಸ್ಕರ ? ಮಹಾರಾಜರು ಕೋಪಿಸಿಕೊಂಡು ಪಿಟೀಲನ್ನು ನೆಲಕ್ಕೆ ಕುಕ್ಕಿ ಹೊರಟು ಹೋದರು. ಗ್ರಹಚಾರ ಬಿಡಿಸ್ತಾರೆ ನಾಳೆ. ಅನುಭವಿಸುವಿರಂತೆ' ಎಂದು ಅಂಜಿದವರ ಮೇಲೆ ಕಪ್ಪೆ ಎಸೆದರು. ಮಾರನೆಯ ದಿನ ಅರಮನೆಗೆ ಹೋಗುವುದಕ್ಕೆ ಎಲ್ಲರಿಗೂ ದಿಗಿಲು. ಹೋಗುವುದೋ ಬೇಡವೋ ಎಂದು ಎಲ್ಲರೂ ಹಿಂದು ಮುಂದೆ ನೋಡುತ್ತ

ಮಹಾಸ್ವಾಮಿಯವರ ಕೊಠಡಿಯ ಹೊರಗಡೆಯೇ ನಿಂತೆವು. ಸುತ್ತ ನಾವು ಗಳಿಲ್ಲದೆ ಮಹಾರಾಜರಿಗೂ ಕಾಲ ಕಳೆಯುವುದು ಕಷ್ಟವಾಗಿರಬೇಕು. ಮರಿಪಂಡಿತರನ್ನು ಕರೆದು, 'ಪಂಡಿತರೆ! ಪಿಟೀಲನ್ನು ನುಡಿಸಬೇಕು ಅಂತ ಆಸೆ. ಹತ್ತಿರ ವಿದ್ವಾಂಸರುಗಳಿಲ್ಲದೆ ಒಬ್ಬನೇ ಕುಳಿತು ನುಡಿಸುವುದಕ್ಕೆ ಬೇಜಾರು. ಏನು ಮಾಡೋಣ?' ಎಂದರು. 'ಮಹಾಸ್ವಾಮಿ! ಕವಿಗಳು, ಗಾಯಕರು, ನಟರು, ನೃತ್ಯಗಾರರು, ವೈದ್ಯರು, ವೇದಾಂತಿಗಳು—ಎಲ್ಲರೂ ಸುತ್ತಮುತ್ತ ಇದ್ದರೆ ತಾನೆ ರಾಜಾಂಗ ಎನ್ನಿಸಿಕೊಳ್ಳುವುದು? ತಮಗೊಂದು ಭೂಷಣ? ಇಲ್ಲದೆ ಹೋದರೆ ತಾವೂ ಒಂದೆ, ನಾನೂ ಒಂದೆ. ಪ್ರಭುಗಳು ಚಿತ್ತಕ್ಕೆ ಆಯಾಸಮಾಡಿಕೊಳ್ಳಬಾರದು. ನಾನೇ ಹೋಗಿ ಸಂಗೀತ ವಿದ್ವಾಂಸರುಗಳನ್ನು ಕರೆದುಕೊಂಡು ಬರ್ತೀನಿ' ಎಂದರು ಪಂಡಿತರು. ಹೊರಗಡೆ ಕಾದಿದ್ದ ನಮ್ಮನ್ನು ಸಂಗಡ ಕರೆದುಕೊಂಡು ಪ್ರಭುಗಳ ಸನ್ನಿಧಿಗೆ ಬಂದು 'ಮಹಾಸ್ವಾಮಿ! ಇಗೋ ವಿದ್ವಾಂಸರನ್ನು ಕರೆತಂದಿದ್ದೇನೆ. ನೆನ್ನೆಯ ದಿನ ಯಾವುದೋ ಭೋಜನಕೂಟಕ್ಕೆ ಹೋಗಿದ್ದು ಬರುವುದು ತಡವಾಯಿತಂತೆ. ದಯಮಾಡಿ ಇವರ ತಪ್ಪನ್ನು ಕ್ಷಮಿಸಬೇಕು. ಇವರ ಪರವಾಗಿ ನಾನು ಖಾವಂದರಲ್ಲಿ ಕ್ಷಮಾಪಣೆ ಕೇಳಿಕೊಳ್ಳುತ್ತೇನೆ' ಎಂದು ಮರಿಪಂಡಿತರು ಉದ್ದಕ್ಕೆ ಅಡ್ಡಬಿದ್ದರು ಪ್ರಭುಗಳಿಗೆ. ಪ್ರಭುಗಳ ಮುಖದ ಮೇಲೆ ಪ್ರಸನ್ನತೆ ಮೂಡಿತು. ನಮಗೂ ಹೋದ ಜೀವ ಕೂಡಿಕೊಂಡಿತು. ಅಂದು ನಮ್ಮ ಭಾಗಕ್ಕೆ ಮರಿಪಂಡಿತರೇ ಭಯಕೃದ್ಭಯನಾಶಕಃ!

ಮಹಾಸ್ವಾಮಿಯವರಿಗೆ ಊಟ ಬಡಿಸುವಾಗ್ಗೆ ಅವರೆದುರು ಒಂದು ದೃಷ್ಟಿ ಎಲೆಯನ್ನು ಹಾಕುತ್ತಿದ್ದರು. ಪ್ರಭುಗಳಿಗೆ ಬಡಿಸುತ್ತಿದ್ದ ಅಡುಗೆಯೆಲ್ಲವನ್ನೂ ಅದಕ್ಕೆ ಬಡಿಸಿ, ಅದನ್ನು ಬಡಬಗ್ಗರಿಗೆ ನೀಡುತ್ತಿದ್ದರು. ಆದರೆ ಸಾಧಾರಣ ವಾಗಿ ಆ ಎಲೆ 'ಒಡ್ಡ ಒಡ್ಡ' ಎಂದು ಜನ ಕರೆಯುತ್ತಿದ್ದ ಒಬ್ಬಾತನಿಗೆ ಮೀಸಲು. ನಾನು ನೋಡಿದ ಭಗವದ್ಭಕ್ತರಲ್ಲಿ ಈ 'ಒಡ್ಡರು' ಒಬ್ಬರು. ಈತ ಆಜಾನುಬಾಹು. ದೊಡ್ಡ ನಿಲುವಂಗಿ, ಕೌಪೀನ ಮತ್ತು ಹೆಗಲ ಮೇಲೆ ಒಂದು ಚೌಕ, ಇವು ಆತನ ಉಡುಪು. ಯಾವಾಗಲೂ 'ನಾರಾಯಣ ನಾರಾಯಣ' ಎನ್ನುತ್ತ ಸರಸರನೆ ನಡೆಯುತ್ತಿದ್ದರು. ಎಲ್ಲಿಗೆ ಹೋಗುತ್ತಿದ್ದರು, ಏನು ಮಾಡು ತ್ತಿದ್ದರು. ದೇವರೆ ಬಲ್ಲ. ಮೈಸೂರಿನಲ್ಲಿ ಎಲ್ಲೆಲ್ಲಿ ದೇವಸ್ಥಾನಗಳಿವೆಯೋ ಅಲ್ಲೆಲ್ಲ ಈತ ಗಂಟೆಗಳನ್ನು ಹಾಕಿಸಿದ್ದರು. ನಾನು ನೋಡಿದ ಇನ್ನೊಬ್ಬ ಭಗವದ್ಭಕ್ತ ರೆಂದರೆ ಶಿವಪಾದಸ್ವಾಮಿಯವರು. ರೀಜೆಂಟರ ಸನ್ನಿಧಿಗಾಗಲಿ, ಮಹಾರಾಜರ ಸನ್ನಿಧಿಗಾಗಲಿ, ಅಥವಾ ಬೇರೆ ಯಾವ ಉನ್ನತಾಧಿಕಾರಿಗಳ ಬಳಿಗಾಗಲೀ

ಹೋಗಿ ಬರಲೂ ಶಿವಪಾದಸ್ವಾಮಿಯವರಿಗೆ ಅಡ್ಡಿ ನಿಯಮಗಳಿದ್ದಿಲ್ಲ. ಎಲ್ಲಿಂದಲೋ ಬರುತ್ತಿತ್ತು ಹಣ; ಬಂದ ಹಣವೆಲ್ಲ ದೇವರ ಸೇವೆಗೆ ವಿನಿಯೋಗವಾಗುತ್ತಿತ್ತು. 'ಏಕೋ ದೇವಃ ಕೇಶವೋ ವಾ ಶಿವೋವಾ'—ಎನ್ನುವಂತೆ ಶಿವಪಾದಸ್ವಾಮಿಯವರ ದೃಷ್ಟಿಯಲ್ಲಿ ಎಲ್ಲ ದೇವರೂ ಒಂದೇ. ಅಮ್ಮನವರ ದೇವಸ್ಥಾನಕ್ಕೆ ಹೋದರೆ, 'ಏನವ್ವ! ಇದ್ಯಾಕಾ ಹೀಂಗೆ ನಿಂತಿದ್ದೀಯವ್ವಾ? ಎಣ್ಣೆ ಮಜ್ಜನಾ ಇಲ್ವಾ ನಿಂಗೆ' ಎನ್ನುತ್ತಾ ಸರಸರನೆ ಹೋಗಿ ಡಬ್ಬದ ತುಂಬ ಎಣ್ಣೆ ತಂದು ದೇವಸ್ಥಾನಕ್ಕೆ ಕೊಟ್ಟು ಸೇವೆ ನಡಸುತ್ತಿದ್ದರು. ಈಶ್ವರನ ದೇವಸ್ಥಾನಕ್ಕೆ ಹೋದರೂ ಅಷ್ಟೆ. ನಾರಾಯಣನ ಗುಡಿಗೆ ಹೋದರೂ ಅಷ್ಟೆ. ನೇರವಾಗಿ ದೇವರ ಸಂಗಡವೇ ಮಾತನಾಡುತ್ತಿದ್ದಾರೆಯೋ ಅನ್ನಿಸುತ್ತಿತ್ತು ಹತ್ತಿರವಿದ್ದವರಿಗೆ. ಒಂದು ಸಲ ಕಾರ್ತಿಕಮಾಸದ ಕಡೆಯ ಸೋಮವಾರದಂದು, ಈ ಮಹಾನುಭಾವ ಬೆಟ್ಟದ ಮೇಲಿನ ಬಸವನಿಗೆ ಕ್ಷೀರಾಭಿಷೇಕವನ್ನೇರ್ಪಡಿಸಿದ್ದರು! ಬಿಂದಿಗೆ ಬಿಂದಿಗೆಗಳ ತುಂಬ ಹಾಲು ಸಿದ್ಧವಾಯಿತು. ಅಭಿಷೇಕವಾದ ಹಾಲು, ಆ ಉನ್ನತ ಶಿಲಾಮೂರ್ತಿಯನ್ನು ನೆನಸಿ ಏಳನೂರು ಮೆಟ್ಟಲುಗಳನ್ನಿಳಿದು ಬೆಟ್ಟದ ಪಾದದವರೆಗೂ ಹರಿದು ಬಂದಿದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಶಿವಪಾದಸ್ವಾಮಿಯವರು ಒಂದು ಎತ್ತನ್ನು ಸಾಕಿದ್ದರು. ಹುಡುಕಿದರೂ ಒಂದು ಕಪ್ಪು ಚುಕ್ಕಿಯಿರಲಿಲ್ಲ ಆ ಎತ್ತಿನ ಮೈ ಮೇಲೆ. ಸೋರೆಹಕ್ಕಿಯಷ್ಟು ಬಿಳುಪು. ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ಅದನ್ನು ನೋಡಿಕೊಳ್ಳುತ್ತಿದ್ದರು. ದಿನಕ್ಕೆ ಎರಡು ಗೊನೆ ರಸಬಾಳೆ ಹಣ್ಣು ಅದಕ್ಕೆ! ಮಲಗಿಕೊಳ್ಳುವುದಕ್ಕೆ ಎರಡಡಿ ಎತ್ತರದ ಒಂದು ಸುಪ್ಪತ್ತಿಗೆ! ಸಾಕ್ಷಾತ್ ಬಸವೇಶ್ವರನೇ ಅದು ಎಂದು ಶಿವಪಾದಸ್ವಾಮಿಯವರ ಭಾವನೆ!

ಶಿವಪಾದಸ್ವಾಮಿಯವರನ್ನು ಜ್ಞಾಪಿಸಿಕೊಂಡಾಗಲೆಲ್ಲ ಜತೆಯಲ್ಲೇ ನನ್ನ ಕಣ್ಣುಮುಂದೆ ನಿಲ್ಲುವ ಇನ್ನೊಂದು ವ್ಯಕ್ತಿಯೆಂದರೆ ಬೆಂಗಳೂರಿನ ಮಹದೇವ ಶಾಸ್ತ್ರಿಗಳು. ಶಿವಪಾದಸ್ವಾಮಿಯವರಂತೆಯೇ ಇವರೂ ಸಹ ಬೀದಿಯಲ್ಲಿ ನಿಧಾನವಾಗಿ ನಡದದ್ದೇ ಇಲ್ಲ. ಅವಸರವಸರವಾಗಿ ಓಡಿಕೊಂಡು ಹೋಗುತ್ತಿದ್ದರು. ಆದರೆ ಶಾಸ್ತ್ರಿಗಳು ಯಾವಾಗಲೂ ಮೌನ. ರಸ್ತೆಯಲ್ಲಿ ಹೋಗುತ್ತ ಹೋಗುತ್ತ ತಮಗೆ ತೋರಿದವರ ಮುಂದೆ ನಿಂತು ಕೈಮುಂದೆ ಮಾಡುತ್ತಿದ್ದರು ಅವರು ಒಂದು ಬಿಡಿಗಾಸನ್ನೇ ಕೊಡಲಿ ಒಂದು ಸವರನ್ನನ್ನೇ ಕೊಡಲಿ ಕಣ್ಣೆತ್ತಿ ಸಹ ನೋಡದೆ ಪಕ್ಕದಲ್ಲಿ ಯಾರಿದ್ದರೆ ಅವರ ಕೈಯ್ಯಲ್ಲಿ ಅದನ್ನು ಹಾಕಿ ಶಾಸ್ತ್ರಿಗಳು ಮುಂದೆ ಹೋಗುತ್ತಿದ್ದರು. ಶಾಸ್ತ್ರಿಗಳ ಹಿಂದೆ ಯಾವಾಗಲೂ

ಹತ್ತಿಪ್ಪತ್ತು ಹುಡುಗರ ಗುಂಪು ಇದ್ದೇ ಇರುತ್ತಿತ್ತು. ತಮಗೆ ತೋಚಿದ ಅಂಗಡಿಗೆ ಹೋಗಿ ಕೈಗೆ ಬಂದದ್ದನ್ನು ಎತ್ತಿಕೊಂಡು ಮನಸ್ಸಿಗೆ ಬಂದವರಿಗೆ ಕೊಡುತ್ತಿದ್ದರು; ಯಾರೂ ಶಾಸ್ತ್ರಿಗಳ ಕೈಯ್ಯನ್ನು ತಡೆಯುತ್ತಿರಲಿಲ್ಲ. ಶಾಸ್ತ್ರಿಗಳು ಕೈ ಹಾಕಿದಲ್ಲಿ ಒಂದಕ್ಕೆ ನಾಲ್ಕರಷ್ಟು ಉತ್ಪತ್ತಿ ಹೆಚ್ಚು ಎಂದು ಎಲ್ಲರ ನಂಬಿಕೆ. ಹೀಗಿರುವಲ್ಲಿ ಒಂದು ಸಂಜೆ ಒಂದು ಅತಿ ವಿಚಿತ್ರ ಪ್ರಸಂಗ ನಡೆಯಿತು. ಬೆಂಗಳೂರು ಚಿಕ್ಕಪೇಟೆಯಲ್ಲಿ Densmore Typewriting Company ಎಂಬ ಒಂದು ಅಂಗಡಿಯಿತ್ತು. ಪ್ರತಿದಿನ ಸಂಜೆ ಹಲವಾರು ದೊಡ್ಡ ಮನುಷ್ಯರು ಅಲ್ಲಿ ಹರಟೆಗಾಗಿ ಸೇರುತ್ತಿದ್ದರು. ಆ ದಿನ ಯಾರನ್ನೋ ಕಾಣುವ ಸಲುವಾಗಿ ನಾನೂ ಅಲ್ಲಿಗೆ ಹೋಗಿದ್ದೆ. ಶಾಸ್ತ್ರಿಗಳು ಅಂಗಡಿಗೆ ಬಂದು ಅಂಗೈ ಮುಂದು ಮಾಡಿದರು. ಎದುರಿಗಿದ್ದಾತ ಶಾಸ್ತ್ರಿಗಳ ಕೈಗೆ ರೂಪಾಯಿ ನಾಣ್ಯವೊಂದನ್ನು ಇತ್ತರು. ಎಡ್ವರ್ಡ್ ದೊರೆಯ ನಾಣ್ಯ. ರೂಪಾಯಿ ಕೈಗೆ ಬಿದ್ದೊಡನೆಯೇ ಶಾಸ್ತ್ರಿಗಳು ಮುಖ ಚಿಕ್ಕದುಮಾಡಿಕೊಂಡು ನಾಣ್ಯವನ್ನು ಕೆಳಕ್ಕೆ ಎಸೆದು ಸೂತಕದವರನ್ನು ಮುಟ್ಟಿಸಿಕೊಂಡರೆ ಸ್ನಾನ ಮಾಡುವಂತೆ ಹತ್ತಿರವಿದ್ದ ಬೀದಿಯ ನಲ್ಲಿಯ ಬುಡದಲ್ಲಿ ಕುಳಿತು ಸ್ನಾನ ಮಾಡಿದರು. ಅಲ್ಲಿದ್ದವರಾರಿಗೂ ಇದರ ಅಭಿಪ್ರಾಯವಾಗಲಿಲ್ಲ. 'ಇದೊಂದು ಬಗೆಯ ಹುಚ್ಚು' ಎಂದರು ಒಬ್ಬಿಬ್ಬರು. ಮಾರನೆಯ ದಿನ ಬೆಳಗ್ಗೆ ಎಡ್ವರ್ಡ್ ದೊರೆಯ ಮರಣದ ವಾರ್ತೆ ನಗರದಲ್ಲೆಲ್ಲಾ ಹಬ್ಬಿದಾಗ ಎಲ್ಲರಿಗೂ ಆಶ್ಚರ್ಯ. ಮಹದೇವಶಾಸ್ತ್ರಿಗಳು ಹುಚ್ಚ ರಲ್ಲ, ಮಹಾ ಜ್ಞಾನಿಗಳು ಎಂದಂದುಕೊಂಡೆವು.

ಅರಮನೆಯಲ್ಲಿ ನಾನು ನೋಡಿದ ಹಿರಿಯ ವ್ಯಕ್ತಿಗಳಲ್ಲಿ ರಾಮಕೃಷ್ಣಪ್ಪ ನವರು ಒಬ್ಬರು. ಅರಮನೆ ಅಂಬಾವಿಳಾಸದಲ್ಲಿ ರಾಮಕೃಷ್ಣಪ್ಪನವರಿಗೆ ಶಿರಸ್ತೇದಾರರ ಕೆಲಸ. ರಾಮಕೃಷ್ಣಪ್ಪನವರು ನಿಃಸ್ಪೃಹ ಚಕ್ರವರ್ತಿ. ಸ್ವಾಮಿ ನಿಷ್ಠರು. ಸದಾಚಾರಸಂಪನ್ನರು. ತೆಳು ದೇಹ. ಕೆಂಪು ವರ್ಣ. ಕಟ್ಟೆಗೆಯವನ ಮೊದಲುಗೊಂಡು ಮಹಾರಾಜರವರೆಗೂ ರಾಮಕೃಷ್ಣಪ್ಪನವರಲ್ಲಿ ಪೂಜ್ಯ ಭಾವನೆ. ಸಹಾಯಕ್ಕಾಗಿ ಕೈಯೊಡ್ಡಿದವರಿಗೆ ನಾಸ್ತಿ ಎಂದಿದ್ದೇ ಇಲ್ಲ. ತಮ್ಮ ಹಾಸಿಗೆಯ ತಲೆದಿಂಬಿನ ಕೆಳಗೆ ಯಾವಾಗಲೂ ದೊಡ್ಡಾಣೆ (ಈಗಿನ ಎರಡಾಣೆ), ಪಾವಲಿ, ಅರ್ಧ ರೂಪಾಯಿ, ರೂಪಾಯಿ ನಾಣ್ಯಗಳನ್ನು ಬೇರೆಬೇರೆ ಪೊಟ್ಟಣ ಗಳಲ್ಲಿ ಕಟ್ಟಿ ಇಟ್ಟುಕೊಂಡಿರುತ್ತಿದ್ದರು. ಮನೆಗೆ ಯಾರು ಹೋಗಲಿ, ಅವರನ್ನು ಗೌರವದಿಂದ ಆತ್ಮೀಯತೆಯಿಂದ ಬರಮಾಡಿಕೊಂಡು ಅವರ ಯೋಗ್ಯತಾನು ಸಾರ ದಕ್ಷಿಣೆ ತಾಂಬೂಲವನ್ನು ಕೊಟ್ಟು ಕಳುಹಿಸುತ್ತಿದ್ದರು. ಒಂದು ಬಾರಿ

ಅವರ ಹುಟ್ಟಿದ ದಿನದಂದು ನನ್ನನ್ನು ಊಟಕ್ಕೆ ಬರಹೇಳಿದ್ದರು. ಧರ್ಮಾಧಿಕಾರಿ ಕುಂಭಕೋಣಂ ಶೇಷಾಚಾರ್ಯರೂ ಭೋಜನಕ್ಕೆ ದಯಮಾಡಿಸಿದ್ದರು. ಊಟಮಾಡುತ್ತಿರುವಾಗ್ಗೆ ಶೇಷಾಚಾರ್ಯರು ಅಂದ ಒಂದು ಮಾತು ಇನ್ನೂ ನನಗೆ ಚೆನ್ನಾಗಿ ಜ್ಞಾಪಕವಿದೆ. "ಯಮದೂತರೇನಾದರೂ ನಮ್ಮನ್ನು ಎಳೆದುಕೊಂಡು ಹೋಗಲು ಬಂದರೆ, 'ನಾವು ರಾಮಕೃಷ್ಣಪ್ಪನವರ ಪಂಕ್ತಿಯಲ್ಲಿ ಕೂತು ಭೋಜನಮಾಡಿದ್ದೇವೆ' ಎಂದುಬಿಡುತ್ತೇನೆ. ನಮ್ಮನ್ನು ಮುಟ್ಟಲೂ ಸಹ ಧೈರ್ಯಮಾಡಲಾರರು ಯಮದೂತರು" ಎಂದು ಹೇಳಿದರು ಶೇಷಾಚಾರ್ಯರು. ರಾಮಕೃಷ್ಣಪ್ಪನವರು ಅಷ್ಟು ಸಾತ್ವಿಕರು. ಮಹಾರಾಜರೇ ದಯಪಾಲಿಸಿದ್ದ ಗೌರವ ವಿಶೇಷಗಳನ್ನು ಸಹ ಬೇಡವೆಂದು ನಿರಾಕರಿಸಿ ನಿರಾಡಂಬರಜೀವಿಯಾಗಿದ್ದರು. ಮಹಾರಾಜರು ಬಹಳ ಬಲವಂತಮಾಡಿದ ಮೇಲೆ ಅರಮನೆಯ ಪೆಟ್ಟಿಗೆ ಗಾಡಿಯಲ್ಲಿ ಅರಮನೆಗೆ ಹೋಗಿ ಬರಲು ರಾಮಕೃಷ್ಣಪ್ಪನವರು ಒಪ್ಪಿದರು.

ಮಹಾರಾಜರನ್ನು ಬಿಟ್ಟು ಬೇರೆ ಯಾರಿಗೂ ರಾಮಕೃಷ್ಣಪ್ಪನವರು ಎದ್ದು ನಿಂತು ಕೈ ಮುಗಿಯುತ್ತಿರಲಿಲ್ಲ. ಕೂತಲ್ಲೇ ಗೌರವ ಸಲ್ಲಿಸುತ್ತಿದ್ದರು. ಇದನ್ನು ಕಂಡು ಕೆಲವು ಮೇಲಧಿಕಾರಿಗಳಿಗೆ ಒಳಗೊಳಗೇ ಅಸಮಾಧಾನ, ಆದರೆ ಈ ವಿಷಯವನ್ನು ಮಹಾರಾಜರ ಹತ್ತಿರ ಪ್ರಸ್ತಾಪಮಾಡುವ ಧೈರ್ಯ ಯಾರಿಗೂ ಇರಲಿಲ್ಲ. ಕೊನೆಗೂ ಒಬ್ಬ ಅಧಿಕಾರಿಗಳು ಧೈರ್ಯಮಾಡಿ ಮುಮ್ಮಡಿ ಕೃಷ್ಣರಾಜ ಒಡೆಯರ್, ಅವರಿಗೆ ವಿಷಯವನ್ನು ಅರಿಕೆಮಾಡಿದರು. "ರಾಮಕೃಷ್ಣಪ್ಪ ಬಹಳ ಹಿರಿಯರು ಪೂಜ್ಯರು. 'ಯಾರು ಬಂದರೂ ನೀವು ಏಳಬೇಕಾದ್ದಿಲ್ಲ' ಎಂದು ನಾವೇ ಅವರಿಗೆ ತಿಳಿಸಿದ್ದೇವೆ" ಎಂದು ಮಹಾರಾಜರು ಅಪ್ಪಣೆ ಕೊಡಿಸಿ ಎಲ್ಲರ ಬಾಯಿಗೂ ಬೀಗಮುದ್ರೆಯನ್ನೊತ್ತಿದ್ದರು.

ಒಂದು ಬಾರಿ ಹಣಕಾಸಿನ ಲೆಕ್ಕಾಚಾರದಲ್ಲಿ ಏನೋ ಸ್ವಲ್ಪ ಹೆಚ್ಚುಕಮ್ಮಿಯಾಗಿ ಇರಬೇಕಾದ ಮೊಬಲಗಿಗಿಂತ ಹಣ ಕಡಿಮೆಯಾಗಿದ್ದುದು ಕಂಡುಬಂತು. ರಾಮಕೃಷ್ಣಪ್ಪನವರಿಗೆ ಆಗದೆ ಇದ್ದ ಕೆಲವು ಬಂಧುಗಳು ಕೂಡಲೇ ಮಹಾರಾಜರ ಬಳಿಗೆ ಹೋಗಿ 'ರಾಮಕೃಷ್ಣಪ್ಪನವರು ಅರಮನೆಯ ಹಣವನ್ನು ನುಂಗಿದ್ದಾರೆ ಮಹಾಸ್ವಾಮಿ' ಎಂದು ದೂರುಹೇಳಿದರು. ರಾಮಕೃಷ್ಣಪ್ಪನವರನ್ನು ಬರಮಾಡಿಕೊಂಡು ವಿಷಯವೇನೆಂದು ಕೇಳಿದರು ದೊರೆಗಳು. 'ಮಹಾಸ್ವಾಮಿ! ಇಗೋ ಖಜಾನೆಯ ಈ ಬೀಗದ ಕೈಯನ್ನು ಪ್ರಭುಗಳು ಒಪ್ಪಿಸಿಕೊಳ್ಳಬೇಕು, ಸ್ವಾಮಿದ್ರೋಹಮಾಡುವ ಚೇತನವಲ್ಲ ಇದು' ಎಂದು ನುಡಿದು ರಾಮಕೃಷ್ಣಪ್ಪ ಅರಮನೆಯಿಂದ ಹೊರಬಿದ್ದರು. ಪ್ರಭುಗಳಿಗೆ ಧರ್ಮಸಂಕಟ

ಕ್ಕಿಟ್ಟುಕೊಂಡಿತು; ರಾಮಕೃಷ್ಣಪ್ಪ ಧರ್ಮರಾಯ, ಅರಮನೆಗೆ ಸೇರಿದ ಒಂದು ಕಿಲುಬು ಕಾಸಿನ ಮೇಲಿನ ಧೂಳನ್ನು ಸಹ ಮುಟ್ಟುವವರಲ್ಲ, ಎಂದು ಒಳ ಮನಸ್ಸು ನುಡಿಯುತ್ತಿತ್ತು. ಆದರೆ ಹಣ ಲೋಪವಾಗಿದ್ದ ಸಂಗತಿ ಪ್ರತ್ಯಕ್ಷ ವಾಗಿತ್ತು. ಸುಮಾರು ಇಪ್ಪತ್ತೈದು ದಿನಗಳು ಕಳೆಯುವಷ್ಟರಲ್ಲಿ ಲೆಕ್ಕಾಚಾರ ದಲ್ಲಿ ಆಗಿದ್ದ ತಪ್ಪು ಗೋಚರವಾಗಿ ಖಜಾನೆಯಲ್ಲಿ ಒಂದು ಕಾಸೂ ಲೋಪ ವಾಗಿಲ್ಲವೆಂದು ಸಿದ್ಧವಾಯಿತು. ಕೃಷ್ಣರಾಜ ಒಡೆಯರಿಗೆ ಒಂದು ಕಡೆ ಸಂತೋಷ ಇನ್ನೊಂದು ಕಡೆ ಪಶ್ಚಾತ್ತಾಪ. ರಾಮಕೃಷ್ಣಪ್ಪನವರ ಸತ್ಯಸಂಧತೆ ಸ್ಥಿರಪಟ್ಟಿತಲ್ಲ ಎಂದು ಹಿಗ್ಗು. ನಿಷ್ಕಾರಣವಾಗಿ ಅವರ ಮನಸ್ಸನ್ನು ನೋಯಿ ಸಿದೆನಲ್ಲ ಎಂದು ಮರುಕ. ಹರಿಕಾರನೊಬ್ಬನನ್ನು ಬರಮಾಡಿ 'ಈ ಕೂಡಲೇ ರಾಮಕೃಷ್ಣಪ್ಪನವರನ್ನು ಅರಮನೆಗೆ ಬರುವಂತೆ ಹೇಳಿ ಬಾ' ಎಂದು ಅಪ್ಪಣೆ ಮಾಡಿದರು. ಹರಿಕಾರ ದೊರೆಗಳ ಅಪ್ಪಣೆಯನ್ನು ರಾಮಕೃಷ್ಣಪ್ಪನವರಿಗೆ ತಿಳಿಸಿದ. ರಾಮಕೃಷ್ಣಪ್ಪ ಒಂದು ಸಣ್ಣ ಮಡಿಪಂಚೆಯನ್ನು ಉಟ್ಟು ಸಾಲಿ ಗ್ರಾಮವನ್ನಿಟ್ಟುಕೊಂಡು ಪೂಜೆಮಾಡುತ್ತಿದ್ದರು. ಹರಿಕಾರನಿಗೆ ಹೇಳಿದರು 'ನನಗೂ ಅರಮನೆಗೂ ಏನಪ್ಪ ಸಂಬಂಧ ಇನ್ನು? ನಮ್ಮ ದೊರೆ ಇಗೋ ಈ ಸಾಲಿಗ್ರಾಮದಲ್ಲಿದ್ದಾನೆ. ಪ್ರಭುಗಳಿಗೆ ಕೈಮುಗಿದೆನೆಂದು ಅರಿಕೆಮಾಡು. ನಾನು ಇನ್ನು ಅರಮನೆ ಮೆಟ್ಟಲು ಸಹ ತುಳಿಯುವುದಿಲ್ಲ.' ಹರಿಕಾರ ಬಂದು ರಾಮಕೃಷ್ಣಪ್ಪನವರ ನಿರ್ಧಾರವನ್ನು ಮಹಾಸ್ವಾಮಿಯವರಲ್ಲಿ ಬಿನ್ನವಿಸಿ ಕೊಂಡ. 'ರಾಮಕೃಷ್ಣಪ್ಪನವರ ಮನೆ ಬಲು ಕುಳ್ಳು. ನಾನೇ ಹೋದರೆ ಬಾಗಿಲು ಹಣೆಗೆ ಬಡಿಯುತ್ತದೆ, ಎಂದು ತಿಳಿಸಿ ಬಾ' ಎಂದು ಮತ್ತೆ ರಾಮಕೃಷ್ಣಪ್ಪನವರಲ್ಲಿಗೆ ಹರಿಕಾರನನ್ನು ಅಟ್ಟಿದರು. 'ಎಷ್ಟಾದರೂ ನನ್ನ ದೊರೆ. ಅವರ ಮೇಲೆ ಆಗ್ರಹವೇ' ಎಂದು ಅಂದುಕೊಂಡು ರಾಮಕೃಷ್ಣಪ್ಪನವರು ಅರಮನೆಗೆ ಹೊರಟರು. ಆದರೂ ಮಹಾಸ್ವಾಮಿಯವರಿಗೆ ಮುಖಕೊಟ್ಟು ನಿಲ್ಲಲಿಲ್ಲ. ಅಸಮಾಧಾನ. ಒಂದು ಪಕ್ಕಕ್ಕೆ ಮುಖ ಸರಿಸಿ ಕೈಕಟ್ಟಿ ನಿಂತರು. 'ಅಯ್ಯಾ ರಾಮಕೃಷ್ಣಪ್ಪ! ಕೋಪಿಸಿಕೊಳ್ಳಬೇಡಪ್ಪ. ನಾನು ದತ್ತು ತೆಗೆದು ಕೊಳ್ಳೋಣವೆಂದಿದ್ದೇನೆ. ಎಲ್ಲಾದರೂ ಶಾಪಕೊಟ್ಟೀಯೆ? ಅರಮನೆ ನಿನ್ನದು. ನೀನು ಬಿಳಿಬಟ್ಟೆ ಸಂನ್ಯಾಸಿ, ದಯವಿಟ್ಟು ಈ ಬೀಗದ ಕೈಯ್ಯನ್ನು ಹಿಂದಕ್ಕೆ ತೆಗೆದುಕೋ' ಎಂದರು ಪ್ರಭುಗಳು. ಪ್ರಭುಗಳ ಸರಳಹೃದಯವನ್ನು ಕಂಡು ರಾಮಕೃಷ್ಣಪ್ಪನವರ ಮನಸ್ಸು ಕರಗಿತು.

ಜಗನ್ಮೋಹನ ಬಂಗಲೆಗೆ ಆ ಹೆಸರು ಬಂದುದಕ್ಕೆ ರಾಮಕೃಷ್ಣಪ್ಪನವರೇ ಕಾರಣ. 'ಬಂಗಲೆಗೆ ಏನು ಹೆಸರಿಟ್ಟರೆ ಚೆನ್ನ?' ಎಂದು ಮಹಾಸ್ವಾಮಿಯವರು

ರಾಮಕೃಷ್ಣಪ್ಪನವರನ್ನು ಕೇಳಿದರಂತೆ. 'ಏನು ಅರಿಕೆಮಾಡಲಿ ಮಹಾಸ್ವಾಮಿ. ಅರಮನೆ ಜಗನ್ಮೋಹಕವಾಗಿದೆ' ಎಂದರಂತೆ ರಾಮಕೃಷ್ಣಪ್ಪ. ಸರಿ. ಅರಮನೆಗೆ 'ಜಗನ್ಮೋಹನ ಬಂಗಲೆ' ಎಂಬ ಹೆಸರೇ ಇರಲಿ ಎಂದು ದೊರೆಗಳು ನಿರ್ಧರಿಸಿದರು.

ಪ್ರತಿದಿನ ಬೆಳಗಿನ ಜಾವ ಕಾಡಿಗೆ ಹೋಗಿ ಪೂಜೆಗಾಗಿ ತುಳಸಿ ತರುತ್ತಿದ್ದರು ರಾಮಕೃಷ್ಣಪ್ಪ. ಒಂದು ದಿನ ತುಳಸಿಯನ್ನು ತೆಗೆದುಕೊಂಡು ಅವರು ವಾಪಸ್ಸು ಬರುತ್ತಿದ್ದರು. ನಾನು ತುಳಸಿ ತರಲು ಮನೆಯಿಂದ ಹೊರಟಿದ್ದೆ. ದಾರಿಯಲ್ಲಿ ಇಬ್ಬರಿಗೂ ಭೇಟಿಯಾಯಿತು. 'ಹರ್ಯರ್ಚನಾನುಭಾವವೇನ ಯದ್ಗಜತ್ವೇಪ್ಯನುಸ್ಮೃತಿಃ' ಎಂದರು ರಾಮಕೃಷ್ಣಪ್ಪನವರು ನನ್ನನ್ನು ನೋಡಿ. ಗಜೇಂದ್ರ ಮಹಾರಾಜ ಅನೇಕ ವಿಧವಾಗಿ ಪರಮಾತ್ಮನನ್ನು ಆರಾಧಿಸಿದ್ದ. ಶಾಪಗ್ರಸ್ತನಾಗಿ ಆನೆಯಾಗಿ ಭೂಮಿಯಲ್ಲಿ ಹುಟ್ಟಿದ್ದರೂ ಹಿಂದಿನ ಜನ್ಮದ ಸಂಸ್ಕಾರ ಹೋಗಿರಲಿಲ್ಲ. ಅಂತ್ಯಕಾಲದಲ್ಲಿ ಭಗವನ್ನಾಮಸ್ಮರಣೆ ಮಾಡುವಂತಾಗಿ ಮೋಕ್ಷಸಿದ್ಧಿಯಾಯಿತು. ಅದರಂತೆಯೇ ಭಗವಂತನನ್ನು ಆರಾಧಿಸಿದರೆ ಒಂದಲ್ಲ ಒಂದು ದಿನ ಆದರ ಫಲ ದೊರೆತೇ ದೊರೆಯುತ್ತದೆ ಎಂಬ ರಾಮಕೃಷ್ಣಪ್ಪನವರ ಇಂಗಿತವನ್ನು ತಿಳಿದು 'ಅರ್ಥವಾಯಿತು ಮಹಾಸ್ವಾಮಿ' ಎಂದಂದು ಮುಂದೆ ನಡೆದೆ.

ಪ್ರತಿದಿನ ಸಂಜೆ ದೊಡ್ಡಕೆರೆಗೆ ಹೋಗಿ ಸಂಧ್ಯಾವಂದನೆ ಮಾಡಿಕೊಂಡು ಅನಂತರ ವರಾಹಸ್ವಾಮಿ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನಮಾಡಿ ಮನೆಗೆ ಹಿಂದಿರುಗುವುದು ರಾಮಕೃಷ್ಣಪ್ಪನವರ ದಿನಚರಿ. ಒಂದು ಸಂಜೆ ಪದ್ಧತಿಯಂತೆ ರಾಮಕೃಷ್ಣಪ್ಪ ಸಂಧ್ಯಾವಂದನೆಗಾಗಿ ಕೆರೆಗೆ ಬಂದರು. ತಲೆಯ ಮೇಲಿದ್ದ ಹನ್ನೆರಡು ಮೊಳದ ಚೌಕದ ಜರಿ ಅಂಚಿನ ಗದ್ದೆಮಾಡಿ, ರುಮಾಲನ್ನೂ, ಕಸೆ ಅಂಗಿಯನ್ನೂ ಬಿಚ್ಚಿ ಮೆಟ್ಟಿಲ ಮೇಲಿಟ್ಟು ಮಡಿಪಂಚೆಯನ್ನುಟ್ಟು ಸಂಧ್ಯಾವಂದನೆಗೆ ಇಳಿದರು. ಯಾವನೋ ಒಬ್ಬ ಇದೇ ಸಮಯ ಕಾದಿದ್ದು ರಾಮಕೃಷ್ಣಪ್ಪನವರ ಬೆಲೆಬಾಳುವ ರುಮಾಲನ್ನು ಹಾರಿಸಿಕೊಂಡು ಓಡಿದ. ಸುತ್ತಮುತ್ತ ಇದ್ದ ಜನರು ಕೂಗಿಕೊಂಡರು. ಓಡಿಹೋಗಿ ಅವನನ್ನು ಹಿಡಿದುತಂದರು. 'ಅವನ ತಂಟೆಗೆ ಹೋಗಬೇಡಿ. ಅವನ ಪದಾರ್ಥ ಅವನು ತೆಗೆದುಕೊಂಡು ಹೋದರೆ ಇಷ್ಟೇಕೆ ಗದ್ದಲ? ನನ್ನ ತಲೆಗಿಂತ ಅವನ ತಲೆಗೇ ಆ ರುಮಾಲು ಚೆನ್ನಾಗಿ ಒಪ್ಪುತ್ತದೆ' ಎಂದು ಹೇಳಿ ರುಮಾಲನ್ನು ಅವನಿಗೇ ಉದಾರವಾಗಿ ದಾನಮಾಡಿದರು.

ಬೊಕ್ಕಸದ ಗುಮಾಸ್ತೆ ನಂಜುಂಡಪ್ಪನವರು ಪ್ರತಿದಿನ ಸಂಜೆ ರಾಮು

ಕೃಷ್ಣಪ್ಪನವರು ದೇವಸ್ಥಾನದಿಂದ ಹಿಂದಿರುಗುವ ವೇಳೆಗೆ ರಾಮಕೃಷ್ಣಪ್ಪನವರ ಮನೆಗೆ ಬರುವ ವಾಡಿಕೆ.

"ಏನು, ವಿಶೇಷ? ನಂಜುಂಡಪ್ಪನವರೇ?" ಸಣ್ಣ ದನಿಯಲ್ಲಿ ಕೇಳುತ್ತಿದ್ದರು ರಾಮಕೃಷ್ಣಪ್ಪ.

"ಏನು ಹೇಳಲಿ ಮಹಾಸ್ವಾಮಿ: ಸಂಸಾರ ಕ್ಲೇಶಮಯ, ದೇಹ ರೋಗಮಯ, ಕ್ಷಣಗಂಡ ಪೂರ್ಣಾಯುಸ್ಸು! ಇಷ್ಟೇ ಮಹಾಸ್ವಾಮಿ ಇನ್ನೇನೂ ವಿಶೇಷವಿಲ್ಲ."

"ಹಾಗನ್ನಬಾರದು, ನಂಜುಂಡಪ್ಪನವರೇ. 'ಸಂಸಾರೇ ಕಿಂ ಸಾರಂ ಕಂಸಾರೇಶ್ಚರಣಕಮಲ ಪರಿಭಜನಂ। ಜ್ಯೋತಿಷ್ಕಿಮಂಧಕಾರೇ ಯದಂಧಕಾರೇರನುಸ್ಮರಣಂ ||'" ಎಂದು ರಾಮಕೃಷ್ಣಪ್ಪ ಸಮಾಧಾನ ಹೇಳುತ್ತಿದ್ದರು. ನುಡಿ, ನಡೆ, ನೋಟ ಎಲ್ಲದರಲ್ಲೂ ರಾಮಕೃಷ್ಣಪ್ಪನವರು ಪರಮಸಾತ್ವಿಕರು.

ಬೊಪ್ಪಕೊಂಡಪುರದ ಅರಸಿನವರು ಅರಮನೆಗೆ ಬರುವಾಗ ಮಹಾರಾಜರು ಉಡುವ ಪಂಚೆಗಿಂತ ಭಾರಿ ಪಂಚೆಯನ್ನುಟ್ಟು ಠೀವಿಯಿಂದ ಬರುತ್ತಿದ್ದರು. ದೊರೆಗಳ ಪಂಚೆಗೆ ನಾಲ್ಕು ಬೆಟ್ಟು ಜರಿಯಂಚಿದ್ದರೆ ಅರಸಿನವರ ಪಂಚೆಗೆ ಆರು ಬೆಟ್ಟಗಲ ಜರಿ! 'ನಮ್ಮ ಮೇಲೆಯೇ ಪೈಪೋಟಿ ನಡೆಸುತ್ತಾನಲ್ಲ ಈತ! ಹೇಗಾದರೂ ಮಾಡಿ ಬುದ್ಧಿ ಕಲಿಸಬೇಕು' ಎಂದು ಚಾಮರಾಜ ಒಡೆಯರು ಯೋಚಿಸುತ್ತಿದ್ದರು. ಕೊನೆಗೆ ಒಂದು ದಿನ ಒಂದು ಉಪಾಯ ಮಾಡಿದರು. ಅರಮನೆಗೆ ಬಂದು ದೊರೆಗಳ ಭೇಟಿಗೆ ಹೋಗುವ ಮುನ್ನ ದೇಹಬಾಧೆಯನ್ನು ಕಳೆದುಕೊಂಡು ಬರುವುದು ಅರಸಿನವರ ಪದ್ಧತಿ. ಒಂದು ದಿನ ಬುದ್ಧಿಯವರು ಶೌಚಕ್ಕೆ ಹೋದ ಸಮಯವನ್ನು ನೋಡಿ ಪ್ರಭುಗಳು ಕಟ್ಟಿಗೆಯವನೊಬ್ಬನನ್ನು ಕರೆದು 'ಬುದ್ಧಿಯವರು ಹೊರಗಡೆ ಇಟ್ಟಿರುವ ನೀರುತಂಬಿಗೆಗೆ ಹರಳೆಣ್ಣೆಯನ್ನು ಸುರಿದು ಬಾ' ಎಂದು ಅಪ್ಪಣೆಮಾಡಿದರು. ಇನ್ನೊಬ್ಬ ಕಟ್ಟಿಗೆಯವನನ್ನು ಕರೆದು "'ಮಹಾಸ್ವಾಮಿಯವರ ಅಪ್ಪಣೆಯಾಗಿದೆ. ಬುದ್ಧಿಯವರು ಬೇಗ ದಯಮಾಡಿಸಬೇಕು' ಎಂದು ಹೇಳಿ ಸ್ವಾಮಿಗಳನ್ನು ಕರೆದುಕೊಂಡು ಬಾ" ಎಂದರು ದೊರೆಗಳು. 'ಬುದ್ಧಿ! ಸವಾರಿ ಅಪ್ಪಣೆಯಾಯ್ತದೆ ಝಟ್ಟನೆ ಬರಬೇಕಂತೆ' ಎಂದು ಕೂಗುವುದಕ್ಕೆ ಪ್ರಾರಂಭಮಾಡಿದ ಊಳಿಗದವನು. ಅರಸುಗಳು ಬೇಗ ಬರುವ ಗಡಿಬಿಡಿಯಲ್ಲಿ ಬಟ್ಟೆಬರಿ, ಕೈಮೈ ಎಲ್ಲವನ್ನೂ ಎಣ್ಣೆಮಯ ಮಾಡಿಕೊಂಡು ಸಂಕಟಪಡುತ್ತಿದ್ದರು. 'ಬೇಗ ಬರಬೇಕು, ಬುದ್ಧಿ'—ಮತ್ತೆ ಹೊರಗಿನಿಂದ ಕೂಗು. ಏನು ಮಾಡಲೂ ತೋರದೆ

ಹರಳೆಣ್ಣೆಯ ಮುಖಮಾಡಿಕೊಂಡು ಅರಸಿನವರು ದೊರೆಗಳ ಸನ್ನಿಧಿಗೆ ಬಂದರು. ಕರವಸ್ತ್ರದ ಮರೆಯಲ್ಲಿ ನಗುತ್ತಿದ್ದರು ಪ್ರಭುಗಳು. 'ಏನು ಬುದ್ಧಿಯವರ! ಏಕೆ ಒಂದು ವಿಧವಾಗಿ ಇದ್ದೀರಲ್ಲ ಇವತ್ತು! ಇದೇನು ಪಂಚೆಯೆಲ್ಲ ಎಣ್ಣೆ! ಅಯ್ಯೋ ಪಾಪ! ಎಷ್ಟು ಭಾರಿ ಪಂಚೆ ಏನು ಕಥೆ! ಒಳ್ಳೆಯದು, ಯೋಚನೆ ಮಾಡ ಬೇಡಿ' ಎಂತಂದು 'ಲಾ! ಯಾರಲ್ಲಿ ಒಳಗೆ ಹೋಗಿ ಒಂದು ಹೊಸಪಂಚೆಯನ್ನು ತಂದುಕೊಡು ಬುದ್ಧಿಯವರಿಗೆ' ಎಂದು ಅಪ್ಪಣೆಮಾಡಿದರು. ಅರಸುಗಳು ಉಡು ತ್ತಿದ್ದ ಪಂಚೆಗೆ ನಾಲ್ಕರಷ್ಟು ಬೆಲೆಬಾಳುವ ಪಂಚೆಯನ್ನು ಮಹಾರಾಜರು ಮೊದಲೇ ತರಿಸಿಟ್ಟಿದ್ದರು. ಹರಳೆಣ್ಣೆಯನ್ನು ಪ್ರತ್ಯಕ್ಷವಾಗಿ ಕುಡಿಸದೆಯೇ ಪ್ರಭು ಗಳು ಬುದ್ಧಿಯವರಿಗೆ ಪಾಠ ಕಲಿಸಿದ್ದರು!

ಒಂದು ದಿನ ಸಂಜೆ ಪ್ರಭುಗಳ ಸನ್ನಿಧಿಯಲ್ಲಿ ನಾನೂ ಸುಬ್ಬಣ್ಣನವರೂ ಮಾತ್ರ ಇದ್ದೆವು. 'ಸುಬ್ಬು! ನಿನ್ನೆಯ ದಿನ ಸಂಜೆ ನಾನು ಕಬ್ಬನ್ ಪಾರ್ಕ್ ಬಳಿ ನಿಂತು ಆ ಮಾರ್ಗವಾಗಿ ಹೋಗಿ ಬರುತ್ತಿದ್ದ ಪರಂಗಿ-ಹೆಂಗಸರನ್ನೇ ನೋಡುತ್ತ ನಿಂತುಬಿಟ್ಟೆ, ಪ್ರಪಂಚವೇ ಮರೆತುಹೋಯ್ತು ನನಗೆ! ಪಕ್ಕದಲ್ಲಿ ಯಾರು ಹೋದರು ಯಾರು ಬಿಟ್ಟರು ಎಂಬ ಪರಿಜ್ಞಾನ ಸಹ ಇರಲಿಲ್ಲ' ಎಂದರು ಪ್ರಭುಗಳು. 'ತಪ್ಪಾಯಿತು ಮಹಾಸ್ವಾಮಿ ಕ್ಷಮಿಸಬೇಕು' ಎಂದೆ. 'ಓಹೋ! ತಾವೋ ಆಪಾಟಿ ಮೈಗೆಲ್ಲ ಸೆಂಟು ಬಳಿದುಕೊಂಡು ರಸಿಕಶಿಖಾಮಣಿಗಳಂತೆ ನಿಂತಿದ್ದದ್ದು?' ಎಂದು ದೊರೆಗಳು ನಕ್ಕರು! ದೊರೆಗಳು ಸಂಜೆ ವಿಹಾರಾರ್ಥ ವಾಗಿ ಹೋಗುತ್ತಾ ನನ್ನ ಪಕ್ಕದಲ್ಲೇ ನಡೆದು ಹೋಗಿದ್ದರಂತೆ. ಅದರ ವಿಷಯವೇ ನನಗೆ ತಿಳಿಯದು.

ಬೆಂಗಳೂರು ಅರಮನೆಯಲ್ಲಿದ್ದಾಗ್ಗೆ ಒಂದು ದಿನ ರವಿವರ್ಮನು ಬರೆದ ಅರ್ಜುನ ಸುಭದ್ರೆಯ ಪಟವನ್ನು ಪೇಟೆಯಿಂದ ಕೊಂಡು ತಂದು ಮಹಾರಾಜರು ಕೂಡುವ ಆಸನದ ಮೇಲುಗಡೆಯಲ್ಲಿ ಗೋಡೆಗೆ ಮೊಳೆ ಬಡಿದು ತಗುಲು ಹಾಕಿದ್ದೆ. ಮಹಾಸ್ವಾಮಿಯವರು ಕೊಠಡಿಗೆ ಬಂದೊಡನೆಯೇ ಅವರ ಗಮನ ಪಟದಮೇಲೆ ಬಿತ್ತು. 'ಯಾರದು ಈ ಕೆಲಸ?' ಎಂದರು. 'ನಾನು ಮಹಾ ಸ್ವಾಮಿ ಪಟವನ್ನು ತಗುಲುಹಾಕಿದವನು. ಮಹಾಸ್ವಾಮಿಯವರ ರೂಪರಾಶಿ ಯನ್ನೂ ಅರ್ಜುನನ ಸೌಂದರ್ಯವನ್ನೂ ಏಕಕಾಲದಲ್ಲಿ ನೋಡಬೇಕೆಂಬ ಅಪೇಕ್ಷೆ ಯಾಯಿತು ಪ್ರಭು. ಅದಕ್ಕಾಗಿ ಹೀಗೆ ಮಾಡಿದೆ' ಎಂದೆ. ಅರಮನೆಯಲ್ಲಿ ದೊರೆಗಳ ಸನ್ನಿಧಿಯಲ್ಲಿ ಇಷ್ಟು ಸಲುಗೆಯೇ ಎಂದು ಕೋಪಿಸಿಕೊಳ್ಳುವುದರ ಬದಲು ಮಂದಸ್ಮಿತರಾದರು, ಸರಳ ಹೃದಯದ ಚಾಮರಾಜ ಒಡೆಯರು!

ಇನ್ನೊಂದು ದಿನ ಮತ್ತೊಂದು ಸ್ವಾರಸ್ಯವಾದ ಪ್ರಸಂಗ ನಡೆಯಿತು. ದೊರೆಗಳು ಶಿವಪೂಜೆಯನ್ನು ಮುಗಿಸಿಕೊಂಡು ಫಲಾಹಾರಮಾಡುತ್ತಿದ್ದರು. ಅರಮನೆಯ ಹಿಂದಿನ ಬೀದಿಯಲ್ಲಿ ಬೈರಾಗಿ ಹೆಂಗಸೊಬ್ಬಳು ಕಂಕುಳಲ್ಲಿ ಒಂದು ಮಗುವನ್ನಿರಿಸಿಕೊಂಡು ಏಕನಾದವನ್ನು ನುಡಿಸಿಕೊಂಡು ಹಾಡುತ್ತ ಹೋಗುತ್ತಿದ್ದಳು. ಹಾಡು ದೊರೆಗಳ ಕಿವಿಗೆ ಬಿತ್ತು. 'ಎಷ್ಟು ಸೊಗಸಾದ ಮಟ್ಟು ಆಚಾರ್ಯರೇ! ಅದರ ಸ್ವರಪ್ರಸ್ತಾರವನ್ನು ಬರೆಯಬೇಕಲ್ಲ' ಎಂದರು. 'ಅಪ್ಪಣೆ, ಪ್ರಭು' ಎಂದೆ. ಅರಮನೆಯಿಂದ ಹೊರಗೆ ಬರುವಷ್ಟರಲ್ಲಿ ಆ ಹೆಂಗಸು ಬೇರೆ ಯಾವುದೋ ರಸ್ತೆಯನ್ನು ಹಿಡಿದಿದ್ದಳು. ಮಧ್ಯಾಹ್ನ ಹನ್ನೆರಡು ಗಂಟೆಯವರೆಗೂ ಊರೆಲ್ಲ ಅಲೆದರೂ ಆಕೆಯ ಸುಳಿವೇ ಸಿಗಲಿಲ್ಲ. ಊಟದ ಸಮಯಕ್ಕೆ ಬೈರಾಗಿಗಳೆಲ್ಲರೂ ರಾಣಿ ಛತ್ರದ ಬಳಿ ಸೇರುವುದು ವಾಡಿಕೆ. ಸರಿ ಅಲ್ಲಿಗೆ ಹೋದೆ. ಪುಣ್ಯಾತ್ಮಳು ಅಲ್ಲಿಯೇ ಇದ್ದಳು ನನ್ನ ಅದೃಷ್ಟಕ್ಕೆ. ಅವಳಿಗೆ ಶ್ರುತಿಜ್ಞಾನವಿಲ್ಲ, ತಾಳಜ್ಞಾನವಿಲ್ಲ. ಒಂದೊಂದು ಸಾರಿಗೆ ಒಂದೊಂದು ರೀತಿ ಹಾಡುತ್ತಿದ್ದಳು. ಎರಡು ಮೂರು ಘಂಟೆಗಳ ಕಾಲ ಹೆಣಗಾಡಿ ಅಂತೂ ಇಂತೂ ಸ್ವರಪ್ರಸ್ತಾರ ಬರೆದಿದ್ದಾಯಿತು. ನಾನು ಹೊದೆದಿದ್ದ ಧೋತ್ರವನ್ನು ಆಕೆಯ ಉಪಕಾರಕ್ಕೆ ಪ್ರತಿಯಾಗಿ ಕೊಟ್ಟು ಅರಮನೆಗೆ ಹಿಂದಿರುಗಿದೆ.

'ಒಂದುಸಲ ಹಾಡಿ ಆಚಾರ್ಯರೆ' ಎಂದರು ದೊರೆಗಳು. ಹಾಡಿದೆ: 'ಸಾರ್ಜಕೇ ಬಂಗಲಿಮೇ ಕೊಯಿ ನೈ ಮಿಲೆ ಮಹರಾಜ! ಅರೆತೇರಿ ಬಂಗಲಿಮೇ ಕೊಯಿ ನೈಮಿಲೆ ಮಹರಾಜ! ಲವಂಗಸುಪಾರಿ ದುನಿಯಾಮೇ ಬಂಗಲೀಮೇ ಕೊಯಿನೈ ಮಿಲೆ ಮಹರಾಜ!' 'ತುಂಬ ತೊಂದರೆಯಾಯಿತು ನಿಮಗೆ. ಅಂದ ಹಾಗೆ ಮೈಮೇಲಿದ್ದ ಧೋತ್ರವೆಲ್ಲಿ?' ಎಂದರು ದೊರೆಗಳು. ಸುಮ್ಮನಿದ್ದೆ. ನನ್ನ ಹಿಂದೆಯೇ ಊಳಿಗದವನೊಬ್ಬನನ್ನು ಕಳುಹಿಸಿ ನಾನು ಅರಮನೆಯನ್ನು ಬಿಟ್ಟು ಹಿಂದಿರುಗಿದವರೆಗೂ ನಡೆದ ಎಲ್ಲ ಸಂಗತಿಯನ್ನೂ ದೊರೆಗಳು ಮೊದಲೇ ತಿಳಿದು ಕೊಂಡಿದ್ದರು. ಒಳಗಿನಿಂದ ಬೆಲೆಬಾಳುವ ದುಪ್ಪಟವನ್ನು ತರಿಸಿಕೊಟ್ಟು, ಗೌರವಿಸಿದರು!

ಚಾಮರಾಜ ಒಡೆಯರು ಮಲೆನಾಡು, ನೀಲಗಿರಿ, ಮದ್ರಾಸು, ಬೆಂಗಳೂರು, ಕಲ್ಕತ್ತ ಮುಂತಾದ ಪರಸ್ಥಳಗಳಿಗೆ ದಯಮಾಡಿಸುತ್ತಿದ್ದಾಗಲೂ ಸಹ ಸುಬ್ಬಣ್ಣನವರನ್ನೂ ನನ್ನನ್ನೂ ಸಂಗಡಲೇ ಕರೆದುಕೊಂಡು ಹೋಗುತ್ತಿದ್ದರು. ಒಂದು ಸಾರಿ, ಮಲೆನಾಡಿನ ಪ್ರವಾಸದಲ್ಲಿ ಒಂದು ಘಟನೆ ನಡೆಯಿತು. ಇಳಿದು

ಕೊಳ್ಳಲು ಎಲ್ಲರಿಗೂ ಪ್ರತ್ಯೇಕ ಪ್ರತ್ಯೇಕ ಗುಡಾರಗಳನ್ನು ಹಾಕಿದ್ದರು. ನಾನೂ ಸುಬ್ಬಣ್ಣನವರೂ ಇರಲು ಗೊತ್ತಾಗಿದ್ದ ಗುಡಾರ ಸ್ವಲ್ಪ ತಗ್ಗಿನಲ್ಲಿದ್ದು ಬಹಳ ಕಿರಿದಾಗಿತ್ತು. ಪ್ರವಾಸದ ಏರ್ಪಾಡುಗಳನ್ನು ನೋಡಿಕೊಳ್ಳುತ್ತಿದ್ದ ರಾಮಕೃಷ್ಣರಾಯರ ಬಳಿಗೆ ನಾನೂ ಸುಬ್ಬಣ್ಣನವರೂ ಹೋಗಿ 'ಸ್ವಾಮಿ! ರಾಮಕೃಷ್ಣರಾಯರೇ! ನಮಗೆ ಕೊಟ್ಟಿರುವ ಗುಡಾರ ಬಹಳ ಕಿಷ್ಕಿಂಧ ವಾಗಿದೆ. ನಮ್ಮ ಸಾಮಾನುಗಳನ್ನೂ ದೊರೆಗಳ ವಾದ್ಯಗಳನ್ನೂ ಇಡಲು ಸ್ಥಳವೇ ಸಾಲದು. ತಗ್ಗಿನಲ್ಲಿರುವುದರಿಂದ ತೇವ ಹೆಚ್ಚಾಗಿದೆ. ಮಳೆ ಬಂದ ರಂತೂ ಇನ್ನೂ ತೊಂದರೆ. ದಯವಿಟ್ಟು ನಮಗೆ ಬೇರೆ ಕಡೆ ಸ್ವಲ್ಪ ದೊಡ್ಡದಾದ ಡೇರಾ ಹಾಕಿಸಿಕೊಡಿ' ಎಂದು ಕೇಳಿಕೊಂಡೆವು. 'ಸಾಕು! ಸಾಕು! ಹೋಗ್ರಿ. ಸಂಗೀತಗಾರರಿಗೆ ಸಾಲದೇನ್ರಿ ಆ ಡೇರಾ?' ಎಂದು ಸಣ್ಣ ಮಾತುಗಳನ್ನಾಡಿದರು. ಮರುಮಾತಾಡದೇ ಹಿಂದಿರುಗಿದೆವು. 'ಆಚಾರ್ಯರೆ! ಕೇಳಿದಿರಾ ಅವರು ಆಡಿದ ಮಾತುಗಳನ್ನು. ದೊರೆಗಳಿಗೆ ತಿಳಿಸಿಯೇಬಿಡ್ತೀನಿ ನಡೆದ ಸಂಗತಿಯನ್ನು' ಎಂದು ಸುಬ್ಬಣ್ಣನವರು ಕಿಡಿಕಿಡಿಯಾದರು. 'ಸ್ವಲ್ಪ ನಿಧಾನಿಸಿ ಸುಬ್ಬಣ್ಣನವರೇ! ಒಂದು ಉಪಾಯ ಯೋಚಿಸಿದ್ದೀನಿ. ನಾಳೆ ಬೆಳಗಿನವರೆಗೆ ಸುಮ್ಮನಿರೋಣ' ಎಂದೆ. ಸುಬ್ಬಣ್ಣನವರು ಸುಮ್ಮ ನಾದರು.

ಮರುದಿನ ಅಷ್ಟು ಹೊತ್ತಿಗೇ ಎದ್ದು ಒಂದು ದಪ್ಪ ಉಂಡೆ ಗಂಧವನ್ನು ತೇಯ್ದಿಟ್ಟೆ. 'ಏನು ವಿಶೇಷ?' ಎಂದರು ಸುಬ್ಬಣ್ಣನವರು. 'ಏನು ಇಲ್ಲ' ಎಂದು ಹೇಳಿ ಹೊರಗೆ ಹೋಗಿ ಎರಡು ಕೊಡ ನೀರನ್ನು ತಂದು ಡೇರಾ ದಲ್ಲೆಲ್ಲಾ ಸುತ್ತ ಚೆಲ್ಲಿದೆ. 'ಹುಚ್ಚುಗಿಚ್ಚು ಹಿಡಿಯಿತೋ ನಿಮಗೆ! ಏನು ನೀವು ಮಾಡ್ತಿರೋದು' ಎಂದು ಬೆರಗಾಗಿ ಕೇಳಿದರು ಸುಬ್ಬಣ್ಣ. 'ತಾವು ಸುಮ್ಮನಿರೋಣವಾಗಲಿ' ಎಂದೆ. ತೇಯ್ದಿದ್ದ ಗಂಧದಲ್ಲಿ ಅರ್ಧದಷ್ಟನ್ನು ಚೆನ್ನಾಗಿ ಹಣೆಗೆ ಪಟ್ಟುಹಾಕಿದೆ. ಉಳಿದ ಅರ್ಧವನ್ನು ಸುಬ್ಬಣ್ಣನವರಿಗೆ ಕೊಟ್ಟೆ. 'ತಾವೂ ಪಟ್ಟುಹಾಕಿಕೊಳ್ಳೋಣವಾಗಲಿ' ಎಂದೆ. ಏಕೆ ಎಂದು ಕೇಳುವ ಶಕ್ತಿಯೂ ಸುಬ್ಬಣ್ಣನವರಲ್ಲಿ ಇಷ್ಟು ಹೊತ್ತಿಗೆ ಲೋಪವಾಗಿತ್ತು. ಮಂತ್ರಗಾರನಿಗೆ ಸೋತ ಹಾವಿನಂತೆ ಹೇಳಿದ ಮಾತನ್ನು ಕೇಳುವ ಸ್ಥಿತಿ ಯಲ್ಲಿದ್ದರು. ಮರುಮಾತಾಡದೆ ತಲೆಗೆ ಪಟ್ಟನ್ನು ಹಾಕಿಕೊಂಡರು. 'ಸರಿ, ಬನ್ನಿ ಇನ್ನು ಪ್ರಭುಗಳ ಹತ್ತಿರ ಹೋಗಿ ಬರೋಣ' ಎಂದೆ. ಮೂಕರಂತೆ ಹಿಂಬಾಲಿಸಿದರು. ಪ್ರಭುಗಳಿಗೆ ಕೈ ಮುಗಿದೆವು. 'ಏನು! ಹಣೆಗೆ ಪಟ್ಟೇಕೆ! ದೇಹಸ್ಥಿತಿ ನೆಟ್ಟಗಿದೆ ತಾನೇ?' ಎಂದು ಕಾತರದಿಂದ ಕೇಳಿದರು ಪ್ರಭುಗಳು.

"ಮಹಾಸ್ವಾಮಿ! ರಾತ್ರಿ ಸುರಿದ ಮಳೆಯ ನೀರೆಲ್ಲ ತಗ್ಗಿನಲ್ಲಿರುವ ನಮ್ಮ ಗುಡಾರದಲ್ಲೇ ನಿಂತಿದೆ. ನೆಲವೆಲ್ಲ ಒದ್ದೆ. ಇಬ್ಬರಿಗೂ ವಿಪರೀತ ತಲೆನೋವು. ಶೀತ, ನೆಗಡಿ. ನಮ್ಮ ಸ್ಥಿತಿ ಹೇಗಾದರೂ ಇರಲಿ ಅಂದರೆ ಸವಾರಿಯ ತಂಬೂರಿ, ಪಿಟೀಲು ನಮ್ಮ ಗುಡಾರದಲ್ಲೇ ಇವೆ. 'ಶೀತದಲ್ಲಿದ್ದರೆ ವಾದ್ಯಗಳು ಹಾಳಾಗುತ್ತವೆ. ದಯವಿಟ್ಟು ಬೇರೆ ಎಲ್ಲಾದರೂ ಗುಡಾರ ಹಾಕಿಕೊಟ್ಟು ಮಲಗುವುದಕ್ಕೆ ಎರಡು ಮಂಚಗಳನ್ನು ಕೊಡಿಸಿಕೊಡಿ' ಎಂದು ರಾಮಕೃಷ್ಣರಾಯರಲ್ಲಿ ವಿಜ್ಞಾಪಿಸಿಕೊಂಡೆವು. ಆದರೆ ಈಗಿರುವ ವ್ಯವಸ್ಥೆಯೇ ನಮ್ಮ ಯೋಗ್ಯತೆಗೆ ಹೆಚ್ಚು ಎಂದು ಅವರ ಅಭಿಪ್ರಾಯವಿರುವ ಹಾಗೆ ಕಾಣುತ್ತದೆ. ಇದ್ದ ಸಂಗತಿಯನ್ನು ಸನ್ನಿಧಿಯಲ್ಲಿ ಅರಿಕೆಮಾಡಿದ್ದೇವೆ. ಕ್ಷಮಿಸಬೇಕು ಪ್ರಭು" ಎಂದೆ. 'ಇರಲಿ, ನಾವು ವಿಚಾರಿಸುತ್ತೇವೆ. ಮೊದಲು ಒಳಗೆ ಹೋಗಿ ಬಿಸಿಬಿಸಿಯಾಗಿ ಕಾಫಿ ಕುಡಿದು ಬನ್ನಿ' ಎಂದು ಮರುಕಪಟ್ಟರು ದೊರೆಗಳು. ಸುಬ್ಬಣ್ಣನವರಿಗೆ ತಡೆಯಲಾರದಷ್ಟು ನಗು. 'ಭಲೆ! ಸೊಗಸಾದ ನಾಟಕ' ಎಂದರು. ಒಂದೆರಡು ಘಂಟೆಗಳಷ್ಟರಲ್ಲೇ ವಿಶಾಲವಾದ ಡೇರಾ, ಕುರ್ಚಿ, ಮಂಚ, ಮೇಜು—ಎಲ್ಲವೂ ನಮಗಾಗಿ ಸಿದ್ಧವಾಗಿತ್ತು!

ಮುಂದೆ ಇದೇ ರಾಮಕೃಷ್ಣರಾಯರು ಅರಮನೆ ಕಂಟ್ರೋಲರಾಗಿ ಅಧಿಕಾರವಹಿಸಿಕೊಂಡಾಗ ಅವರನ್ನು ನೋಡುವ ಸಂದರ್ಭವೊಂದು ನನಗೆ ಒದಗಿತು. ಮಲೆನಾಡಿನ ಪ್ರವಾಸ ನನಗೆ ಎಷ್ಟರಮಟ್ಟಿಗೆ ಜ್ಞಾಪಕವಿತ್ತೋ ಅವರಿಗೂ ಅಷ್ಟೇ ನೆನಪಿತ್ತು. 'ಏನು ಆಚಾರ್ಯರೇ! ಹಿಂದೆ ಮಲೆನಾಡಿನ ಪ್ರವಾಸದಲ್ಲಿ ನಮಗೆ ಬರೆಹಾಕಿದವರಲ್ಲವೇ ನೀವು?" ಎಂದು ಕೇಳಿದರು. 'ಬರೆಹಾಕುವಂತೆ ಮಾಡಿದವರು ತಾವೇ ತಾನೇ?' ಎಂದೆ. 'ಹೋಗಲಿ ಬಿಡಿ ಆಚಾರ್ಯರೇ! ಆದದ್ದು ಆಗಿಹೋಯಿತು! ಮರೆತುಬಿಡಿ. ನಮ್ಮ ಮನೆಗೆ ದಿನಾ ಬಂದು ಹೋಗುತ್ತಿರಬೇಕು ನೀವು' ಎಂದರು ಆತ್ಮೀಯತೆಯಿಂದ. 'ಅಗತ್ಯವಾಗಿ' ಎಂದೆ. ಕಹಿ ಹಿಂದೆಯೇ ಉಳಿಯಿತು. ಸಿಹಿ ಮುಂದೆ ಬೆಳೆಯಿತು!

ಒಂದು ಸಲ ನೀಲಗಿರಿಗೆ ಪ್ರವಾಸ ಹೋಗಿದ್ದಾಗ್ಗೆ ಸುಬ್ಬಣ್ಣನವರಿಗೆ ವಿಪರೀತ ಜ್ವರ ಬಂದಿತು. ಔಷಧೋಪಚಾರಗಳು ನಡೆದವು. 'ಊಟ ಮಾಡಕೂಡದು; ಗಂಜಿ ಮಾತ್ರ ಕುಡಿಯಬೇಕು' ಎಂದು ವೈದ್ಯರು ಹೇಳಿ ಹೋಗಿದ್ದರು. ಸುಬ್ಬಣ್ಣನವರಿಗೆ ಗಂಜಿಯೆಂದರೆ ಆಗುತ್ತಿರಲಿಲ್ಲ. ಗಂಜಿ ಕುಡಿಯುವುದಿಲ್ಲವೆಂದು ಹಠಮಾಡಿದರು. ಮರಿಶೆಟ್ಟರು ನೇರವಾಗಿ ದೊರೆಗಳ

ಬಳಿಗೆ ಹೋಗಿ 'ಮಹಾಸ್ವಾಮಿ! ಸುಬ್ಬಣ್ಣನವರು ಎರಡು ದಿನದಿಂದ ಹೊಟ್ಟೆಗೆ ಏನನ್ನೂ ತೆಗೆದುಕೊಂಡಿಲ್ಲ. ಜ್ವರ ಕೆಂಡದಂತೆ ಸುಡುತ್ತಿದೆ. ಗಂಜಿ ಕುಡಿಯು ವುದಿಲ್ಲವೆಂದು ಹಠ ಹಿಡಿಯುತ್ತಾರೆ' ಎಂದು ಹೇಳಿದರು. 'ಒಳ್ಳೆಯದು ನಡೆಯಿರಿ. ನಾವೇ ಅವರಿಗೆ ಗಂಜಿ ಕುಡಿಸುತ್ತೇವೆ' ಎಂದು ದೊರೆಗಳು ಸುಬ್ಬಣ್ಣನವರ ಕೊಠಡಿಗೆ ಬಂದರು. 'ಹಠ ಮಾಡಬಾರದು ಸುಬ್ಬು ಹೊಟ್ಟೆಗೆ ದಿಂಡಾಗಿರು ತ್ತದೆ ಗಂಜಿ. ಕುಡಿಯಿರಿ' ಎಂದು ಹೇಳಿ ತಾವೇ ಸ್ವತಃ ಗಂಜಿಯನ್ನು ಕುಡಿಸಿ ದರು. ವಾಕರಿಕೆ ಬಂದು ಸುಬ್ಬಣ್ಣ ಗಂಜಿಯನ್ನು ಉಗುಳಿಬಿಟ್ಟರು. ದೊರೆಗಳ ಮೈಮೇಲೆಲ್ಲ ಎಂಜಲು ಸಿಡಿಯಿತು. ಸ್ವಲ್ಪವಾದರೂ ಪ್ರಭುಗಳು ಮುಖವನ್ನು ಸೊಟ್ಟಮಾಡಲಿಲ್ಲ. ಹತ್ತಿರವಿದ್ದ ವಸ್ತ್ರದಿಂದ ತಮ್ಮ ಅಂಗಿಯನ್ನು ಒರೆಸಿ ಕೊಂಡು, 'ಸುಬ್ಬಣ್ಣ, ಮತ್ತೆ ಗಂಜಿ ಕುಡಿಯಲು ಹಠ ಮಾಡಿದರೆ ನಮಗೆ ತಿಳಿಸಿ' ಎಂದು ಹೇಳಿ ಪ್ರಭುಗಳು ತಮ್ಮ ಕೊಠಡಿಗೆ ಹೊರಟರು. ದೊರೆಗಳ ಸರಳತೆ, ಸಹನೆ, ಸಹೃದಯತೆಗಳನ್ನು ಎಂದೆಂದಿಗೂ ನಾನು ಮರೆಯಲಾರೆ!

ಕಲಕತ್ತೆಯ ಪ್ರವಾಸವೇ ಪ್ರಭುಗಳ ಕೊನೆಯ ಪ್ರವಾಸವಾಯಿತು. ಹೊರಡುವಾಗಲೇ ಅಮಂಗಲಗಳ ಸುರಿಮಳೆ. ಕರಿಕಲ್ಲುತೊಟ್ಟಿಯ ಗಣೇಶನ ಗುಡಿಗೆ ಬಂದು ಮಂಗಳಾರತಿ ಮಾಡಿಸಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಪ್ರಯಾಣ ಬೆಳಸುವುದು ಸಂಪ್ರದಾಯ. ಪ್ರದಕ್ಷಿಣೆಮಾಡಿ ನಮಸ್ಕಾರ ಮಾಡುತ್ತಿದ್ದಂತೆಯೇ ಪ್ರಭುಗಳ ಪೇಟ ಕೆಳಗುರುಳಿತು! ಮಂಗಳಾರತಿಯನ್ನು ತೆಗೆದುಕೊಳ್ಳಲು ಕೈಮುಂದೆ ಮಾಡುವ ವೇಳೆಗೆ ಸರಿಯಾಗಿ ಗಾಳಿ ಬಂದು ಮಂಗಳಾರತಿ ಆರಿತು! ಎಲ್ಲರಿಗೂ ಏನೋ ಕಳವಳ. 'ಶಕುನ ಚೆನ್ನಾಗಿಲ್ಲ ಪ್ರಯಾಣವನ್ನು ನಿಲ್ಲಿಸುವುದು ಒಳಿತು' ಎಂದು ದೊರೆಗಳಿಗೆ ಅರಿಕೆ ಮಾಡಿ ದ್ದಾಯಿತು. ಆದರೆ ವಿಧಿಸಂಕಲ್ಪ ಬೇರೆಯಾಗಿತ್ತು. ದೊರೆಗಳು ಪ್ರವಾಸ ವನ್ನು ಕೈಕೊಂಡರು. ಆದರೆ ಪ್ರವಾಸದಿಂದ ಹಿಂದಿರುಗಲಿಲ್ಲ! ನನ್ನ ಪ್ರಭು ವಿನ ಅಂತ್ಯಕಾಲದಲ್ಲಿ ಅವರ ಬಳಿ ಇದ್ದು ಅವರ ಅಂತ್ಯಕ್ರಿಯೆಗಳ ವ್ಯವಸ್ಥೆ ಯನ್ನು ನೋಡಿಕೊಳ್ಳುವ ಅವಕಾಶ ಸಿಕ್ಕಿದುದು ನನ್ನ ಸುಯೋಗ. ಸವಾರಿಯ ಅಡುಗೆಯವನಾದ ಖಂಡುಬಾಳುವಿನ ಕೈಯ್ಯಲ್ಲಿ ಅಸ್ಥಿಯನ್ನು ಕಾಶಿಗೆ ತೆಗೆಸಿಕೊಂಡು ಹೋಗಿ ಗಂಗಾನದಿಯಲ್ಲಿ ಬಿಡಿಸಿದೆ. ತಿರುಪತಿಯಲ್ಲಿ ಬ್ರಾಹ್ಮಣ ಸಂತರ್ಪಣೆ ಮಾಡಿಸಿದೆ. ಇವುಗಳ ಖರ್ಚನ್ನು ಉಳಿದು ಮಿಕ್ಕ ಹಣವನ್ನು ಅರಮನೆಗೆ ವಾಪಸ್ಸುಮಾಡಿದೆ.

'ಆಚಾರ್ಯರೇ ! ನಿಮಗೆ ಎಷ್ಟೋ ಮಾಡಬೇಕೆಂಬ ಆಸೆಯಿತ್ತು ನನಗೆ. ನೀವು ಒಂದೂ ತಿಳಿದವರಲ್ಲ. ಕಾಣದ ದೇಶಕ್ಕೆ ನಿಮ್ಮನ್ನು ಕರೆತಂದು ಕೈ ಬಿಟ್ಟು ಹೋಗುವ ದುಃಸ್ಥಿತಿ ಬಂದಿತು ನನಗೆ. ನಿಮ್ಮ ಒಳ್ಳೆಯ ಗುಣವೇ ನಿಮ್ಮನ್ನು ಕಾಪಾಡುತ್ತದೆ' ಎಂಬ ನನ್ನ ದೊರೆಯ ಕೊನೆಯ ನುಡಿಗಳು ಈಗಲೂ ನನ್ನಲ್ಲಿ ಕ್ಷಣಕ್ಷಣಕ್ಕೂ ಪ್ರತಿಧ್ವನಿತವಾಗುತ್ತಿವೆ!

೩. ಜನಜೀವನ

ಅರವತ್ತು ಎಪ್ಪತ್ತು ವರ್ಷಗಳ ಹಿಂದಿನ ಆ ಮೈಸೂರು ಸುಖಸಂತೋಷ ಸೌಭಾಗ್ಯಗಳ ತೌರಾಗಿತ್ತು. ಕೋಟೆ, ಪೇಟೆ, ಅಗ್ರಹಾರ—ಇವು ಆ ಮೈಸೂರಿನ ಮೂರು ಮುಖಗಳು. ಪೂರ್ವಕ್ಕೆ ಕಾರಂಜಿಬಂಗಲೆ, ಪಶ್ಚಿಮಕ್ಕೆ ಅಠಾರ ಕಛೇರಿ, ಉತ್ತರದಲ್ಲಿ ಈರನಗೆರೆ, ದಕ್ಷಿಣದಲ್ಲಿ ಈಗ ಇರುವ ಗಂಧದ ಎಣ್ಣೆಯ ಕಾರ್ಖಾನೆ, ಹತ್ತಿರವಿದ್ದ ಕಾಡುಬಸವೇಶ್ವರನ ಗುಡಿ,—ಇದು ನಗರದ ವಿಸ್ತೀರ್ಣ. ಅಂದಿನ ಪೇಟೆ ಅಗ್ರಹಾರಗಳು ರೂಪಾಂತರಹೊಂದಿ ಇಂದಿಗೂ ಉಳಿದಿವೆ; ಆದರೆ ಕೋಟೆಯ ಅಂದಿನ ಚಿತ್ರ ಇಂದಿನವರಿಗೆ ಉಳಿದಿಲ್ಲ.

ಹಕ್ಕಿಯ ನೋಟದಲ್ಲಿ ಕೋಟೆಯ ನಕ್ಷೆ ಪಗಡೆಕಾಯಿನ ಹಾಸಿನಂತೆ. ಈಗಿರುವ ಸ್ಥಳದಲ್ಲಿಯೇ ಅರಮನೆ. ಅದರ ಮುಂಭಾಗದಲ್ಲಿ ನಾಲ್ಕೂ ದಿಕ್ಕು ಗಳಲ್ಲಿ ನಾಲ್ಕು ರಸ್ತೆಗಳು. ಉತ್ತರದ ರಸ್ತೆಯನ್ನು ಹೂವಿನ ಅಂಗಡಿ ಬೀದಿ ಯೆಂದೂ ಪೂರ್ವದ ರಸ್ತೆಯನ್ನು ತ್ರಿನಯನೇಶ್ವರ ಬೀದಿಯೆಂದೂ ಕರೆಯು ತ್ತಿದ್ದರು. ಉತ್ತರಕ್ಕೆ ದಕ್ಷಿಣಕ್ಕೆ ಇದ್ದ ಎರಡು ಮುಖ್ಯ ದ್ವಾರಗಳಲ್ಲದೆ ಕೋಟೆಗೆ ಮೂರು ದಿಡ್ಡಿ ಬಾಗಿಲುಗಳು. ರಾತ್ರಿ ಒಂಭತ್ತು ಘಂಟೆಯ ಗುಂಡು ಹಾರಿತೆಂದರೆ ಎಲ್ಲ ಬಾಗಿಲುಗಳನ್ನೂ ಮುಚ್ಚುತ್ತಿದ್ದರು. ಬೆಳಗಿನ ಜಾವ ಐದು ಘಂಟೆಗೆ ಸರಿಯಾಗಿ ಗುಂಡು ಹಾರಿದಾಗ ಅವುಗಳನ್ನು ತೆರೆಯು ತ್ತಿದ್ದರು.

ಕೋಟೆಯಲ್ಲಿ ಸುಮಾರು ಮೂರು ಸಾವಿರ ಮನೆಗಳು. ಅರಮನೆಯ ಆಡಳಿತಕ್ಕೆ ಸಂಬಂಧಪಟ್ಟ ಕಛೇರಿಗಳು ಖಜಾನೆ ಅಂಚೆಕಛೇರಿ ಪೋಲೀಸ್ ಕಛೇರಿ ಇಂಜಿನ್ ಹೌಸ್ ಎಲ್ಲವೂ ಕೋಟೆಯಲ್ಲಿದ್ದವು. ತ್ರಿನಯನೇಶ್ವರ ದೇವಸ್ಥಾನ, ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನ, ವರಾಹಸ್ವಾಮಿ ದೇವಸ್ಥಾನ, ಗಣೇಶನಗುಡಿ, ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನ, ಪ್ರಸನ್ನ ವೆಂಕಟ ರಮಣಸ್ವಾಮಿ ದೇವಸ್ಥಾನ, ಸೋಮೇಶ್ವರನ ಗುಡಿ, ಮಾರಮ್ಮನ ಗುಡಿ, ಮುಂತಾದ ದೇವಸ್ಥಾನಗಳಿದ್ದವು ಅಲ್ಲಿ. ಮಹಾರಾಜರ ಸಮೀಪ ಬಂಧುಗಳ ಅರಸು ಲಾಯಗಳೆಲ್ಲವೂ ಕೋಟೆಯಲ್ಲೇ ಇದ್ದುವು. ಆಸ್ಥಾನದ ವೈದ್ಯರು ಗಳಾಗಿದ್ದ ನೇತ್ರವೈದ್ಯ ನಂಜುಂಡ ಪಂಡಿತರು, ಗುಂಡ್ಲುಪಂಡಿತರು, ಪಂಡಿತ ವ್ಯಾಸಾಚಾರ್ಯರು, ಗುರುಮೂರ್ತಿಪಂಡಿತರು, ಹೊಸಪಂಡಿತ ಭೀಮರಾಯರು, ಸಾಹಿತ್ಯ ವಿದ್ವಾಂಸರಾದ ಗರಳಪುರಿ ಶಾಸ್ತ್ರಿಗಳು, ಸುಂದರ

ಕಾಂಡದ ಸುಬ್ಬಾಶಾಸ್ತ್ರಿಗಳು, ನಂಜನಗೂಡು ಸುಬ್ಬಾಶಾಸ್ತ್ರಿಗಳು, ವ್ಯಾಕರಣದ ನರಸಿಂಹಶಾಸ್ತ್ರಿಗಳು, ಸಂಗೀತ ವಿದ್ವಾಂಸರುಗಳಾಗಿದ್ದ ವೀಣೆ ಶೇಷಣ್ಣ, ಸುಬ್ಬಣ್ಣ, ಸುಬ್ಬರಾಯರು, ಅರಮನೆ ಪಂಚಾಂಗವನ್ನು ಬರೆಯುತ್ತಿದ್ದ ಕ್ಯಾತನ ಹಳ್ಳಿ ಜೋಯಿಸರು, ಆಸ್ಥಾನದ ಜೋಯಿಸರಾಗಿದ್ದ ಕೊರಟಗೆರೆ ಜೋಯಿಸರು, ಸೈನ್ಯದ ಇಲಾಖೆಗೆ ಸೇರಿದ್ದ ಬಕ್ಷಿ ಭೀಮರಾಯರು, ಸವಾರ ಕಛೇರಿ ಅಣ್ಣಾಜಿ ರಾಯರು, ರಿಸಾಲ್‌ದಾರ್ ರಾಮರಾಯರು, ಹಾಗೂ ಬೇಳೆ ಭೀಮರಾಯರು, ಗಂಧದೆಣ್ಣೆ ದಾದಾರಾಯರು, ಅರಮನೆಯ ಚಿತ್ರಗಾರ ತಿಪ್ಪಣ್ಣ—ಮುಂತಾದ ವರ ಮನೆಗಳು ಕೋಟೆಯೊಳಗಿದ್ದದ್ದು ನನಗೆ ಚೆನ್ನಾಗಿ ಜ್ಞಾಪಕವಿದೆ. ಸೈನ್ಯದ ದೀವಟಿಗೆಗಳನ್ನು ಹಚ್ಚಿಸಲು ಒಂದು ಸಾರಿ ಎಣ್ಣೆ ಇರಲಿಲ್ಲವಂತೆ. 'ನಮ್ಮ ಮನೆಗೆ ಹೋಗಿ ಮನೆಯಲ್ಲಿರುವ ಗಂಧದೆಣ್ಣೆ ಡಬ್ಬಗಳನ್ನು ಒಡೆದು ದೀವಟಿಗೆ ಗಳನ್ನು ಹಚ್ಚಿ' ಎಂದರಂತೆ ದಾದಾರಾಯರು. ದೀವಟಿಗೆಗೆ ಗಂಧದೆಣ್ಣೆ ಉಪಯೋಗಿಸಿದ್ದರ ಪ್ರಯುಕ್ತ ದಾದಾರಾಯರು ಅಂದಿನಿಂದ ಗಂಧದೆಣ್ಣೆ ದಾದಾರಾಯರಾದರು ! ಹಾಗಾ ಎಂದರೆ ಒಂದಾಣೆ ; ಬೇಳೆ ಎಂದರೆ ಎರಡಾಣೆ. ಯಾವುದೋ ಒಂದು ಬಾರಿ ಲೆಕ್ಕಾಚಾರದಲ್ಲಿ ಕೇವಲ ಮೂರಾಣೆಗಳ ವ್ಯತ್ಯಾಸ ವನ್ನು ಕಂಡುಹಿಡಿದ ಸೂಕ್ಷ್ಮಬುದ್ಧಿಯ ಭೀಮರಾಯರಿಗೆ ಹಾಗಾ ಬೇಳೆ ಭೀಮ ರಾಯರೆಂದೇ ಅಡ್ಡಹೆಸರು ಬಿದ್ದಿತ್ತು. ಕೋಟೆಯ ಮನೆಗಳೆಲ್ಲ ಭಾರಿ ಕಟ್ಟಡ ಗಳು. ತೊಟ್ಟಿಮನೆಗಳೇ ಹೆಚ್ಚು. ಹಲಗೆ ಸೇರುವೆಯ ಉಪ್ಪರಿಗೆ ಮನೆಗಳೂ ಹಲವು. ಅಂದಿನ ಒಂದು ಮನೆಗೆ ಉಪಯೋಗಿಸುತ್ತಿದ್ದ ತೊಲೆ ಕಂಭಗಳನ್ನು ಈಗಿನ ಹತ್ತು ಮನೆಗಳಿಗೆ ಧಾರಾಳವಾಗಿ ಉಪಯೋಗಿಸಬಹುದು. ಕನಕಾ ಜಟ್ಟಿಯ ಗರಡಿಯನ್ನು ಒಡೆದಾಗ ಅಲ್ಲಿಯ ಕೆಲವು ತೊಲೆಗಳನ್ನು ಸಾಗಿಸಲು ಒಂದಾನೆಯಿಂದ ಸಾಧ್ಯವಾಗಲಿಲ್ಲ. ಎರಡಾನೆಗಳನ್ನು ತರಿಸಿ ಒಂದೊಂದು ತೊಲೆ ಯನ್ನೂ ಎಳೆಸಬೇಕಾಯಿತು. ಅಷ್ಟು ಭಾರಿ ತೊಲೆ ಕಂಭಗಳನ್ನು ಉಪಯೋಗಿ ಸುವುದಕ್ಕೆ ಒಂದು ಮುಖ್ಯ ಕಾರಣವಿತ್ತು. ಆಗ್ಗೆ ಗರಗಸವಿರಲಿಲ್ಲ. ಮರದ ಸಾಮಾನುಗಳನ್ನೆಲ್ಲ ಮುಖ್ಯವಾಗಿ ಬಾಚಿ ಮತ್ತು ನಾಟ ಉಳಿಗಳ ಮೂಲಕ ತಯಾರುಮಾಡುತ್ತಿದ್ದರು. ಬಾಚಿ ಎಂದರೆ ಒಂದು ಸ್ವಾರಸ್ಯವಾದ ಸಂಗತಿ ಜ್ಞಾಪಕಕ್ಕೆ ಬರುತ್ತದೆ. ಒಂದು ಸಲ ನಾಗಮಂಗಲದಲ್ಲಿ ಅಕ್ಕಸಾಲಿಗರಿಗೂ ನಾಯಿಂದರಿಗೂ ಮನಸ್ತಾಪ ಉಂಟಾಗಿ ಅಕ್ಕಸಾಲಿಗರಿಗೆ ಕ್ಷೌರಮಾಡುವ ದಿಲ್ಲವೆಂದು ನಾಯಿಂದರು ಮುಷ್ಕರ ಹೂಡಿದರು. ಅಕ್ಕಸಾಲಿಗರಲ್ಲಿ ಮೂರು ವಿಧ: ಚಿನ್ನದ ಕೆಲಸಮಾಡುವವರು, ಹಿತ್ತಾಳೆ ಕೆಲಸಮಾಡುವವರು, ಮರ ಗೆಲಸಮಾಡುವವರು. ಕ್ಷೌರಿಕರ ಈ ಬೆದರಿಕೆಗೆ ಅಕ್ಕಸಾಲಿಗರು ಅಂಜಲಿಲ್ಲ.

ಮರಗೆಲಸಮಾಡುವ ಒಬ್ಬ ಅಕ್ಕಸಾಲಿಗ ತನ್ನ ಬಾಚಿಯಿಂದಲೇ ಎಲ್ಲರಿಗೂ ಕ್ಷೌರಮಾಡಿದನಂತೆ! ಅಷ್ಟು ನಯನಾಜೂಕಿನ ಕೆಲಸಮಾಡುವ ಬಾಚಿಯವರಿದ್ದರು.

ಅರಮನೆ, ಖಜಾನೆ, ದೇವಪಾರ್ಥಿವರ ಮನೆ, ಅಳಿಯಂದಿರು ಕೃಷ್ಣೇ ಅರಸಿನವರ ಮನೆ—ಈ ನಾಲ್ಕು ಸ್ಥಳಗಳಲ್ಲಿ ಘಂಟೆ ಪಾರವಿತ್ತು. ಇವಲ್ಲದೆ ಕೋಟೆಯ ಹೊರಗಡೆ ಪರಕಾಲಸ್ವಾಮಿಗಳ ಮಠ, ಅಠಾರ ಕಛೇರಿ ಮತ್ತು ಹಸುವಿನ ಕರುಹಟ್ಟಿಗಳಲ್ಲಿ ಘಂಟೆ ಪಾರವಿತ್ತು. ಸಿಪಾಯಿಗಳು ಘಂಟೆ ಘಂಟೆಗೂ ಘಂಟೆ ಬಾರಿಸುತ್ತಿದ್ದರು. ಬೆಳಗ್ಗೆ ಐದು, ರಾತ್ರಿ ಒಂಭತ್ತು, ಕೆಲವು ದಿನಗಳ ನಂತರ ಮಧ್ಯಾಹ್ನ ಹನ್ನೆರಡಕ್ಕೆ ಗುಂಡು ಹಾರಿಸುತ್ತಿದ್ದರು. ಇವುಗಳ ಜತೆಗೆ ಅರಮನೆ, ದೇವಪಾರ್ಥಿವರ ಮನೆ, ಅಳಿಯಂದಿರು ಕೃಷ್ಣೇ ಅರಸಿನವರ ಮನೆಗಳಲ್ಲಿ ಬೆಳಗ್ಗೆ ಮಧ್ಯಾಹ್ನ ಸಾಯಂಕಾಲದ ವೇಳೆ ನಡೆಯುತ್ತಿದ್ದ ನವಬತ್ತು ನಗಾರಿಗಳೂ ಸಹ ವೇಳಾ ಸೂಚಕಗಳಾಗಿದ್ದವು. ಕೋಟೆಯ ಜನಕ್ಕೆ ಕಾರಂಜಿಕೆರೆಯಿಂದ ಕುಡಿಯುವ ನೀರು ಸರಬರಾಜಾಗುತ್ತಿತ್ತು. ಅಲ್ಲಲ್ಲಿ ಕಟ್ಟೆಗಳನ್ನು ಕಟ್ಟಿ ಕಾರಂಜಿಗಳ ಮೂಲಕ ಅವುಗಳಿಗೆ ನೀರನ್ನು ಒದಗಿಸಲಾಗುತ್ತಿತ್ತು. ೧೯೦೮ನೆಯ ಇಸವಿಯವರೆಗೆ ವಿದ್ಯುದ್ದೀಪದ ಏರ್ಪಾಡಿರಲಿಲ್ಲ. ಬೀದಿಗಳಲ್ಲಿ ಸೀಮೆಎಣ್ಣೆಯ ಲಾಂಧ್ರ ಕಂಭಗಳು. ಹೆಗಲಮೇಲೆ ಏಣಿಯನ್ನು ತಗಲುಹಾಕಿಕೊಂಡು ಮಧ್ಯಾಹ್ನ ನಾಲ್ಕರ ಸಮಯಕ್ಕೆ ಒಬ್ಬ ಆಳು ಕಂಭಕಂಭಕ್ಕೂ ಹೋಗಿ ಲಾಂದ್ರವನ್ನು ಒರೆಸಿ ಎಣ್ಣೆಯನ್ನು ಹಾಕಿ ಹೋಗುತ್ತಿದ್ದ. ಹಿಂದುಗಡೆಯಿಂದ ಇನ್ನೊಬ್ಬ ಆಳು ಬಂದು ದೀಪಹಚ್ಚಿ ಹೋಗುತ್ತಿದ್ದ. ಅರಮನೆ ಅರಸುಗಳ ಮನೆಗಳಲ್ಲಿ ಭಾರಿ ಭಾರಿ ಕಂದಿಲುಗಳನ್ನು ಹಚ್ಚುತ್ತಿದ್ದರು. ಒಂದೊಂದು ಕಂದೀಲಿನಲ್ಲಿ ಇನ್ನೂರು ಮುನ್ನೂರು ಮೊಂಬತ್ತಿ ದೀಪಗಳನ್ನು ಹಚ್ಚಿಡುವ ವ್ಯವಸ್ಥೆಯಿರುತ್ತಿತ್ತು. ಎಂಜಿನ್‌ಹೌಸಿನಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿ ಅರಮನೆಗೆ ಮಾತ್ರ ದೀಪವನ್ನು ಒದಗಿಸುತ್ತಿದ್ದರು. ೧೯೦೨ರಲ್ಲಿ ನಡೆದ ನಾಲ್ವಡಿ ಕೃಷ್ಣರಾಜ ಒಡೆಯರವರ ಪಟ್ಟಾಭಿಷೇಕ ಮಹೋತ್ಸವದ ಸಂದರ್ಭದಲ್ಲಿ ಮೈಸೂರಿಗೆ ಬಂದಿದ್ದ ಬಾಲಿವಾಲ ನಾಟಕ ಕಂಪನಿಯವರಿಂದ ನಗರ ಸಭೆಯವರು ಮೂರು ವಾಷಿಂಗ್‌ಟನ್ ದೀಪಗಳನ್ನು ಕ್ರಯಕ್ಕೆ ತೆಗೆದುಕೊಂಡು ಚಾಮರಾಜ ಒಡೆಯರ ಸ್ಟ್ಯಾಚ್ಯೂ, ಎಲೆಗಿನ್ ಫೌಂಟನ್, ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ಚೌಕ ಈ ಸ್ಥಳಗಳಲ್ಲಿ ಅವುಗಳನ್ನು ಹಚ್ಚುವ ಏರ್ಪಾಡು ಮಾಡಿದರು. ಜನಕ್ಕೆ ಈ ದೀಪಗಳನ್ನು

ನೋಡುವುದೇ ಒಂದು ಸೋಜಿಗ. ಸಾಯಂಕಾಲ ಅವನ್ನು ಹಚ್ಚುವ ವೇಳೆಗೆ ಮೊದಲೇ ಜನ ಗುಂಪುಗುಂಪಾಗಿ ಸೇರಿ ಹಚ್ಚಿಸುವ ರೀತಿಯನ್ನೂ ಕಣ್ಣು ಕೋರೈಸುವ ಬೆಳಕನ್ನೂ ನೋಡಿ ಅಚ್ಚರಿಪಡುತ್ತಿದ್ದರು.

ಮಹಾರಾಜರ ಸಂಸ್ಕೃತ ಪಾಠಶಾಲೆ, ರಾಜಾಸ್ಕೂಲು, ಟ್ರೈನಿಂಗ್ ಕಾಲೇಜು, ವೆಸ್ಲಿಮಿರ್ಷ ಹೈಸ್ಕೂಲು, ಸದ್ವಿದ್ಯಾ ಪಾಠಶಾಲೆ, ದಳವಾಯಿ ಸ್ಕೂಲು, ಹಾರ್ಡ್ವಿಕ್ ಕಾಲೇಜು, ಮರಿಮಲ್ಲಪ್ಪ ಸ್ಕೂಲು—ಇವು ಆಗಿನ ಮುಖ್ಯವಾದ ವಿದ್ಯಾಸಂಸ್ಥೆಗಳು. ಸಂಸ್ಕೃತ ಪಾಠಶಾಲೆ ಮತ್ತು ಸದ್ವಿದ್ಯಾ ಪಾಠಶಾಲೆಗಳಲ್ಲಿ ಸಂಸ್ಕೃತ ಪಾಠಗಳು ನಡೆಯುತ್ತಿದ್ದವು. ಉಳಿದ ಶಾಲೆಗಳಲ್ಲಿ ಇಂಗ್ಲಿಷ್ ಮತ್ತು ಕನ್ನಡವನ್ನು ಹೇಳಿಕೊಡುತ್ತಿದ್ದರು. ಅರಸುಮಕ್ಕಳ ವಿದ್ಯಾಭ್ಯಾಸಕ್ಕಾಗಿಯೇ ಅರಸು ಬೋರ್ಡಿಂಗ್ ಸ್ಕೂಲನ್ನು ನಡಸುತ್ತಿದ್ದರು. ಮಹಾರಾಣಿ ಗರ್ಲ್ಸ್ ಸ್ಕೂಲಿನಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸ ನಡೆಯುತ್ತಿತ್ತು. ಚಾಮರಾಜ ಒಡೆಯರ ಕಾಲಕ್ಕೆ ಮೊದಲು ಸ್ತ್ರೀ ವಿದ್ಯಾಭ್ಯಾಸಕ್ಕೆ ಸಂಸ್ಥಾನದಲ್ಲಿ ಅವಕಾಶ ವಿರಲಿಲ್ಲ. ಚಾಮರಾಜ ಒಡೆಯರ ಕಾಲದಲ್ಲಿ ಮೊಟ್ಟಮೊದಲನೆಯ ಗರ್ಲ್ಸ್ ಸ್ಕೂಲ್ ವರಾಹಸ್ವಾಮಿ ದೇವಸ್ಥಾನದಲ್ಲಿ ಪ್ರಾರಂಭವಾಯಿತು. ಅರಮನೆ ಮತ್ತು ಸರ್ಕಾರದ ಮೂಲಕ ನೂರಾರು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನೂ ಉಚಿತ ಊಟ ವಸ್ತ್ರಗಳ ಸೌಕರ್ಯಗಳನ್ನೂ ಕಲ್ಪಿಸಲಾಗಿತ್ತು. ಪಾಠಶಾಲೆಯಲ್ಲಿ ಓದುತ್ತಿದ್ದ ತ್ರಿಮತಸ್ಥ ಬ್ರಾಹ್ಮಣ ವಿದ್ಯಾರ್ಥಿಗಳಿಗೂ ಪಾಠಶಾಲೆಯ ಹಿಂದುಗಡೆ ವಾಸದ ಕೊಠಡಿಗಳನ್ನು ಕಟ್ಟಿದ್ದರು. ವೈಷ್ಣವ ಮತ್ತು ಸ್ಮಾರ್ತಬ್ರಾಹ್ಮಣ ವಿದ್ಯಾರ್ಥಿಗಳಿಗೆ ಪೂರ್ಣಯ್ಯನವರ ಛತ್ರದಲ್ಲಿ, ಶ್ರೀ ವೈಷ್ಣವ ವಿದ್ಯಾರ್ಥಿಗಳಿಗೆ ಪರಕಾಲಸ್ವಾಮಿಗಳ ಮಠದಲ್ಲಿ, ಎರಡು ಹೊತ್ತೂ ಊಟ ಹಾಕುತ್ತಿದ್ದರು. ವಾರಕ್ಕೊಂದಾವರ್ತಿ ವಿದ್ಯಾರ್ಥಿಗಳಿಗೆ ಅಭ್ಯಂಜನ ಮಾಡಿಕೊಳ್ಳಲು ಎಣ್ಣೆ ಸೀಗೆಕಾಯಿ ಕೊಡುತ್ತಿದ್ದರು. ಪ್ರತಿಯೊಬ್ಬ ವಿದ್ಯಾರ್ಥಿಗೂ ವರ್ಷಕ್ಕೆ ಒಂದು ಜತೆ ಪಂಚೆಯನ್ನು ಕೊಡುತ್ತಿದ್ದರು. ಅಲ್ಲಿ ವಿದ್ಯಾರ್ಥಿಗಳ ಕೊಠಡಿಗಳ ಮುಂದೆ ಒಂದೊಂದು ತುಲಸಿ ಬೃಂದಾವನ. ಸ್ನಾನ ಆಹ್ನಿಕ ಸಾಲಿಗ್ರಾಮ ಪೂಜೆ ಪಾಠಪ್ರವಚನಗಳನ್ನು ಮುಗಿಸಿಕೊಂಡು ತೇಜಃಪುಂಜರಾದ ವಿದ್ಯಾರ್ಥಿಗಳು ಗುಂಪುಗುಂಪಾಗಿ ಬೀದಿಯಲ್ಲಿ ಪಾರಾಯಣ ಮಾಡುತ್ತ ಊಟದ ಸಮಯಕ್ಕೆ ಪೂರ್ಣಯ್ಯನವರ ಛತ್ರಕ್ಕೆ ಹೋಗುತ್ತಿದ್ದ ನೋಟ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

ಅರಮನೆಗೆ ಸೇರಿದ ಹಾಗೆ ಮೂರು ಬಿಡದಿಗಳು. ಖಾಸ್ ಬಿಡದಿಯಲ್ಲಿ

6860 Vijaya Evening College Library Bangalore-560 004.

ಮಹಾರಾಜರ ಊಟ ತಿಂಡಿ ತೀರ್ಥಗಳು ಸಿದ್ಧವಾಗುತ್ತಿದ್ದವು. ತೊಂಬಾರದ ಬಿಡದಿಯಲ್ಲಿ ಅರಮನೆಯ ಇತರ ನೌಕರರಿಗೂ ಬಡಬಗ್ಗರಿಗೂ ಊಟದ ವ್ಯವಸ್ಥೆ ಮಾಡಲಾಗಿತ್ತು. ಇವಲ್ಲದೆ ಬ್ರಾಹ್ಮಣರಿಗಾಗಿಯೇ ಒಂದು ಪ್ರತ್ಯೇಕ ಬಿಡದಿಯೂ ಇತ್ತು. ತೊಂಬಾರದ ಬಿಡದಿಯಲ್ಲಿ ಪ್ರತಿ ದಿನ ಒಂದು ಪಲ್ಲ ಅಕ್ಕಿ ಅನ್ನ ಒಂದು ಪಲ್ಲ ರಾಗಿ ಹಿಟ್ಟನ್ನು ಅಡುಗೆಮಾಡಿ ಸಂಜೆಯ ವೇಳೆ ಕೋಟೆಯ ಹೊರಗಿನ ಮೈದಾನದಲ್ಲಿ ಭಿಕ್ಷುಕರಿಗೆ ಹಂಚುತ್ತಿದ್ದರು.

ಪ್ರತಿಯೊಬ್ಬ ಅರಸುಮನೆಗೂ ಅವರವರ ದರ್ಜೆಗನುಸಾರವಾಗಿ ನೂರು ಇನ್ನೂರು ಮುನ್ನೂರು ಸೇರು ಅಕ್ಕಿ ಲವಾಜಮೆಯನ್ನು ಅರಮನೆಯಿಂದ ಕೊಡುತ್ತಿದ್ದರು. ಲವಾಜಮೆ ಎಂದರೆ ಊಟದೆಲೆ ವೀಳೆದೆಲೆ ಸುಣ್ಣದಿಂದ ಮೊದಲು ಮಾಡಿಕೊಂಡು ಹಾಲು ಬೆಣ್ಣೆ ಮೊಸರಿನವರೆಗೆ ಎಲ್ಲ ಪದಾರ್ಥ ಗಳನ್ನೂ ಬೇಕಾಗುವಷ್ಟು ಪ್ರಮಾಣದಲ್ಲಿ ಸರಬರಾಜು ಮಾಡುತ್ತಿದ್ದರು. ದವಸಧಾನ್ಯಗಳಲ್ಲದೆ ಮೇಲೆ. ಹಣವನ್ನು ಕೊಡಲಾಗುತ್ತಿತ್ತು. ಇಷ್ಟು ಏರ್ಪಾಡಾದಮೇಲೆ ಕೇಳಬೇಕೆ? ಪ್ರತಿಯೊಬ್ಬ ಅರಸಿನಮನೆಯೂ ಒಂದು ಸಣ್ಣ ಅರಮನೆಯೇ! ಅಲ್ಲಿ ವೈಭವ ಸುಖ ಸಂತೋಷಗಳು ತುಂಬಿ ತುಳು ಕಾಡುತ್ತಿದ್ದವು. ಓದು ಬರಹ ಕಲಿತು ನೌಕರಿಗೆ ಸೇರಿ ಜೀವನಮಾಡುವ ಆವಶ್ಯಕತೆಯಾಗಲೀ ಮನೋಭಾವನೆಯಾಗಲೀ ಅವರಿಗಿರಲಿಲ್ಲ. ಮನೆಯಲ್ಲೇ ಮಕ್ಕಳಿಗೆ ಓದುಬರಹ ಕಲಿಸುತ್ತಿದ್ದರು. ಗರಡಿಸಾಧನೆ ಕುದುರೆಸವಾರಿ ಮೊದಲಾದ ಕ್ಷತ್ರಿಯವಿದ್ಯೆಯನ್ನು ಎಲ್ಲ ಅರಸುಗಳೂ ಅಭ್ಯಾಸ ಮಾಡುತ್ತಿದ್ದರು. ಕಡೆಯ ಪಕ್ಷ ಹತ್ತಿಪ್ಪತ್ತು ಮಂದಿ ಬ್ರಾಹ್ಮಣರ ಹತ್ತಿಪ್ಪತ್ತು ಮಂದಿ ಆಳುಕಾಳುಗಳ ಜೀವನ ಸುಖವಾಗಿ ನಡೆಯುತ್ತಿತ್ತು—ಒಬ್ಬೊಬ್ಬ ಅರಸುಗಳ ಮನೆಯಲ್ಲಿ. ಹಸು ಕರು ಗಿಣಿ ಪಾರಿವಾಳ ಮೈನ ಸೋರೆಹಕ್ಕಿ ನಾಯಿಗಳಿಲ್ಲದ ಅರಸುಮನೆಯೇ ಇರಲಿಲ್ಲ. ಮೃಷ್ಟಾನ್ನಭೋಜನ ಮಾಡಿಕೊಂಡು, ಅರಸುಗಳ ಜತೆಯಲ್ಲಿ ವಿನೋದವಾಗಿ ಮಾತುಕತೆಯಾಡಿಕೊಂಡು, ಪಗಡೆ ಚದುರಂಗ ಇಸ್ಪೀಟು ಆಡುವುದಕ್ಕೆಂದೇ ನಾಲ್ಕಾರು ಮಂದಿಯನ್ನ ಸಂಬಳಕ್ಕಿಟ್ಟು ಕೊಂಡಿರುತ್ತಿದ್ದರು. ಬೆಳಗ್ಗೆ ಮನೆಯ ವೈದ್ಯರು ಅರಸುಗಳ ಮನೆಗಳಿಗೆ ಹೋಗಿ ಎಲ್ಲರ ದೇಹಸ್ಥಿತಿಯನ್ನು ನೋಡಿಕೊಂಡು ಹೋಗುತ್ತಿದ್ದರು. ಮನೆಯ ಜೋಯಿಸರೂ ಪ್ರತಿದಿನ ಬೆಳಿಗ್ಗೆ ಅರಸುಗಳ ಮನೆಗಳಿಗೆ ಹೋಗಿ—'ಇಂದು ಇಂಥ ತಿಥಿ, ಇಂಥ ನಕ್ಷತ್ರ' ಎಂಬುದಾಗಿ ಪಂಚಾಂಗವನ್ನು ತಿಳಿಸಿ ಹೋಗು ತ್ತಿದ್ದರು. ಒಂದು ಪಟದ ಹಬ್ಬವೇ ಬರಲಿ, ಗಣೇಶನ ಹಬ್ಬವೇ ಬರಲಿ, ಕಾಮನ

ಹಬ್ಬವೇ ಬರಲಿ, ಅದೇ ನೆಪಮಾಡಿಕೊಂಡು ನೂರಾರುಜನಕ್ಕೆ ಸಮಾರಾಧನೆ ಸಂತರ್ಪಣೆಗಳು ದಾನಧರ್ಮಗಳು ನಡೆಯುತ್ತಿದ್ದವು. ಗಣಪತಿ ಹಬ್ಬ ಬಂದರೆ ಪ್ರತಿಯೊಬ್ಬ ಅರಸುಮನೆಯಲ್ಲೂ ಕೊಠಡಿಯ ತುಂಬ ಗೌರಿಗಣೇಶಗಳು, ಗಣೇಶನ ಮಂಟಪಗಳು, ಮೊರದ ಬಾಗಿನಗಳು, ಕಾಯಿ ಬೆಲ್ಲ! ಮನೆಗೆ ಬಂದ ಬ್ರಾಹ್ಮಣರಿಗೆ ಮುತ್ತೈದೆಯರಿಗೆ ಗೌರಿ ಸೀರೆ ಕುಪ್ಪಸ ಗಣೇಶಮಂಟಪ ತೆಂಗಿನಕಾಯಿ ಬೆಲ್ಲ ಐದು ಹತ್ತು ರೂಪಾಯಿ ದಕ್ಷಿಣೆಯನ್ನು ಕೊಟ್ಟು ಕಳುಹಿಸುತ್ತಿದ್ದರು. ಪಟದ ಹಬ್ಬ ಬಂದರೂ ಹಾಗೆಯೇ. ತರಹಾವರಿ ಪಟಗಳು ದಾರದ ಉಂಡೆಗಳು ಪ್ರತಿಯೊಬ್ಬ ಅರಸುಗಳ ಮನೆಯಲ್ಲೂ ತುಂಬಿರುತ್ತಿದ್ದವು. ತಮಗೆ ಬೇಕಾದ ಬ್ರಾಹ್ಮಣರ ಮನೆಗಳಿಗೆ ಪಟ ದಾರದ ಉಂಡೆ ದಕ್ಷಿಣೆಯನ್ನು ಕೊಟ್ಟುಕಳುಹಿಸುತ್ತಿದ್ದರು. ಕಾಲ ಎಷ್ಟು ಸಮೃದ್ಧಿಯಾಗಿತ್ತು, ಅರಸುಗಳ ಮನೆಯಲ್ಲಿ ಐಶ್ವರ್ಯ ಹೇಗೆ ತುಂಬಿ ತುಳುಕಾಡುತ್ತಿತ್ತು—ಎನ್ನುವುದಕ್ಕೆ ಒಂದು ಉದಾಹರಣೆ ಇದು. ಪಟದ ಹಬ್ಬದ ದಿನ ಬುಟ್ಟಿ ಬುಟ್ಟಿ ತಿಂಡಿತೀರ್ಥಗಳನ್ನು ಮಾಡಿಕೊಂಡು ಅರಸುಗಳು ಮಕ್ಕಳುಮರಿ ಆಳುಕಾಳುಗಳೊಂದಿಗೆ ಪಟ ಆಡಿಸಲು ಬಯಲಿಗೆ ಹೋಗುತ್ತಿದ್ದರು. ಪಟ ಆಡಿಸುವುದರಲ್ಲೂ ಒಂದು ಗುಂಪಿಗೂ ಇನ್ನೊಂದು ಗುಂಪಿಗೂ ಪೈಪೋಟಿ. ಗಾಜನ್ನು ನುಣ್ಣಗೆ ಪುಡಿಮಾಡಿ ಕೋಳಿಮೊಟ್ಟೆಯ ರಸದಲ್ಲಿ ಬೆರಸಿ ಪಟ ಆಡಿಸುವ ದಾರಕ್ಕೆ ಸವರಿ 'ಮಾಂಜಿ' ದಾರವನ್ನು ತಯಾರುಮಾಡುತ್ತಿದ್ದರು. ಹತ್ತು ಹದಿನೈದು ಗಜ ಇಂತಹ ಮಾಂಜಿದಾರವನ್ನು ಪಟಕ್ಕೆ ಕಟ್ಟಿ ಮಾಂಜಿದಾರದಿಂದೀಚೆಗೆ ಸಪ್ಪೆದಾರವನ್ನು ಕಟ್ಟುತ್ತಿದ್ದರು. ಒಂದು ಪಟದ ಮಾಂಜಿದಾರವನ್ನು ಇನ್ನೊಂದು ಪಟದ ಸಪ್ಪೆದಾರದ ಮೇಲೆ ಬೀಳುವಂತೆ ಮಾಡಿ ಪಟಗಳನ್ನು ಕಡಿದುಹಾಕಿ ಎದುರಾಳಿಗಳನ್ನು ಸೋಲಿಸುವುದೇ ಆಟದ ಗುರಿ. ಒಮ್ಮೆ ದೇವಪಾರ್ಥಿವರ ಮನೆಗೂ ಶಿವರಾಂಬಹದ್ದೂರರ ಮನೆಯವರಿಗೂ ಬಲವಾದ ಪೈಪೋಟಿ ನಡೆದಿತ್ತು. ದೇವಪಾರ್ಥಿವರ ಪಟಗಳೆಲ್ಲವನ್ನೂ ಕಡಿದುಹಾಕಿದ್ದರು—ಶಿವರಾಂಬಹದ್ದೂರರ ಮನೆಯವರು. ದೇವಪಾರ್ಥಿವರಿಗೆ ಆಕಾಶವೇ ತಲೆಯಮೇಲೆ ಬಿದ್ದಂತಾಗಿತ್ತು. ಸಂಜೆ ಮನೆಗೆ ಬಂದಮೇಲೆ ತಮ್ಮ ಕಡೆ ಪಟಗಳನ್ನಾಡಿಸುತ್ತಿದ್ದ ಪುಟ್ಟಮಲ್ಲನನ್ನು ಕರೆದು ತಮ್ಮ ದುಃಖವನ್ನು ತೋಡಿಕೊಂಡರು.

"ಲೋ ಪುಟ್ಟಮಲ್ಲು!"

"ಬುದ್ದಿ!"

"ಏನೋ ಹಿಂಗಾಗೋಯ್ತಲ್ಲೋ ಇವತ್ತು! ತಲೆ ಎತ್ತೋಕೆ ಇಲ್ಲಾ್ಧಂಗಾಯ್ತಲ್ಲೋ ಅವರ ಮುಂದೆ!"

"ಏನು ಯೋಚನೆ ಮಾಡಬೇಡಿ ಬುದ್ದಿ. ನಾನು ಒಂದು ಉಪಾಯ ಯೋಚಿಸಿವ್ನಿ. ಆಂಗೆ ಮಾಡಿದರೆ...."

"ಏನೋ ಅದು ಉಪಾಯ? ಯೇಳೋಬೇಗ. ಬೇಕಾದ್ದಾಗಲೀ ಅದರಿಂದ ಮಾಡೇಬುಡೋಣ."

"ಬುದ್ದಿ! ಸಪ್ಪೆದಾರಾನ ಕುಯ್ಯೋದು ಯಾವುದು ಬುದ್ದಿ?"

"ಮಾಂಜಿ ದಾರ!"

"ಮಾಂಜಿ ದಾರಕ್ಕೆ ಏನು ಹಾಕಿರ್ರಾರೆ ಬುದ್ದಿ?"

"ಗಾಜಿನ ಪುಡಿ!"

"ಗಾಜನ್ನ ಕುಯ್ಯೋದು ಯಾವುದು ಬುದ್ದಿ?"

"ವಜ್ರ!"

"ಹಾಂ! ಒಂದು ಹಿಡಿ ವಜ್ರ ಅಪ್ಪಣೆಯಾಗಲಿ ಒಡೆಯ! ನೋಡೋರಂತೆ ನಾಳೆ ಆಟಾನಾದ್ರೂನು! ಒಂದು ಪಟ ಆವರ ಕಡೇದು ಉಳಿದ್ರೆ ನನ್ನ ಹೆಸರು ಪುಟ್ಟಮಲ್ಲ ಅಲ್ಲ ಬುದ್ದಿ!"

ಪುಟ್ಟಮಲ್ಲನ ಕುಶಾಗ್ರಬುದ್ಧಿಯನ್ನು ಕಂಡು ದೇವಪಾರ್ಥಿವರು ತಲೆ ತೂಗಿದರು. ಒಳಗೆ ಹೋಗಿ ಆಂಗೈ ತುಂಬ ವಜ್ರ ತಂದು ಸುರಿದರು ಪುಟ್ಟ ಮಲ್ಲನಿಗೆ! ಪುಟ್ಟಮಲ್ಲ ವಜ್ರವನ್ನು ವಸ್ತ್ರದಲ್ಲಿ ಭದ್ರವಾಗಿ ಗಂಟುಕಟ್ಟಿಕೊಂಡು ಬುದ್ದಿಯವರ ಅಪ್ಪಣೆ ಪಡೆದು ಹೊರಟ, ನೇರವಾಗಿ ಶಿವರಾಂಬಹದ್ದೂರರ ಕಡೆ ಪಟ ಆಡಿಸಿದವನ ಬಳಿಗೆ ಬಂದ. 'ಲೋ! ಇವತ್ತು ನಮ್ಮ ಬುದ್ದಿಯವರಿಗೆ ಮನಸ್ಸು ಬಹಳ ಚಿಕ್ಕದಾಗ್ಯೆತಿ. ಒಂದೂ ಪಟ ಉಳೀಗೊಡಿಸದೆ ಎಲ್ಲ ಪಟ ಗಳನ್ನೂ ಕಡಿದುಹಾಕಿಬಿಟ್ಟರಲ್ಲ ಅಂತ! ಲೋ ಹಿಡಿ ಈ ಐದು ರೂಪಾಯ್ನಾ. ನಾಳೆದಿನ ನೀನು ಒಂದು ಉಪಕಾರ ಮಾಡಿಕೊಡಬೇಕು. ನಿಮ್ಮ ಪಟಗಳಿಗೆ ಮಾಂಜಿದಾರ ಕಟ್ಟಬೇಡ. ಬರಿ ಸಪ್ಪೆದಾರ ಮಾತ್ರ ಕಟ್ಟು ತಿಳೀತಾ?' ಎಂದು ಪುಸಲಾಯಿಸಿದ. ಐದು ರೂಪಾಯಿ ಕೈಗೆ ಬಿದ್ದಮೇಲೆ ಹೂ ಅನ್ನದೆ ಅವನಿನ್ನೇನು ಮಾಡುತ್ತಾನೆ? ಸರಿ ಮಾರನೆಯ ದಿನ ಸಂಜೆ ಶಿವರಾಂಬಹದ್ದೂರರ ಕಡೆಯ ಪಟಗಳೆಲ್ಲ ಧೂಳೀಪಟವಾಯಿತು. ದೇವಪಾರ್ಥಿವರಿಗೆ ಸಂತೋಷದಿಂದ ಮೈಯುಬ್ಬಿತು! 'ಭಲೇ! ಪುಟ್ಟಮಲ್ಲ!' ಎಂದು ಮೀಸೆ ತಿರುವಿದರು. 'ಬುದ್ದಿ! ಇನಾಮು?' ಎಂದ. ಸಂತೋಷದಿಂದ ಹತ್ತುರೂಪಾಯಿ ಇನಾಮನ್ನು ಅರ್ಥಾತ್ ಗಡ್ಡಕ್ಕೆ ಬೇರೆ ಸೀಗೆಕಾಯಿಯನ್ನು ಬುದ್ದಿಯವರು ಪುಟ್ಟಮಲ್ಲನಿಗೆ ದಯಪಾಲಿಸಿದರು.

ಅರಸುಗಳ ಸಂಗಡ ಪಗಡೆ ಇಸ್ಪೀಟ್ ಚದುರಂಗ ಮುಂತಾದ ಆಟಗಳನ್ನು

ಆಡುವುದಕ್ಕೆಂದೇ ಕೆಲವರನ್ನು ನೇಮಿಸಿಕೊಳ್ಳುತ್ತಿದ್ದರು, ಎಂದು ಹೇಳಿದೆನಷ್ಟೆ. ಬಾಳೆ ಅರಸಿನವರ ಲಾಯದಲ್ಲಿ ಗೋಪಾಲಕೃಷ್ಣೇ ಅರಸಿನವರು, ಅತ್ತಗೂಡು ಬಸಪ್ಪನವರು, ಅಂಬಾಜಿ ಬಕ್ಷಿಯವರು, ದೇಶಪ್ಪಾಜಿಯವರು, ಒಕ್ಕಲುಗಂಟೆ ರಾಮಶೆಟ್ಟರು, ನಾನು ತಪ್ಪದಹಾಗೆ ಪಗಡೆಗೆ ಸೇರುತ್ತಿದ್ದೆವು. ಒಂದೆರಡುಸಲ ದಳಗಳ್ಳಿ ಕೃಷ್ಣೇ ಅರಸು ಪುಟ್ಟಾರಿಶಾಸ್ತ್ರಿಗಳ ಸಂಗಡ ಆಟವಾಡುವ ಸಂದರ್ಭ ಬಂತು. ಅವರ ಜತೆಯಲ್ಲಿ ಪಗಡೆಯಾಡುವುದೆಂದರೆ ಬಲು ಸ್ವಾರಸ್ಯ. ಪುಟ್ಟಾರಿ ಶಾಸ್ತ್ರಿಗಳಿಗೆ ಆಟ ಬರದು. ಹಾಗೂ ಹೀಗೂ ಮಾಡಿ ಕಾಯಿಗಳನ್ನು ಹಣ್ಣು ಮಾಡಿಸುವ ಘಟ್ಟಕ್ಕೆ ತರುತ್ತಿದ್ದರು. ಆ ಸಮಯಕ್ಕೆ ಸರಿಯಾಗಿ ಎದುರಾಳಿಗೆ ಗರ ಬಿದ್ದು ಶಾಸ್ತ್ರಿಗಳ ಕಾಯಿ ಹೋಗುವ ಸ್ಥಿತಿ ಬರುತ್ತಿತ್ತು. ಶಾಸ್ತ್ರಿಗಳು ಅಳುವುದೊಂದೇ ಬಾಕಿ. 'ಸ್ವಾಮಿ! ಬಹಳ ಕಷ್ಟಪಟ್ಟು ತಂದಿದ್ದೀನಿ ಕಾಯನ್ನು. ದಯಮಾಡಿ ಅದನ್ನು ಮಾತ್ರ ಕೊಲ್ಲಬೇಡಿ' ಎಂದು ಎದುರು ಆಟಗಾರನ ಎರಡು ಕಾಲುಗಳನ್ನೂ ಹಿಡಿದುಕೊಳ್ಳುತ್ತಿದ್ದರು. ಶಾಸ್ತ್ರಿಗಳ ಶೋಚನೀಯ ಸ್ಥಿತಿಯನ್ನು ನೋಡಿದರೆ ಯಾರಿಗಾದರೂ 'ಅಯ್ಯೋ' ಎನ್ನಿಸು ತ್ತಿತ್ತು; ಕಾಯನ್ನು ಕೊಲ್ಲುತ್ತಿರಲಿಲ್ಲ. ಕಾಯಿ ಹಣ್ಣಾಗುವುದೇ ತಡ; ಹಿಂದಿನ ಕ್ಷಣದಲ್ಲಿ ಎದುರಾಳಿಯ ಕಾಲುಗಳನ್ನು ಹಿಡಿದಿದ್ದ ಕೈಗಳು ಶಾಸ್ತ್ರಿಗಳ ಮೀಸೆಯ ಮೇಲೆ ಮೆರೆಯುತ್ತಿದ್ದವು.

ಇದು ಪುಟ್ಟಾರಿ ಶಾಸ್ತ್ರಿಗಳ ಆಟದ ವೈಖರಿಯಾದರೆ ದಳಗಳ್ಳಿ ಕೃಷ್ಣೇ ಅರಸಿನವರ ವೈಖರಿ ಬೇರೆ ರೀತಿಯದು. ಅರಸಿನವರಿಗೆ ಯಾವುದೋ ಗರ ಬೇಕಾಗಿರುತ್ತಿತ್ತು. ಕಣ್ಣುಮುಚ್ಚಿಕೊಂಡು ತದೇಕಚಿತ್ತದಿಂದ 'ತಾಯೇ! ಚಾಮುಂಡೇಶ್ವರಿ! ನಿನ್ನ ಪಾದವೇ ಗತಿ' ಎಂದು ಪ್ರಾರ್ಥಿಸಿ ದಾಳವನ್ನು ಬೀಸುತ್ತಿದ್ದರು. ಅವರಿಗೆ ಬೇಕಾದ ಗರಬಿಟ್ಟು ಬೇರೆ ಗರವನ್ನು ಅನುಗ್ರಹಿಸು ತ್ತಿದ್ದಳು 'ತಾಯಿ.' ಕೇಳಬೇಕೇ ಅರಸಿನವರ ಕೋಪವನ್ನು? ಹಲ್ಲುಮುಡಿ ಕಚ್ಚುತ್ತ 'ದಯಮಾಡಿಸಯ್ಯ ದಾನವಂತನೇ' ಎಂದು ರಾಗವಾಗಿ ಹಾಡುತ್ತ ದಾಳವನ್ನು ಮುಂದೆ ಇಟ್ಟುಕೊಂಡು 'ಥಥ್ ಪ್ರಾರಬ್ಧವೇ!' ಎಂದು ಪ್ರಯೋಗ ಮಾಡಿ ಶಾಪಹಾಕುತ್ತಿದ್ದರು!

ಕೋಟೆಯ ಹೊರಗಡೆ ಅರಮನೆಗೆ ಸೇರಿದ ಹಸುಕರುಹಟ್ಟಿ ಎತ್ತಿನಕರು ಹಟ್ಟಿಗಳಲ್ಲಿ ವರ್ಷವೆಲ್ಲ ಕರೆಯುವ ನೂರಾರು ಹಸುಗಳು ಎಮ್ಮೆಗಳು. ಒಂದೊಂದು ಜಿಲ್ಲೆಯಲ್ಲೂ ಅರಮನೆಗೆ ಸೇರಿದ ಸುಮಾರು ಎರಡುಸಾವಿರ ಹಸುಗಳು ಇರುತ್ತಿದ್ದದ್ದರಿಂದ ಕರುಹಟ್ಟಿಗಳಲ್ಲಿ ವರ್ಷದುದ್ದಕ್ಕೂ ಕರೆಯುವ ಹಸು ಎಮ್ಮೆಗಳನ್ನು ಕಟ್ಟಿರಲು ಸಾಧ್ಯವಾಗುತ್ತಿತ್ತು. ಕರುಹಟ್ಟಿಯ ಮಧ್ಯೆ ಗೋಪಾಲ



ದರೋಗ ಚೆಲುವಯ್ಯ

ಕೃಷ್ಣನ ದೇವಸ್ಥಾನ. ನಾಲ್ಕು ಕಡೆಯೂ ಬೇರೆ ಬೇರೆ ಜಾತಿಯ ದನಗಳು. ಕರುಗಳಿಗಾಗಿ ಪ್ರತ್ಯೇಕ ಭಾಗ. ಅಂಗಳದಲ್ಲಿ ಒಂದು ಹುಲಿಯ ಪಂಜರ. ಪ್ರಸಿದ್ಧ ಹಾಸ್ಯನಟ ಪುಟ್ಟಾರಿ ಶಾಸ್ತ್ರಿಗಳು ಅಲ್ಲಿ ಗುಮಾಸ್ತರು. ಕರುಹಟ್ಟಿಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ದರೋಗ ಚೆಲುವಯ್ಯನವರು. ಸಾಕ್ಷಾತ್ ಧರ್ಮರಾಯ ಚೆಲುವಯ್ಯ. ಆಜಾನುಬಾಹು. ನಾನು ನೋಡಿದಾಗ ಅವರಿಗೆ ಸುಮಾರು ೬೦ ವರ್ಷ. ಕಸೆ ಅಂಗಿ, ಪೇಟ, ಕಚ್ಚೆಪಂಚೆ ಕೈಯಲ್ಲಿ ಮಂಗಳಗಿರಿವಸ್ತ್ರ, ಹೆಗಲ ಮೇಲೆ ಆರುಮೊಳದ ವಸ್ತ್ರ, ಇದು ಚೆಲುವಯ್ಯನವರ ಉಡುಪು. ಮುಖಕ್ಕೆ ಕಾಂತಿಕೊಡುವ ಮೀಸೆ. ಪ್ರತಿದಿನ ಸುಮಾರು ಮುನ್ನೂರು ನಾನೂರು ಸೇರು ಹಾಲು ಆಗುತ್ತಿತ್ತು. ಕರೆದ ಹಾಲನ್ನೆಲ್ಲ ಗೋಪಾಲಕೃಷ್ಣನ ಮುಂದೆ ಇಟ್ಟು ಆ ಬಳಿಕ ಅರಮನೆಗೆ ರಾಜಬಂಧುಗಳ ಮನೆಗೆ ಹಾಲನ್ನು ಕಳುಹಿಸುತ್ತಿದ್ದರು. ಎರಡುಹೊತ್ತು ನೂರರವತ್ತು ಮಕ್ಕಳಿಗೆ ತಲಾ ಒಂದು ಪಾವಿನಂತೆ ಹಾಲನ್ನು ಹಂಚುತ್ತಿದ್ದರು. ಒಂದೇ ಹಸುವಿನ ಎರಡು ಕರುಗಳು ಕರುಹಾಕಿ ಏಕ ಕಾಲದಲ್ಲಿ ಹಾಲು ಕೊಡುತ್ತಿದ್ದರೆ ಆ ಅಕ್ಕತಂಗಿಯರ ಹಾಲನ್ನು ಬೆರಸಿ ಕುಡಿದರೆ ನಾಲ್ಕರ ಛಳಿ ಹೋಗುತ್ತದೆ ಎಂದು ಜನರಲ್ಲಿ ಒಂದು ನಂಬಿಕೆ. ಇಂಥ ಆರೆಂಟು ಜತೆ ದನಗಳನ್ನು ಸಹ ಯಾವಾಗಲೂ ಕರುಹಟ್ಟಿಯಲ್ಲಿ ಕಟ್ಟಿರುತ್ತಿದ್ದರು. ದಿನಕ್ಕೆ ಎರಡು ಪಲ್ಲ ಹುರುಳಿ ಬೇಯಿಸುತ್ತಿದ್ದರು. ಒಂದು ಪಲ್ಲ ರುಬ್ಬುತ್ತಿದ್ದರು. ಐವತ್ತು ಅರವತ್ತು ಜನ ದನಗಳ ಚಾಕರಿಗಾಗಿ. ಒಂದು ಸಲ ಆಳುಗಳ ಪೈಕಿ ಒಬ್ಬ ಎರಡು ಸೇರು ಹುರುಳಿ ಕದ್ದು ಸೊಂಟದ ಸುತ್ತ ಕಟ್ಟಿಕೊಂಡು ಕರುಹಟ್ಟಿಯಿಂದ ಹೊರಡುವಾಗ್ಗೆ ಬಾಗಿಲಿನಲ್ಲಿ ಸಿಪಾಯಿ ಪತ್ತೆಹಚ್ಚಿ ಹಿಡಿದು ಕೂಡಿಸಿದ. ಮಾರನೆಯ ದಿನ ಬೆಳಿಗ್ಗೆ ಚೆಲುವಯ್ಯ ಬಂದರು.

"ಬುಂಡಾ !"

"ಬುದ್ಧಿ !"

"ಏನೋ ಇವತ್ತಿನ ರಪಟ್ಟು ?"

ಚೆಲುವಯ್ಯನವರ ಬಾಯಿಯಲ್ಲಿ ರಿಪೋರ್ಟು ರಪ್ಪಟ್ಟು ಆಗಿತ್ತು.

"ಬುದ್ಧಿ ! ನಿನ್ನೆ ರಾತ್ರಿ ಕರಿಯ ಎರಡು ಸೇರು ಹುರುಳಿ ಕದ್ದು ಸಿಕ್ಕಿ ಬಿದ್ದವ್ನೆ ಸಿಪಾಯಿ ಹಿಡಿದು ಕುಂಡಸವ್ನೆ."

"ಸಿಪಾಯಿಯನ್ನೂ ಕರಿಯನನ್ನೂ ಬರಮಾಡೋ."

ಸರಿ ಸಿಪಾಯಿ ಕರಿಯ ಹಾಜರಾದರು. ಕರಿಯ ಕಳ್ಳತನದ ತಪ್ಪಿನಿಂದ ಥರಥರಗುಟ್ಟುತ್ತಿದ್ದ. ಎಚ್ಚರಿಕೆಯ ಉಸ್ತುವಾರಿಕೆಗಾಗಿ ಶಹಭಾಸ್‌ಗಿರಿಯನ್ನು ನಿರೀಕ್ಷಿಸುತ್ತ ಸಿಪಾಯಿ ನಿಂತ.

"ಏನೋ ಕರಿಯ! ಎಷ್ಟು ಸೇರು ಹುರುಳೀನೋ ತೆಕ್ಕೊಂಡುಹೋಗಿ ಕೊಟ್ಟುಬಿಟ್ಟು ಬಾ ಅಂತ ನಾ ಯೇಳಿದ್ದು? ಐದು ಸೇರು ತೊಗೊಂಡುಹೋಗಿ ಕೊಡು ಅಂತಂದರೇ ಎಳ್ಡು ಸೇರು ತೆಗೆದುಕೊಂಡು ಹೋಗ್ತಿದ್ದೆಯೆಂತಲ್ಲೋ ಮುಠ್ಠಾಳ! ಒಳಗೆ ಹೋಗಿ ಇನ್ಮೂರು ಸೇರು ಉರಳಿ ತೆಕ್ಕೊಂಡು ಹೋಗಿ ಕೊಟ್ಟುಬಿಟ್ಟು ಬಾ."

ಚೆಲುವಯ್ಯನವರ ಮಾತನ್ನು ಕೇಳಿ ಸಿಪಾಯಿ ಕಣ್ಣುಕಣ್ಣು ಬಿಟ್ಟ! ಕರಿಯ ಹೋಗುವಾಗ ಚೆಲುವಯ್ಯ ಅವನನ್ನು ಪ್ರತ್ಯೇಕವಾಗಿ ಕರೆದು ಅಲ್ವೋ ಬೆಪ್ಪುತಕ್ಕಡಿ! ಎಳ್ಡು ಸೇರು ಉರಳಿ ಯಾವ ಮೂಲೆಗೋ? ನನ್ನ ಕೇಳಿದ್ದರೆ ನಾನು ಐದಲ್ಲ ಹತ್ತು ಸೇರನ್ನ ಕೊಡಿಸುತ್ತಿರಲಿಲ್ಲವೇನೋ? ಹೋಗು, ಇನ್ನು ಮೇಲೆ ಯಿಂಗೆಲ್ಲ ಕದಿಗಿದಿಬೇಡ" ಎಂದರು. ತಗ್ಗಿಸಿದ್ದ ಮುಖವನ್ನು ಮೇಲೆತ್ತಲಿಲ್ಲ ಕರಿಯ.

೧೯೦೫ರಲ್ಲಿ ಪ್ಲೇಗು ಉಪದ್ರವ ಬಂತು. ಆಗಲೆ ಊರ ಹೊರಗಡೆ ಆಲನಹಳ್ಳಿಯಲ್ಲಿ ಗುಡಾರಗಳನ್ನು ಹಾಕಿ ನಾವು ಕೆಲವರು ಬಿಡಾರ ಮಾಡಿಕೊಂಡಿದ್ದೆವು. ಆಲನಹಳ್ಳಿ ಬಂಗಲೆಯಲ್ಲಿ ಸಾಧಾರಣವಾಗಿ ಎಲ್ಲ ಅರಸುಗಳೂ ಬಿಡಾರ ಮಾಡಿದ್ದರು. ಬಂಗಲೆಯ ಮುಂದಿನ ಛತ್ರದಲ್ಲಿ ಚೆಲುವಯ್ಯ ಇಳಿದುಕೊಂಡಿದ್ದರು. ಪ್ರತಿ ದಿನ ಚೆಲುವಯ್ಯ ಆಲನಹಳ್ಳಿಯಿಂದ ಕರುಹಟ್ಟಿಗೆ ಬಂದು ಹೋಗಬೇಕಾಗಿತ್ತು. ಒಂದೆರಡು ಸಂದರ್ಭಗಳಲ್ಲಿ ಆಲನಹಳ್ಳಿಗೆ ಚೆಲುವಯ್ಯನವರ ಪೆಟ್ಟಿಗೆಗಾಡಿಯಲ್ಲಿ ಹೋಗಿ ಬರಬೇಕಾಗಿ ಬಂತು. ಆ ಪೆಟ್ಟಿಗೆ ಗಾಡಿಯ ಸವಾರಿಯ ನೆನಪು ನನ್ನ ಮನಸ್ಸಿನಲ್ಲಿ ಅಳಿಯದೆ ಉಳಿದಿರುವುದಕ್ಕೆ ಒಂದು ಕಾರಣವಿದೆ. ಎತ್ತುಗಳು ಸ್ವಲ್ಪ ನಿಧಾನವಾಗಿ ಹೋಗುತ್ತಿದ್ದರೆ 'ಲೋ ಮೊಗ! ಅದ್ದರಿಸೋ ಅದ್ದರಿಸೋ! ಮುದ್ದು ಮುಖ ನೋಡ್ತಾ ಕುಂತರೆ ದಣೀ ಮನೆ ಕೆಲ್ಸಾ ಮಾಡಾತೇನೋ! ಅದ್ದರಿಸು ಅದ್ದರಿಸು' ಅನ್ನುತ್ತಿದ್ದರು. ಯಜಮಾನರು ಹೇಳಿದರಲ್ಲ ಎಂದು ಗಾಡಿಯವನು ಎತ್ತುಗಳ ಮೇಲೇನಾದರೂ ಕೈ ಹಾಕಿದನೋ 'ಲೋ! ಲೋ ಗೂಬೆ! ಯಾಕೋ ಹೊಡೀತೀಯಾ? ಬಸವೇಶ್ವರ ಅಲ್ವೇನೋ? ನಮ್ಮಂಗೆ ಪರಮಾತ್ಮ ಅಲ್ವೇನೋ? ತಳಾರದಲ್ಲಿ ಹೋಗಲಿ ಬಿಡೋ ಏನು ಅವಸರ? ಎನ್ನುತ್ತಿದ್ದರು ಚೆಲುವಯ್ಯ. ಆಲನಹಳ್ಳಿಗೆ ಹೋಗಿ ತಲುಪುವಷ್ಟರಲ್ಲಿ ಈ 'ಅದ್ದರಿಸೋ' 'ತಳಾರದಲ್ಲಿ ಹೋಗಲಿ ಬಿಡು' ಅನ್ನುವುದು ಕಡೆಯ ಪಕ್ಷ ಒಂದು ಇನ್ನೂರು ಸಾರಿಯಾದರೂ ಆಗಿರುತ್ತಿತ್ತು!

'ಚೆಲುವಯ್ಯ ಹಾಲಿನ ಹಂಚಿಕೆಯನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ,

ಸಿಕ್ಕಿದವರಿಗೆ ಸಿಕ್ಕಿದಷ್ಟು ಹಾಲನ್ನು ಕೊಡುತ್ತಾರೆ' ಎಂದು ಕೆಲವರು ಅರಮನೆಗೆ ದೂರುಮಾಡಿದ್ದರು. ನಿಜಸ್ಥಿತಿಯನ್ನು ವಿಚಾರಿಸಲು ರೀಜೆಂಟರು ಕರುಹಟ್ಟಿಗೆ ದಯಮಾಡಿಸಿದರು. ಚೆಲುವಯ್ಯನವರನ್ನ ನೇರವಾಗಿ ಕೇಳುವ ಧೈರ್ಯ ರೀಜಂಟರಿಗೂ ಇಲ್ಲ. ಬಳಸುಬಳಸಾಗಿ ವಿಷಯವನ್ನು ಪ್ರಸ್ತಾಪಿಸಿದರು. 'ತಮ್ಮ ಚಿತ್ತದ ಅಭಿಪ್ರಾಯವಾಯಿತು. ಒಂದು ತೊಟ್ಟು ಹಾಲನ್ನೂ ನಮ್ಮ ಮನೆಗೆ ನಾನು ತೆಗೆದುಕೊಂಡು ಹೋಗುತ್ತಿಲ್ಲ. ಯಾರು ಬಂದು ಕೇಳಿದರೂ ಇಲ್ಲ ಎನ್ನುವುದಿಲ್ಲ, ಕಾರಣ ಇಷ್ಟೆ. ಅರಮನೆಗೆ ಬಂದವರು ಬರಿಯ ಕೈಯಲ್ಲಿ ಹೋಗುವುದು ಗೌರವವಲ್ಲ. ಅಲ್ಲದೆ ನಾವು ಏನು ಮಾಡಿದರೂ ತಮ್ಮಗಳ ಶ್ರೇಯಸ್ಸಿಗೆ ವಿನಾ ಬೇರೆ ಅಲ್ಲ' ಎಂದರು ಚೆಲುವಯ್ಯ. ಮರುಮಾತಾಡಲಿಲ್ಲ ರೀಜೆಂಟರು. 'ಸ್ವಾಮಿನಿಷ್ಠರು ನೀವು! ನಿಮಗೆ ಯಾವುದು ನ್ಯಾಯವೆಂದು ತೋರುತ್ತದೋ ಹಾಗೆ ಮಾಡಬಹುದು' ಎಂದು ಹೇಳಿ ಹಿಂದಿರುಗಿದರು.

ಇಂಥ ಸ್ವಾಮಿನಿಷ್ಠರು ಸತ್ಯಸಂಧರು ನಿಃಸ್ಪೃಹರು ದೈವಭಕ್ತರು ಇದ್ದುದರಿಂದಲೇ ಏನೋ ಕಾಲಕಾಲಕ್ಕೆ ಮಳೆಬೆಳೆಯಾಗಿ ರಾಜ್ಯ ಸುಭಿಕ್ಷವಾಗಿತ್ತು. ಕೇವಲ ಮೂರು ನಾಲ್ಕು ರೂಪಾಯಿಗಳ ಖರ್ಚಿನಲ್ಲಿ ಒಂದೊಂದು ಸಂಸಾರವನ್ನು ನಿರ್ವಹಿಸಲು ಬರುತ್ತಿತ್ತು. ಒಂದು ರೂಪಾಯಿಗೆ ಹದಿನಾರು ಸೇರು ಅಕ್ಕಿ, ರೂಪಾಯಿಗೆ ಏಳೂವರೆ ಸೇರು ಬೆಣ್ಣೆ, ಎರಡು ರೂಪಾಯಿಗೆ ಒಂದು ಪಲ್ಲ ರಾಗಿ, ಒಂದು ಹಣಕ್ಕೆ ಎಂದರೆ ಈಚಿನ ನಾಲ್ಕಾಣೆ ಎಂಟು ಕಾಸಿಗೆ ಏಳೂವರೆ ಸೇರು ಒಳ್ಳೆಣ್ಣೆ ಮತ್ತು ಏಳೂವರೆ ಸೇರು ಕೈಯೆಣ್ಣೆ, ಒಂದು ದುಡ್ಡಿಗೆ ಒಂದು ಸೇರು ಥ್ಯೆಂಡಿ ಮೊಸರು ಬರುತ್ತಿದ್ದ ಕಾಲ ಅದು. ಹಾಲು ಮೊಸರಿನಲ್ಲಿ ಕೈ ತೊಳೆಯಬಹುದಾಗಿತ್ತು.

೪. ಆಗಿನ ನಾಟಕ ಕಂಪನಿಗಳು

ಅರಮನೆ ಕಂಪನಿಯವರು ಹರಿಶ್ಚಂದ್ರನಾಟಕವನ್ನು ಆಡುತ್ತಿದ್ದಾರೆ. ಕೊನೆಯ ಪ್ರವೇಶ. ಒಡೆಯನ ಆಜ್ಞಾನುಸಾರ ತನ್ನ ಹೆಂಡತಿ ಚಂದ್ರಮತಿಯ ತಲೆಯನ್ನು ಕಡಿದುಹಾಕಲು ಹರಿಶ್ಚಂದ್ರ ಸಿದ್ಧನಾಗಿ ನಿಂತಿದ್ದಾನೆ. ಝಳಪಿಸುವ ಖಡ್ಗ ಕೈಯಲ್ಲಿ ಸಿದ್ಧವಾಗಿದೆ. ಇನ್ನೇನು ಹರಿಶ್ಚಂದ್ರ ಖಡ್ಗವನ್ನು ಎತ್ತಿ ಚಂದ್ರಮತಿಯ ಕೊರಳಮೇಲೆ ಬಿಡಬೇಕು ಅನ್ನುವಷ್ಟರಲ್ಲಿ ಧರ್ಮಪುರುಷ ಪ್ರತ್ಯಕ್ಷನಾಗಿ, 'ಹರಿಶ್ಚಂದ್ರ! ನಿನ್ನ ಸತ್ಯಸಂಧತೆಗೆ ಸುಪ್ರೀತನಾಗಿದ್ದೇನೆ. ಅದೋ ನೋಡು! ನಿನ್ನ ರಾಜ್ಯ ಪತ್ನೀಪುತ್ರರನ್ನು ಮತ್ತೆ ನಿನಗೆ ಕರುಣಿ ಸಿದ್ದೇನೆ. ನಿನ್ನ ಕೀರ್ತಿ ಅಮರವಾಗಿ ಬೆಳಗಲಿ' ಎಂದು ಹೇಳಿ ಅಂತರ್ಧಾನ ವಾಗಬೇಕು. ಆ ಸಮಯಕ್ಕೆ ಸರಿಯಾಗಿ ಶ್ಮಶಾನದ ದೃಶ್ಯ ಬದಲಾಗಿ ದರ್ಬಾರು ದೃಶ್ಯ ಬರಬೇಕಾಗಿದೆ. ಎಂಟು ಜನ ಆಳುಗಳು ಪರದೆಯ ಹಗ್ಗಗಳನ್ನ ಸ್ಟೈಡ್‌ವಿಂಗ್ಸ್‌ಗಳನ್ನ ಹಿಡಿದು, ದೃಶ್ಯದ ಬದಲಾವಣೆಗೆ ಸಿದ್ಧರಾಗಿದ್ದಾರೆ. ರಂಗಭೂಮಿಯ ಮೇಲೆ ಆಕಾಶವೇ ತಲೆಕೆಳಕಾಗಿ ಬಿದ್ದರೂ ಅವರ ಗಮನ ಅತ್ತ ಹೋಗುವಂತಿರಲಿಲ್ಲ. ಅವರ ಮನಸ್ಸೆಲ್ಲ ದೃಶ್ಯದ ಬದಲಾವಣೆಗೆ ಗೊತ್ತು ಮಾಡಿದ್ದ ಗಂಟೆಯ ಶಬ್ದದ ಕಡೆಗಿತ್ತು. ಈ ಸನ್ನಿವೇಶದಲ್ಲಿ ಏನೋ ಕಾರಣದಿಂದ ದರ್ಬಾರು ಭಕ್ಷಿಯವರು ರಂಗಭೂಮಿಯ ಮೇಲಕ್ಕೆ ಬಂದರು. ಸ್ಟೈಡ್‌ವಿಂಗ್ಸ್ ನಲ್ಲಿ ಕುರ್ಚಿಯ ಮೇಲಿದ್ದ ಕಾಲಿಂಗ್ ಬೆಲ್ಲನ್ನು 'ಇದನ್ನೇಕೆ ಇಲ್ಲಿಟ್ಟಿದ್ದಾರೆ?' ಎಂದು ಯೋಚಿಸುತ್ತ ಮೇಲಕ್ಕೆತ್ತಿದರು. 'ಢಣ್' ಎಂದು ಗಂಟೆಯ ಶಬ್ದ ವಾಯಿತು! ಆಳುಗಳು ಧರ್ಮಪುರುಷನಿಗೂ ಕಾಯಲಿಲ್ಲ, ವಿಶ್ವಾಮಿತ್ರನಿಗೂ ಕಾಯಲಿಲ್ಲ. ತಮ್ಮ ಕೆಲಸವನ್ನು ತಾವು ನೆರವೇರಿಸಿಯೇಬಿಟ್ಟರು! ಶ್ಮಶಾನ ಕ್ಷಣಾರ್ಧದಲ್ಲಿ ದರ್ಬಾರಾಯಿತು! ಗುಲ್ಲೋ ಗುಲ್ಲು ನಾಟಕ ಮಂದಿರದಲ್ಲೆಲ್ಲ. ಖಡ್ಗವನ್ನು ಎತ್ತಲೋ ಬೇಡವೋ ಎಂಬ ಗೊಂದಲದಲ್ಲಿ ಹರಿಶ್ಚಂದ್ರ ಸಿಕ್ಕಿ ಬಿದ್ದಿದ್ದ. ಹರಿಶ್ಚಂದ್ರ ಚಂದ್ರಮತಿ ಧರ್ಮಪುರುಷ ಇವರೆಲ್ಲರಿಗಿಂತ ದರ್ಬಾರು ಭಕ್ಷಿಯವರು ಕಕ್ಕಾವಿಕ್ಕಿಯಾದರು. ಏನುಮಾಡಲು ತೋಚದೆ ಪಿಟೀಲು ನುಡಿಸುತ್ತಿದ್ದ ದೊಡ್ಡ ವೆಂಕಟರಮಣಪ್ಪನವರ ಹತ್ತಿರಕ್ಕೆ ಸರಸರ ಹೋಗಿ ಅವರ ಪಿಟೀಲನ್ನು ಕಸಿದುಕೊಂಡು ಅವರ ತಲೆಯ ಮೇಲೆ ರಪರಪನೆ ಅಪ್ಪಳಿಸಿ ದರು. ಏನೊಂದೂ ಅರ್ಥವಾಗದೆ ವೆಂಕಟರಮಣಪ್ಪ ಬುದ್ಧಿ ಬುದ್ಧಿ ಎಂದು ಕಣ್ಣುಗುಡ್ಡೆ ಮೇಲೆಕೆಳಗೆ ಮಾಡುತ್ತ ಬೊಬ್ಬೆಯಿಟ್ಟರು. ಹೃದಯವಿದ್ರಾವಕ

ನಾಟಕವನ್ನು ನೋಡಿ ಅತ್ತು ನೀರಾಗಿ ಬಳಲಿದ್ದ ಪ್ರೇಕ್ಷಕವೃಂದ ನಗುವಿನ ಅಲೆಯಮೇಲೆ ತೇಲಾಡಿತು !

ಮೈಸೂರಿನ ಪುರಭವನದಲ್ಲಿ ಪ್ರಮೀಳಾರ್ಜುನೀಯ ನಾಟಕವನ್ನು ಗೌಡರ ಕಂಪನಿಯವರು ಆಡುತ್ತಿದ್ದರು. ಒಂದು ಸನ್ನಿವೇಶದಲ್ಲಿ ಕುಂಬಾರ, ಅಂಬಿಗ, ನಾಯಿಂದ, ಅಗಸ ಮುಂತಾಗಿ ಎಲ್ಲ ಪುರಜನರೂ ಪ್ರವೇಶಿಸುತ್ತಾರೆ. ಅಮಲ್ದಾರ್ ಹನುಮಂತರಾಯರ ಮಗ ಪೋಲೀಸ್ ರಂಗ ಎಂಬಾತ ನಾಯಿಂದನ ವೇಷ ಹಾಕಿದ್ದರು. ಗ್ಯಾಲರಿಯಲ್ಲಿ ಕುಳಿತಿದ್ದ ಪ್ರೇಕ್ಷಕರಲ್ಲಿ ಒಬ್ಬ 'ಲೋ ಹಜಾಮರ ರಂಗ !' ಎಂದು ಗಟ್ಟಿಯಾಗಿ ಕೂಗಿದ. 'ನಿಮ್ಮಪ್ಪ!' ಎಂದು ಕೂಗಿದ ರಂಗ, ಅದಕ್ಕೆರಡರಷ್ಟು ಗಟ್ಟಿಯಾಗಿ ! ರಂಗನ ಪಕ್ಕದಲ್ಲಿ ಜೆಸ್ತರವನ ವೇಷದಲ್ಲಿ ನಿಂತಿದ್ದ ಶ್ರೀನಿವಾಸರಾಯರು 'ಲೋ ! ರಂಗ ! ಅವರೇನುಬೇಕಾದರೂ ಅಂದುಕೊಳ್ಳಲಿ. ನಾವು ಸುಮ್ಮನಿರಬೇಕು' ಎಂದು ಬುದ್ಧಿವಾದ ಹೇಳಿದರು. 'ಸುಮ್ಮನೆ ಬಿಡ್ತಾರೆ ಸುಮ್ಮನೆ ! ನಾಟಕ ಮುಗೀಲಿ ನೋಡಿಕೋಶೀನಿ' ಎಂದು ರಂಗ ಇದ್ದ ಗಂಟಲನ್ನೆಲ್ಲ ಬಿಟ್ಟು ಗುಡುಗಾಡಿದ ! ನಗೆಮಿಂಚಿನಲ್ಲಿ ಸಭೆ ಬೆಳಗಿತು !

ಅರಮನೆ ಕಂಪನಿ ಬೆಂಗಳೂರಿಗೆ ಬಂದಿತ್ತು. ನಾಟಕದಲ್ಲಿ ಪಾತ್ರವಹಿಸಬೇಕಾಗಿದ್ದ ಬಿ. ಕೆ. ನಂಜುಂಡಯ್ಯನವರು ಅದೇತಾನೆ ಬೆಂಗಳೂರಿಗೆ ಬಂದು ನೇರವಾಗಿ ನಾಟಕಶಾಲೆಗೆ ಬಂದಿದ್ದರು. ಆಗತಾನೆ ನಾಟಕ ಮೊದಲಾಗಿತ್ತು. ನಂಜುಂಡರಾಯರ ಪಾತ್ರ ಬರುವುದಕ್ಕೆ ಇನ್ನೂ ಎಂಟು ಹತ್ತು ಪ್ರವೇಶಗಳಿದ್ದವು. ಅಷ್ಟರಲ್ಲಿ ಊಟ ಮುಗಿಸಿ ಬರಬೇಕೆಂದು ನಂಜುಂಡರಾಯರ ಯೋಚನೆ. ಆದರೆ ಕಂಪನಿಯಲ್ಲಿ ಅಡುಗೆಮಾಡಿಕೊಂಡಿದ್ದ ಶ್ಯಾಮರಾಯರು ಅಡುಗೆಮನೆಗೆ ಬಲವಾದ ಬೀಗಹಾಕಿ ಇಂದ್ರಸಭೆಯಲ್ಲಿ ಯಮಧರ್ಮರಾಜನಾಗಿ ಮೆರೆಯುತ್ತಿದ್ದಾರೆ. 'ಯಮಧರ್ಮರಾಜ ! ನಿನ್ನ ಲೋಕವು ಹೇಗಿರುವುದು ?' ಎಂದು ದೇವೇಂದ್ರನು ಕೇಳುವುದಕ್ಕೂ 'ಲೋ ! ಶ್ಯಾಮರಾಯ ! ಎಲ್ಲೋ ಅಡುಗೆಮನೆ ಬೀಗದ ಕೈ ?' ಎಂದು ನಂಜುಂಡಯ್ಯ ಸೈಡ್‌ವಿಂಗ್ಸ್‌ನಲ್ಲಿ ನಿಂತು ಕೇಳುವುದಕ್ಕೂ ಸರಿಹೋಯಿತು. 'ದೇವೇಂದ್ರ ! ನನ್ನ ಲೋಕವೆಲ್ಲವೂ ಹಾಳಾಗಿರುವುದು ! ಬೀಗದಕ್ಕೈ ಬಡುಮೇಲಿರುವುದು !' ಎಂದು ಒಂದೇ ಉಸಿರಿನಲ್ಲಿ ಒಂದೇ ಶೀವಿಯಿಂದ ಉಸುರಿದ ಯಮಧರ್ಮರಾಜ ! ಘೊಳ್ಳೆಂದಿತು ಸಭೆ !!

ಅರವತ್ತು ಎಪ್ಪತ್ತು ವರ್ಷಗಳ ನನ್ನ ಅನುಭವದಲ್ಲಿ ಇಂಥ ರಸನಿಮಿಷಗಳು ನೂರಾರು. ನನ್ನಷ್ಟಕ್ಕೆ ನಾನೇ ಅವನ್ನು ಮೆಲುಕುಹಾಕುತ್ತ ಆನಂದಿಸುವಾಗ ಅಂದಿನ ರಂಗಭೂಮಿಯ ಹಲವಾರು ಚಿತ್ರಗಳು ನನ್ನಲ್ಲಿ ಮೂಡಿ ಮಾಯ ವಾಗುತ್ತವೆ.

ನನಗೆ ಜ್ಞಾಪಕವಿರುವಂತೆ ಆಗಿನ ದಿವಸಗಳಲ್ಲಿ ನಾಟಕ ಕಂಪನಿಗಳೇ ವಿರಳ. ಯಕ್ಷಗಾನ ಬಯಲಾಟಗಳೇ ಹೆಚ್ಚು. ದಿವಾನ್ ರಂಗಾಚಾರ್ಲು ದಿವಸದಲ್ಲಿ ಸಾಂಗ್ಲಿ ನಾಟಕ ಕಂಪನಿಯೊಂದು ಮೈಸೂರಿಗೆ ಬಂದು ಮಹಾರಾಜರ ಸಂಸ್ಕೃತ ಪಾಠಶಾಲೆಯಲ್ಲಿ ಕೆಲವು ಮರಾಠಿ ನಾಟಕಗಳನ್ನು ಆಡಿದರು. 'ಅಪನಜೀ ಪದುಮಾವತಿ ಪರಿಣಯ ಬೇಲೆ' ಎಂಬ ಪದ್ಮಾವತಿ ಪರಿಣಯ ನಾಟಕದ ಹಾಡು ಈಗಲೂ ನನಗೆ ಜ್ಞಾಪಕವಿದೆ. ಸಾಂಗ್ಲಿ ಕಂಪನಿಯ ನಾಟಕಗಳೂ ಸಹ ಹೆಚ್ಚು ಕಡಮೆ ಬಯಲು ನಾಟಕಗಳಂತೆಯೇ ಇದ್ದುವು. ರಂಗಭೂಮಿಯ ಎರಡು ಪಕ್ಕಗಳಲ್ಲಿ ಇಬ್ಬರು ನಿಂತು ತೆರೆಶೀಲೆಯನ್ನು (ಅಂತರ ಪಟ) ಹಿಡಿದಿರು ತ್ತಿದ್ದರು. ನಟರು ರಂಗಭೂಮಿಯನ್ನು ಪ್ರವೇಶಿಸುವಾಗ ತೆರೆಶೀಲೆಯನ್ನು ಸರಿಸುತ್ತಿದ್ದರು. ಸಾಂಗ್ಲಿ ಕಂಪನಿಯವರು ಆಡಿದ ನಾಟಕಗಳನ್ನು ನೋಡಿ ಮೈಸೂರಿನಲ್ಲೂ ನಾಟಕದ ಕಂಪನಿಗಳನ್ನು ಕಟ್ಟಬೇಕೆಂಬ ಆಸೆ ಹಲವರಲ್ಲಿ ಮೂಡಿತು. ಹಲಕೆಲವು ನಾಟಕ ಕಂಪನಿಗಳು ನಗರದಲ್ಲೂ ಗ್ರಾಮಾಂತರ ಪ್ರದೇಶಗಳಲ್ಲೂ ಜನ್ಮ ತಾಳಿದವು. ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕಸಭಾ ಎಂಬ ಹೆಸರಿನಲ್ಲಿ ಅರಮನೆಯ ಕಂಪನಿಯೊಂದು ರಚಿತವಾಯಿತು. ಇದರ ಹಿಂದೆಯೇ ಎ. ವಿ. ವರದಾಚಾರ್ಯರ ರತ್ನಾವಳಿ ಥಿಯೆಟ್ರಿಕಲ್ ಕಂಪನಿ, ಶ್ರೀಕಂಠೇಶ್ವರ ವಿಲಾಸ ಕಂಪನಿ, ವೆಂಕಟರಾಮು ಕಂಪನಿ, ಗೌರೀ ನರಸಿಂಹಯ್ಯನವರ ಕಂಪನಿ, ಮಂಡ್ಯದ ರಂಗಾಚಾರಿಯವರ ಕಂಪನಿ, ಕೂ. ರಂಗಾಚಾರಿ ಕಂಪನಿ, ಅಕ್ಕಿ ಅಂಗಡಿ ಗೋವಿಂದಪ್ಪನವರ ಕಂಪನಿ ಮುಂತಾದ ಖಾಸಗಿ ಸಂಸ್ಥೆಗಳು ನಗರದಲ್ಲಿ ರೂಪಗೊಂಡವು. ಗ್ರಾಮಾಂತರ ಪ್ರದೇಶ ಗಳಲ್ಲೂ ಸಹ ಯಳಂದೂರು ಕಂಪನಿ, ಗುಬ್ಬಿ ಚಂದಣ್ಣನ ಕಂಪನಿ ಮೊದಲಾದ ನಾಟಕ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದುವು. ಬೆಂಗಳೂರಿನಲ್ಲಿ ಇದೇ ಸಮಯ ದಲ್ಲಿ ಸಿಟಿ ಆಪೆರಾ ಟ್ರೂಪ್, ಸಂಗೀತಸಾಗರ ಚಂದ್ರೋದಯನಾಟಕ ಸಭಾ (ಎಲಹಂಕ ಗೇಟ್ ಕಂಪನಿ) ಸಂಸ್ಥೆಗಳು ಸ್ಥಾಪಿತವಾದವು. ಇಷ್ಟು ಸಂಸ್ಥೆ ಗಳು ಜನ್ಮತಾಳಿದರೂ ಸ್ಥಿರವಾಗಿ ನಿಂತ ಕಂಪನಿಗಳೆಂದರೆ ಮೂರೇ ಮೂರು: ಅರಮನೆ ಕಂಪನಿ, ವರದಾಚಾರ್ಯರ ಕಂಪನಿ ಮತ್ತು ಗುಬ್ಬಿ ಕಂಪನಿ.

ಅರಮನೆಯ ಬೇರೆಬೇರೆ ಆಡಳಿತ ಶಾಖೆಗಳಲ್ಲಿದ್ದ ಸಿಬ್ಬಂದಿಯಲ್ಲಿ ಒಳ್ಳೆಯ

ರೂಪು ಶಾರೀರ ನಟನಸಾಮರ್ಥ್ಯ ಇದ್ದ ಜನರನ್ನು ಆರಿಸಿ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭೆಯನ್ನು ನಿರ್ಮಿಸಲಾಯಿತು. ಇದರ ಆಡಳಿತವನ್ನು ನೋಡಿಕೊಳ್ಳಲು ಒಂದು ನಾಟಕದ ಇಲಾಖೆಯೇ ರಚಿತವಾಯಿತು. ಅರಮನೆಯಲ್ಲಿ ಆಡುವ ನಾಟಕಗಳಲ್ಲದೆ ವರ್ಷಕ್ಕೆ ಮೂರು ನಾಟಕಗಳನ್ನು ಸಾರ್ವಜನಿಕರಿಗಾಗಿ ಆಡುತ್ತಿದ್ದರು. ಆ ನಾಟಕಗಳಿಂದ ಉತ್ಪತ್ತಿಯಾದ ಹಣದಲ್ಲಿ ನಟರಿಗೆ ನಿಯಮಿತ ಪಾಲು ಬರುತ್ತಿತ್ತು. ಆಗ್ಗೆ ಅರಮನೆ ಕಂಪನಿಯಲ್ಲಿದ್ದ ನಟರೆಂದರೆ ಡಿ. ಸುಬ್ಬಣ್ಣ, ಗಿರಿಭಟ್ಟರ ತಮ್ಮಯ್ಯ, ಲಕ್ಷ್ಮೀಪತಿ ಶಾಸ್ತ್ರಿಗಳು, ದೇವರಾಜ್, ಸೂತ್ರಧಾರ ಸುಬ್ಬರಾಯರು, ಶಿವರಾಯರು, ಶಾಮಣ್ಣ, ವೀರರಾಘವಯ್ಯಂಗಾರ್ಯರು, ಸರ್ಟನ್ ರಾಮರಾವ್, ವ್ಯಾಸರಾವ್, ಚಿಕ್ಕ ಶೇಷಗಿರಿರಾಯರು, ಬಿಡಾರಂ ಕೃಷ್ಣಪ್ಪ, ದೊಡ್ಡರಾಮು, ಚಿಕ್ಕರಾಮು, ಸೂರಪಂಡಿತರು, ಪುಟ್ಟೂಪಂಡಿತರು, ಜುಂಜೋಟಿ ಶೇಷ, ಶಿವಪ್ಪಾಜಿ, ಕೃಷ್ಣಪ್ಪಾಜಿ, ಮಲ್ಲಪ್ಪ, ಮಹಾಲಿಂಗಪ್ಪ, ಡೀರೇ ಸುಬ್ಬರಾವ್, ಮರಾಠ ಬ್ಯಾಂಕ್ ಏಜೆಂಟ್ ಸುಬ್ಬರಾವ್, ಪ್ಯಾರಿ ಕಿಟ್ಟ (ಜಿ. ವಿ. ಕೃಷ್ಣಮೂರ್ತಿ), ವೆಂಕಟರಾಮಯ್ಯ, ಪುಟ್ಟಾರಿಶಾಸ್ತ್ರಿಗಳು ಮತ್ತು ಕೆಲವು ಸಣ್ಣ ಪುಟ್ಟ ಹುಡುಗರು. ಕಾಲಕ್ರಮದಲ್ಲಿ ರಾಚಪ್ಪ, ನರಸೀಪುರದ ಸುಬ್ಬಣ್ಣ, ಮುಡುಕುತೊರೆ ಸುಬ್ಬಣ್ಣ ಇವರು ಅರಮನೆ ಕಂಪನಿಯನ್ನು ಸೇರಿದರು.

ಅರಮನೆ ಕಂಪನಿಯವರು ಆಡುತ್ತಿದ್ದ ನಾಟಕಗಳೆಂದರೆ ಶಾಕುಂತಲ, ಹರಿಶ್ಚಂದ್ರ, ಚಂದ್ರಹಾಸ, ರುಕ್ಮಾಂಗದ ರತ್ನಾವಳಿ, ಮೃಚ್ಛಕಟಿಕ, ಮಂದಾರವಲ್ಲಿ ಪರಿಣಯ, ಶೂರಸೇನ ಚರಿತ್ರೆ (*Othello* ನಾಟಕದ ರೂಪಾಂತರ), ಪ್ರಜ್ಞಾವತಿ ಪರಿಣಯ (*Merchant of Venice* ನಾಟಕದ ರೂಪಾಂತರ), ಮತ್ತು ರಾಜಸಿಂಹ (ಸಿಂಬಲೈನ್ ನಾಟಕದ ರೂಪಾಂತರ). ಒಳ್ಳೆಯ ರೂಪ ಮತ್ತು ಶಾರೀರ ಲಕ್ಷಣಗಳುಳ್ಳ ಕಲಾವಿದರನ್ನೇ ಆರಿಸಿ ಕಂಪನಿಯನ್ನು ಕಟ್ಟಿದ್ದ ಕಾರಣ ಯಾವ ನಟನನ್ನೂ ತೆಗೆದುಹಾಕುವಂತಿರಲಿಲ್ಲ. ಯಾವ ಪಾತ್ರವನ್ನಾದರೂ ಮಾಡುವ ಸಾಮರ್ಥ್ಯ ಎಲ್ಲರಿಗೂ ಇತ್ತು. ಆದಾಗ್ಯೂ ಒಬ್ಬೊಬ್ಬರಿಗೆ ಒಂದೊಂದು ಪಾತ್ರದಲ್ಲಿ ವಿಶೇಷ ಹೆಸರು. ನಾಯಕನ ಪಾತ್ರ ಸುಬ್ಬಣ್ಣನವರಿಗೆ ಮೀಸಲು, ರಾಜನ ಪಾತ್ರದಲ್ಲಿ ಸುಬ್ಬಣ್ಣ ರಂಗಸ್ಥಲಕ್ಕೆ ಬಂದರೆ ವೇಷಹಾಕಿಕೊಂಡಿರುವ ದೊರೆ ಎಂದು ಪ್ರಮಾಣಮಾಡಿ ಹೇಳಿದರೂ ಯಾರೂ ನಂಬುವಂತಿರಲಿಲ್ಲ, ಅಷ್ಟು ಗಾಂಭೀರ್ಯ, ಠೀವಿ, ಸಹಜತೆ ಅವರ ಅಭಿನಯದಲ್ಲಿ. ವೀರರಾಘವಯ್ಯಂಗಾರ್ಯರು ಮತ್ತು ಶ್ಯಾಮಣ್ಣ ಹೆಣ್ಣು ವೇಷ ಹಾಕಿಕೊಂಡು ಬಂದರೂ ಹಾಗೆಯೆ, ಗಂಡಸು ಹೆಂಗಸು ವೇಷಹಾಕಿ

ಕೊಂಡಿದ್ದಾರೆ ಎಂದು ಯಾರೂ ಹೇಳುವುದಕ್ಕಾಗುತ್ತಿರಲಿಲ್ಲ. ಹೆಂಗಸರು ಸಹ ಅಷ್ಟು ಸ್ವಾಭಾವಿಕವಾಗಿ ಅಭಿನಯ ಮಾಡಲಾರರು ಅನ್ನುವಷ್ಟು ಕಲಾಪೂರ್ಣವಾಗಿರುತ್ತಿತ್ತು ಅವರ ಪಾತ್ರ ನಿರ್ವಹಣೆ. ನಾಲ್ವಡಿ ಕೃಷ್ಣರಾಜ ಒಡೆಯರವರ ಪ್ರಾಧ್ಯಾಪಕರಾಗಿದ್ದ ಫ್ರೇಸರ್ ಅವರು ಒಮ್ಮೆ ಶೂರಸೇನ ಚರಿತ್ರೆ ನಾಟಕವನ್ನು ನೋಡಿ 'ಪ್ರಸಿದ್ಧ ಆಂಗ್ಲನಟ ಹೆನ್ರಿ ಇರ್ವಿಂಗ್ ಸಹ ಸುಬ್ಬಣ್ಣನವರ ಹಾಗೆ ದೇವದತ್ತನ (ಅಯಾಗೊ) ಪಾತ್ರವನ್ನು ಮಾಡಬಲ್ಲನೋ ಏನೋ ಎಂಬ ಸಂದೇಹ ಬರುತ್ತದೆ; ಮೋಹನೆಯ (ಡೆಸ್ಡಿಮೋನ) ಪಾತ್ರವನ್ನು ವೀರರಾಘವಾಚಾರ್ಯರು ಅಭಿನಯಿಸಿದಂತೆ ಅಭಿನಯಿಸುವ ಯಾವ ಆಂಗ್ಲ ನಟ ನಟಿಯರನ್ನೂ ನಾನು ಕಂಡಿಲ್ಲ. ಶೂರಸೇನನ ಪಾತ್ರದಲ್ಲಿ ಸರ್ಟನ್ ರಾಮರಾಯರನ್ನು ಮೀರಿಸುವ ನಟ ಬೇರೆ ಸಿಗಲಾರ' ಎಂದು ಇವರ ನಟನ ವೈಖರಿಯನ್ನು ಮುಕ್ತಕಂಠದಿಂದ ಹೊಗಳಿದರು. ಗಿರಿಭಟ್ಟರ ತಮ್ಮಯ್ಯ ನವರಿಗೆ ಯಾವ ಪಾತ್ರವಾದರೂ ಸರಿಯೆ. ಸೇವಕನಿಂದ ಹಿಡಿದು ರಾಜನವರೆಗೆ ಎಲ್ಲ ಪಾತ್ರಗಳನ್ನೂ ಆಯಾ ಪಾತ್ರಗಳಿಗೆ ಒಪ್ಪುವಂತೆ ಅಭಿನಯಿಸಿ ಅವರಂತೆ ಆ ಪಾತ್ರವನ್ನು ಮಾಡುವವರು ಬೇರೆ ಯಾರು ಇಲ್ಲ ಎನ್ನಿಸಿಕೊಳ್ಳುತ್ತಿದ್ದರು. ಇದರಂತೆಯೇ ಲಕ್ಷ್ಮೀಪತಿಶಾಸ್ತ್ರಿಗಳು ಸ್ತ್ರೀ ಪುರುಷ ಪಾತ್ರಗಳನ್ನು ಸರಿ ಸಮಾನವಾದ ದಕ್ಷತೆಯಿಂದ ನಿರ್ವಹಿಸುತ್ತಿದ್ದರು. ವಿದೂಷಕ ಪಾತ್ರದಲ್ಲಿ ಖ್ಯಾತಿವೆತ್ತವರು ದೇವರಾಜ್ ಮತ್ತು ಪುಟ್ಟಾರಿ ಶಾಸ್ತ್ರಿಗಳು. ದೇವರಾಜ್ ಅವರು ಹಿರಿಯರು. ಪುಟ್ಟಾರಿ ಶಾಸ್ತ್ರಿಗಳು ಕಿರಿಯರು. ಒಂದೇ ನಾಟಕದಲ್ಲಿ ದೇವರಾಜ್ ಅವರು ನಾಲ್ಕಾರು ಪಾತ್ರಗಳನ್ನು ವಹಿಸಿದ್ದ ಸಂದರ್ಭಗಳೂ ಇದ್ದವು. ಆದರೂ ಒಬ್ಬನೇ ಬೇರೆ ಬೇರೆ ಪಾತ್ರಗಳನ್ನು ಮಾಡುತ್ತಿದ್ದಾನೆ ಎಂಬ ಸುಳಿವು ಸಹ ಯಾರಿಗೂ ಗೊತ್ತಾಗುತ್ತಿರಲಿಲ್ಲ. ಶಿವರಾಯರಿಗೆ ಹಾಡುವುದಕ್ಕೆ ಬರುತ್ತಿರಲಿಲ್ಲ. ಆದರೆ ಗದ್ಯದ ಗಾಂಭೀರ್ಯ, ಬಿಗಿ, ಅಚ್ಚು ಕಟ್ಟನ್ನು ಅವರಲ್ಲಿ ಕಂಡಂತೆ ಬೇರೆಯವರಲ್ಲಿ ಕಾಣುವುದು ಕಷ್ಟಸಾಧ್ಯ ವಾಗಿತ್ತು. ಸಾಧಾರಣವಾಗಿ ಮಂತ್ರಿಯ ಪಾತ್ರ ಶಿವರಾಯರ ಪಾಲಿಗೇ ಬೀಳುತ್ತಿತ್ತು. ದುಷ್ಟಬುದ್ಧಿ ಮತ್ತು ಬೆಸ್ತರವನ ಪಾತ್ರದಲ್ಲಿ ಬಿಡಾರಂ ಕೃಷ್ಣಪ್ಪ ನವರು, ಶಕಾರನ ಪಾತ್ರದಲ್ಲಿ ಸೂತ್ರಧಾರ ಸುಬ್ಬರಾಯರು, ರೋಹಿತಾಶ್ವನಾಗಿ ಮರಾಠ ಬ್ಯಾಂಕ್ ಏಜೆಂಟ್ ಸುಬ್ಬರಾವ್, ಭೀಮನ ಪಾತ್ರದಲ್ಲಿ ಪುಟ್ಟೊ ಪಂಡಿತರು, ಮುಸ್ಲಿಮನ ಪಾತ್ರದಲ್ಲಿ ಚಿಕ್ಕ ಶೇಷಗಿರಿರಾಯರು; ವಿಶೇಷ ಖ್ಯಾತಿ ಯನ್ನು ಗಳಿಸಿದ್ದರು.

ನಾಟಕಗಳನ್ನು ಅಭ್ಯಾಸಮಾಡುವ ಸಮಯದಲ್ಲಿ ಸಂಸ್ಕೃತ ಪಂಡಿತರು,

ಇಂಗ್ಲಿಷ್ ಅಧ್ಯಾಪಕರು, ಕನ್ನಡ ಪಂಡಿತರು, ಸಂಗೀತ ವಿದ್ವಾಂಸರು ಹಾಜರಿರುತ್ತಿದ್ದರು. ಸಂಗೀತದಲ್ಲಾಗಲೀ ಸಾಹಿತ್ಯದಲ್ಲಾಗಲೀ ಯಾವ ನ್ಯೂನತೆಗಳೂ ಬಾರದಂತೆ ನೋಡಿಕೊಳ್ಳುತ್ತಿದ್ದರು. ಅಭ್ಯಾಸ ಸಮರ್ಪಕವಾಗಿದೆ ಎಂದೆನಿಸುವವರೆಗೂ ನಾಟಕವನ್ನು ಪ್ರದರ್ಶನಕ್ಕೆ ತರುತ್ತಿರಲಿಲ್ಲ. ಇಷ್ಟಾದಮೇಲೆ ಅರಮನೆಯ ಚಂದ್ರಶಾಲೆ ತೊಟ್ಟಿಯಲ್ಲಿ ಮಹಾರಾಜರ ಸಮ್ಮುಖದಲ್ಲಿ ನಾಟಕದ ಪ್ರದರ್ಶನ. ಮಹಾರಾಜರಿಗೆ ನಾಟಕ ತೃಪ್ತಿಕರವಾಗಿ ಕಂಡುಬಂದರೆ ಮಾತ್ರ ಹೊರಗಡೆ ಅಭಿನಯಿಸಲು ಅನುಮತಿಯನ್ನು ದಯಪಾಲಿಸುತ್ತಿದ್ದರು. ಹೀಗಾಗಿ ನಾಟಕ ಸಾರ್ವಜನಿಕ ರಂಗಸ್ಥಳಕ್ಕೆ ಬರುವ ವೇಳೆಗೆ ಪರಿಪೂರ್ಣತೆಯನ್ನು ಪಡೆದಿರುತ್ತಿತ್ತು. ಸರ್ವಾಂಗಸುಂದರವಾಗಿರುತ್ತಿತ್ತು.

ಬೆಂಗಳೂರಿನಲ್ಲಿ ಕಲಾಭಿಜ್ಞರಾದ ಕೆಲವು ಉನ್ನತಾಧಿಕಾರಿಗಳು ಸೇರಿ ಬೆಂಗಳೂರು ಯೂನಿಯನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಎ. ವಿ. ವರದಾಚಾರ್ಯರು ನಕಲಿ ಕೃಷ್ಣಮೂರ್ತಿರಾಯರೇ ಮೊದಲಾದ ಉತ್ತಮ ನಟರು ಈ ಸಂಸ್ಥೆಯ ಸದಸ್ಯರಾಗಿದ್ದರು. ಆಗ್ಗೆ ವರದಾಚಾರ್ಯರು ರೆಸಿಡೆಂಟರ ಕಛೇರಿಯಲ್ಲಿ ಕೆಲಸದಲ್ಲಿದ್ದರು. ಹಲಕೆಲವು ನಾಟಕಗಳನ್ನು ಆಡುವುದರೊಳಗಾಗಿ ವರದಾಚಾರ್ಯರ ಮತ್ತು ಕೃಷ್ಣಮೂರ್ತಿರಾಯರ ಕಲಾಪ್ರತಿಭೆ ಬೆಳಕಿಗೆ ಬಂದಿತು. ಅವರಿಬ್ಬರೂ ಜನಪ್ರಿಯ ನಟರಾದರು. ಕಾರಣಾಂತರದಿಂದ ಬೆಂಗಳೂರು ಯೂನಿಯನ್ ಸಂಸ್ಥೆ ಒಡೆದುಹೋಯಿತು. ವರದಾಚಾರ್ಯರು ಮೈಸೂರಿಗೆ ಬಂದರು. ಅವರ ಭಾವಮೈದುನ ಶ್ರೀನಿವಾಸಯ್ಯಂಗಾರ್ಯರು ತಾವು ನಡಸುತ್ತಿದ್ದ ಕಂಪನಿಯಲ್ಲಿ ಪಾತ್ರವಹಿಸಬೇಕೆಂದು ವರದಾಚಾರ್ಯರನ್ನು ಕೇಳಿಕೊಂಡರು. ವರದಾಚಾರ್ಯರು ಒಪ್ಪಿದರು. 'ವತ್ಸರಾಜನ ಪಾರ್ಟು ಮಾಡಲು ಶ್ರೀಮಾನ್ ಎ. ವಿ. ವರದಾಚಾರ್ಯರು ದಯವಿಟ್ಟು ಒಪ್ಪಿರುತ್ತಾರೆ' ಎಂದು ದಪ್ಪಕ್ಷರಗಳಲ್ಲಿ ಮುದ್ರಿಸಿ ನಾಟಕದ ನೋಟೀಸುಗಳನ್ನು ಹಂಚುತ್ತಿದ್ದುದು ನನಗೆ ನೆನಪಿದೆ. ಮೊದಮೊದಲು ಕಂಪನಿಯಲ್ಲಿ ಸ್ವಂತ ಬಟ್ಟೆಬರೆ, ಪರದೆ ಮುಂತಾದ ಸಲಕರಣೆಗಳೊಂದೂ ಇರಲಿಲ್ಲ. ಎಲ್ಲವನ್ನೂ ಎರವಲಾಗಿ ಪಡೆಯುತ್ತಿದ್ದರು. ವರದಾಚಾರ್ಯರ ಸಂಪರ್ಕದಿಂದ ಕಂಪನಿಗೆ ವಿಶೇಷ ಕಳೆಬಂದಿತು. ಉತ್ಪತ್ತಿ ಹೆಚ್ಚಿತು. ಕ್ರಮೇಣ ವರದಾಚಾರ್ಯರೇ ಕಂಪನಿಯ ಯಜಮಾನರಾದರು. ಕಂಪನಿಗೆ ರತ್ನಾವಳಿ ಥಿಯೆಟ್ರಿಕಲ್ ಕಂಪನಿ ಎಂದು ನಾಮಕರಣಮಾಡಿದರು. ತಮಗೆ ಬೇಕಾದ ಪರದೆ ಉಡುಗೆತೊಡುಗೆ ಮುಂತಾದವುಗಳನ್ನು ಮಾಡಿಸಿಕೊಂಡರು. ಈ ವೇಳೆಗೆ ನಕಲಿ ಕೃಷ್ಣಮೂರ್ತಿರಾಯರೂ

ವರದಾಚಾರ್ಯರನ್ನು ಸೇರಿಕೊಂಡರು. ನಾಯಕನ ಪಾತ್ರಕ್ಕೆ ವರದಾಚಾರ್ಯರು, ನಾಯಿಕೆಯ ಪಾತ್ರಕ್ಕೆ ಬೋಧರಾಯರು, ವಿದೂಷಕನ ಪಾತ್ರಕ್ಕೆ ಕೃಷ್ಣಮೂರ್ತಿರಾಯರು, ಈ ಮೂವರ ಜೋಡಿ ಪ್ರೇಕ್ಷಕರ ಮನವನ್ನು ಸೂರೆಗೊಂಡಿತು. ಶ್ರೀನಿವಾಸಯ್ಯಂಗಾರ್ಯರು, ರಾಮಚಂದ್ರಪಂಡಿತರು, ವರದಾಚಾರ್ಯರ ತಮ್ಮ ಎ. ಕೆ. ಎಸ್. ಸ್ವಾಮಿ ಇವರು ಸಹ ನಾಟಕಗಳಿಗೆ ವಿಶೇಷ ಕಳೆಯನ್ನು ತಂದು ಕೊಡುತ್ತಿದ್ದರು.

ಬೆಂಗಳೂರು ಯೂನಿಯನ್ ಒಡೆದ ಮೇಲೆ ಕೃಷ್ಣಮೂರ್ತಿರಾಯರು ಸ್ವಲ್ಪ ದಿನ ಯಳಂದೂರು ಕಂಪನಿಯನ್ನು ಸೇರಿದ್ದರು. ಆ ಕಂಪನಿಯನ್ನು ಸೇರಿದ ಬಗೆ, ಅದನ್ನು ಬಿಟ್ಟ ಬಗೆ, ಎರಡೂ ಬಹು ಸ್ವಾರಸ್ಯವಾಗಿವೆ.

ಬೆಂಗಳೂರು ಯೂನಿಯನ್ನಿನವರು ಆಡಿದ ಕೆಲವು ನಾಟಕಗಳನ್ನು ನೋಡಲು ಯಳಂದೂರು ಕಂಪನಿಯ ಮಳವಳ್ಳಿ ಸುಬ್ಬಣ್ಣನವರು ಬೆಂಗಳೂರಿಗೆ ಬಂದರು. ಕೃಷ್ಣಮೂರ್ತಿರಾಯರ ಪಾತ್ರ ಅವರಿಗೆ ಬಲು ಮೆಚ್ಚುಗೆಯಾಯಿತು. ಹೇಗಾದರೂ ಮಾಡಿ ಕೃಷ್ಣಮೂರ್ತಿರಾಯರನ್ನು ತಮ್ಮ ಕಂಪನಿಗೆ ಸೇರಿಸಿಕೊಳ್ಳಬೇಕೆಂಬ ಹೆಬ್ಬಯಕೆಯಾಯಿತು ಸುಬ್ಬಣ್ಣನವರಿಗೆ.

"ರಾಯರೇ!"

"ಏನು ಸುಬ್ಬಣ್ಣ?"

"ಅಮೋಘವಾಗಿತ್ತು ನಿಮ್ಮ ಪಾತ್ರ. ನೀವು ಯಾಕೆ ದೊಡ್ಡ ಮನಸ್ಸು ಮಾಡಿ ನಮ್ಮ ಕಂಪನಿಯನ್ನು ಸೇರಬಾರದು?"

"ಅದು ಹೇಗೆ ಸಾಧ್ಯ, ಸುಬ್ಬಣ್ಣ. ಯೂನಿಯನ್ನಿನೊಡನೆ ಮಾಡಿಕೊಂಡಿರುವ ಒಪ್ಪಂದವನ್ನು ಮೀರಲು ಸಾಧ್ಯವಿಲ್ಲ.

"ಒಂದು ವೇಳೆ ಈ ಯೂನಿಯನ್ ಮುರಿದುಬಿದ್ದರೆ?"

"ಅಂಥ ಕಾಲಕ್ಕೆ ನೋಡೋಣವಂತೆ."

ಇದಾದ ಒಂದೆರಡು ತಿಂಗಳಿನಲ್ಲೇ ಕಾರಣಾಂತರದಿಂದ ಯೂನಿಯನ್ನು ಒಡೆಯಿತು. ಈ ಸಮಯದಲ್ಲಿ ಯಳಂದೂರು ಕಂಪನಿಯವರು ಮೈಸೂರಿನಲ್ಲಿ ನಾಟಕಗಳನ್ನಾಡುತ್ತಿದ್ದರು. ಸರಿ, ಸುಬ್ಬಣ್ಣ ಒಡನೆಯೇ ಬೆಂಗಳೂರಿಗೆ ಬಂದರು. ಕೃಷ್ಣಮೂರ್ತಿರಾಯರನ್ನು ಕಂಡು ಅವರ ವಾಗ್ದಾನವನ್ನು ನೆನಪುಮಾಡಿ ಕೊಟ್ಟರು. ಕೃಷ್ಣಮೂರ್ತಿರಾಯರು ಯಳಂದೂರು ಕಂಪನಿಯನ್ನು ಸೇರಲು ನಿರ್ಧರಿಸಿದರು. ಸುಬ್ಬಣ್ಣನವರಿಗೆ ಎಲ್ಲಿ ರಾಯರು ಕಂಪನಿಯನ್ನು ಬಿಟ್ಟು ಹೋಗುತ್ತಾರೋ ಎಂಬ ಕಾತರ. ಆದ್ದರಿಂದ ಕೆಲವು ಲಾಯರುಗಳ ಸಲಹೆ ಪಡೆದು ಒಂದು ಕರಾರು ಪತ್ರವನ್ನು ಸಿದ್ಧಮಾಡಿದರು. ಪ್ರತಿ ತಿಂಗಳು

ಕೃಷ್ಣಮೂರ್ತಿರಾಯರಿಗೆ ಒಂದು ನೂರು ರೂಪಾಯಿ ಸಂಬಳವನ್ನು ಕೊಡತಕ್ಕದ್ದೆಂದೂ ತಿಂಗಳ ಮೊದಲನೆಯ ತಾರೀಖು ಯಾವ ಸಬೂಬನ್ನೂ ಹೇಳದೆ ಸಂಬಳವನ್ನು ಪಾವತಿಮಾಡಿ ರಸೀತಿಪಡೆಯತಕ್ಕದ್ದೆಂದೂ ಕೃಷ್ಣಮೂರ್ತಿರಾಯರು ಯಾವ ಕಾರಣದಿಂದಲೂ ಕಂಪನಿಯನ್ನು ಬಿಟ್ಟು ಬೇರೆ ಕಂಪನಿಯನ್ನು ಸೇರತಕ್ಕದ್ದಲ್ಲವೆಂದೂ ಕರಾರಿನಲ್ಲಿ ಕಾಣಿಸಿತ್ತು. ಕೃಷ್ಣಮೂರ್ತಿರಾಯರು ಕರಾರುಗಳೆಲ್ಲವನ್ನೂ ಕೂಲಂಕಷವಾಗಿ ಓದಿಕೊಂಡರು. ಪತ್ರದ ಕೆಳಗೆ 'ಈ ಮೇಲಿನ ಷರತ್ತಿನಂತೆ ಯಾವ ತಿಂಗಳು ಮೊದಲನೆಯ ತಾರೀಖು ಸಂಬಳವನ್ನು ಕೊಡುವುದಿಲ್ಲವೋ ಅಂದು ಈ ಕರಾರುಪತ್ರ ರದ್ದು' ಎಂದು ಬರೆದರು. 'ಇದೇನು ರಾಯರೇ! ಇದೇಕೆ ಹೀಗೆ ಬರೆದಿರಿ?' ಎಂದು ಸುಬ್ಬಣ್ಣ ಕೇಳಿದರು. 'ಇದರಲ್ಲಿ ತಪ್ಪೇನು? ಇಷ್ಟೆಲ್ಲ ಷರತ್ತುಗಳನ್ನು ನೀವು ಸೇರಿಸಬಹುದಂತೆ, ನಾನು ಒಂದೇ ಒಂದು ಷರತ್ತನ್ನು ಸೇರಿಸಬಾರದೆ? ಸಂಬಳ ಕೊಡುವ ವಿಷಯದಲ್ಲಿ ಏನಾದರೂ ಅನುಮಾನವೋ? ಅನುಮಾನ ಎಲ್ಲಿಯ ತನಕ ಇಲ್ಲವೋ ಅಲ್ಲಿಯವರೆಗೆ ನನ್ನ ಷರತ್ತಿನಿಂದ ನಿಮಗೆ ಯಾವ ತೊಂದರೆಯೂ ಇಲ್ಲ' ಎಂದು ಹೇಳಿ ಸುಬ್ಬಣ್ಣನವರನ್ನು ಸಮಾಧಾನಪಡಿಸಿ ಕರಾರುಪತ್ರಕ್ಕೆ ಸಹಿಹಾಕಿದರು. 'ಸುಬ್ಬಣ್ಣ! ನಮ್ಮ ಬೆಂಗಳೂರು ಯೂನಿಯನ್ನಿನ ನಾಟಕದ ವಿಧಾನಕ್ಕೂ ನಿಮ್ಮ ಕಂಪನಿಯ ನಾಟಕಗಳ ರೀತಿಗೂ ಹಲವಾರು ವ್ಯತ್ಯಾಸಗಳಿವೆ. ಆದಕಾರಣ ನಾನು ಪಾರ್ಟು ಮಾಡುವುದಕ್ಕೆ ಮೊದಲು ಸ್ವಲ್ಪದಿನ ನೀವು ಆಡುವ ನಾಟಕಗಳನ್ನ ನೋಡಬೇಕಾಗುತ್ತದೆ' ಎಂದರು ರಾಯರು. ಹಾಗೆಯೆ ಆಗಬಹುದೆಂದು ಸುಬ್ಬಣ್ಣ ಒಪ್ಪಿಕೊಂಡರು.

ಕೆಲವು ದಿವಸಗಳು ಹೀಗೆ ನಡೆಯಿತು. ಇಷ್ಟರಲ್ಲಿ ಬೆಂಗಳೂರು ಯೂನಿಯನ್ನಿಗೆ ಮತ್ತೆ ಜೀವ ಕೂಡಿಕೊಂಡಿತು. ಕಂಪನಿಗೆ ಬರಬೇಕೆಂದು ಕೃಷ್ಣಮೂರ್ತಿಗಳಿಗೆ ಕರೆಬಂದಿತು. ಕರಾರುಪತ್ರವನ್ನು ರುಜುಮಾಡಿದ ಮೇಲೆ ಯೂನಿಯನ್ನನ್ನು ಮತ್ತೆ ಸೇರುವುದು ಹೇಗೆ ಎಂಬ ಪ್ರಶ್ನೆ ಕೃಷ್ಣಮೂರ್ತಿರಾಯರ ಎದುರು ನಿಂತಿತು. ಇದಕ್ಕೆ ಒಂದು ಉಪಾಯವನ್ನು ಯೋಚಿಸಿದರು. ನರಸಣ್ಣ ಪಾಪಣ್ಣನ ದಿನಸಿ ಅಂಗಡಿಗೆ ಕಂಪನಿ ಮುನ್ನೂರು ನಾನೂರು ರೂಪಾಯಿಗಳ ಬಾಕಿ ಕೊಡಬೇಕೆಂಬ ವಿಷಯವನ್ನು ಕೃಷ್ಣಮೂರ್ತಿರಾಯರು ಹೇಗೋ ಪತ್ತೆಹಚ್ಚಿದರು. ತಿಂಗಳ ಕೊನೆಯದಿನ ಹೋಗಿ ನರಸಣ್ಣನನ್ನು ಕಂಡು ಪ್ರಸ್ತಾಪತ್ವೇನ ಕಂಪನಿ ಕೊಡಬೇಕಾಗಿದ್ದ ಬಾಕಿ ಹಣದ ವಿಷಯವನ್ನು ಎತ್ತಿದರು. 'ನೀನು ನಾಳೆ ಸಂಜೆ ಕಂಪನಿ ಮನೆಗೆ ಬಾ. ಯಾರಿಗೆ ಕೊಡಲಿ ಯಾರಿಗೆ ಬಿಡಲಿ, ನನಗೆ ಮೊದಲನೆಯ ತಾರೀಖು ಸಂಬಳವನ್ನು ಸುಬ್ಬಣ್ಣ

ಕೊಟ್ಟೇ ಕೊಡುತ್ತಾನೆ. ನೀನು ಬಂದು ಗಲಾಟೆಮಾಡು. ಏನು ತಿಳಿಯದವನ ಹಾಗೆ ನಾನು ಮಧ್ಯಸ್ತಿಕೆ ವಹಿಸಿ ನನ್ನ ಸಂಬಳದ ಹಣವನ್ನು ನಿನಗೆ ಕೊಡಿಸಿ ಕೊಡುತ್ತೇನೆ. ಪಾಪ! ಇಷ್ಟೊಂದು ಸಾಲ ಕೊಟ್ಟು ಹೀಗೆ ಸುಮ್ಮನೆ ಕೂತರೆ ವಸೂಲಾಗುವ ಬಗೆ ಹೇಗೆ? ನನ್ನ ಸಂಬಳವನ್ನು ನಾನು ಹೇಗೋ ಬರಮಾಡಿ ಕೊಳ್ಳುತ್ತೇನೆ. ಅದರ ಯೋಚನೆ ನಿನಗೆ ಬೇಡ' ಎಂದು ಮುಂತಾಗಿ ನರಸಣ್ಣನಿಗೆ ಸಲಹೆ ಮಾಡಿದರು. ಹಣ ವಸೂಲಾಗುತ್ತದೆ ಅಂದರೆ ಯಾರು ಬೇಡ ಅನ್ನುತಾರೆ? ತನ್ನ ಭಾಗದ ದೇವರು ಕೃಷ್ಣಮೂರ್ತಿರಾಯರು ಎಂದು ತಿಳಿದು ಹೃತ್ಪೂರ್ವಕವಾಗಿ ವಂದಿಸಿದ ನರಸಣ್ಣ ರಾಯರನ್ನು.

ಸರಿ, ಮೂರನೆಯ ದಿನ ಒಂದನೇ ತಾರೀಖಿನ ಸಂಜೆ, ಕಂಪನಿಮನೆಯಲ್ಲಿ ಕೃಷ್ಣಮೂರ್ತಿರಾಯರು ಹೆಣೆದಿದ್ದ ಹೊಸ ನಾಟಕ ಮೊದಲಾಯಿತು. ಪಾತ್ರಧಾರಿ ಗಳು ಕೃಷ್ಣಮೂರ್ತಿರಾಯರು, ಮಳವಳ್ಳಿ ಸುಬ್ಬಣ್ಣ ಮತ್ತು ದಿನಸಿ ಅಂಗಡಿ ನರಸಣ್ಣ.

"ಅಯ್ಯಾ! ಸುಬ್ಬಣ್ಣ! ಎಷ್ಟು ತಿಂಗಳಯ್ಯ ಬಾಕಿ ನಿಲ್ಲಿಸಿಕೊಳ್ಳೋದು ಹಣವನ್ನ! ಇವತ್ತು ಏನೇ ಆಗಲಿ ಬಾಕಿ ಕೊಟ್ಟೇತೀರಬೇಕು ಕಾಣಯ್ಯ."

"ನರಸಣ್ಣ! ಕಂಪನಿ ಮನೇಗೆ ಬರಬೇಕೆ ಹಣದ ವಸೂಲೀಗೆ? ನಾನೇ ಬಂದು ಕೊಡ್ತಿದ್ದೆ. ಸದ್ಯದಲ್ಲಿ ಕಂಪನಿಗೆ ಸ್ವಲ್ಪ ಹಣದ ಮುಗ್ಗಟ್ಟಿದೆ. ಸ್ವಲ್ಪ ನಿಧಾನಿಸು. ನಿನ್ನ ದುಡ್ಡು ಎಲ್ಲೂ ಹೋಗೊಲ್ಲ.

"ನೂರಾರು ರೂಪಾಯಿನ ಸಾಮಾನು ಸಾಲತಂದು ಅಚ್ಚುಕಟ್ಟಾಗಿ ಕಂಪನಿ ಯವರು ನುಂಗ್ತಾ ಕೂತಿರಲಿ, ನಾನು ನಿಧಾನಿಸ್ತೀನಿ! ಅದೆಲ್ಲ ನಡೆಯೋದಿಲ್ಲ. ಕೊಡೋ ಹಣ ವಾಪಸ್ಸು ಕೊಟ್ಟು ಮುಂದಿನ ಮಾತಾಡು."

"ಸುಬ್ಬಣ್ಣ! ಯಾರು ಈ ಮನುಷ್ಯ! ಕಂಪನಿ ಮನೆ ಅಂದರೇನು ಗೌರವ ಮರ್ಯಾದೆ ಬೇಡವೇ? ಬಾಯಿಗೆ ಬಂದಹಾಗೆ ಮಾತನಾಡುತ್ತಿದ್ದಾನೆ! ಎಷ್ಟು ಕೊಡಬೇಕು ಬಾಕಿ?"

"ಏನಿಲ್ಲ ರಾಯರೆ! ನೀವು ಮನಸ್ಸಿಗೆ ಬೇಜಾರುಮಾಡಿಕೊಳ್ಳಬೇಡಿ. ಅದಕ್ಕೆಲ್ಲ ನಾನು ಏರ್ಪಾಡು ಮಾಡ್ತೀನಿ, ನಾಳೆ ನಾಳದ್ದರಲ್ಲಿ."

"ನಾಳೆ ನಾಳದ್ದು ಯಾಕೆ ಸುಬ್ಬಣ್ಣ? ಇಂಥವರ ಸಹವಾಸದಿಂದ ಎಷ್ಟು ಬೇಗ ತಪ್ಪಿಸಿಕೊಂಡರೆ ಅಷ್ಟು ಒಳ್ಳೇದು. ಇವತ್ತೇ ಎಷ್ಟಿದ್ದರೆ ಅಷ್ಟನ್ನು ಕೊಟ್ಟು ಕಳುಹಿಸಿಬಿಡಿ."

"ಇವತ್ತು ಯಾವ ಹಣವೂ ಕೈಯಲ್ಲಿಲ್ಲ ರಾಯರೇ! ನಿಮಗೆ ಕೊಡಬೇಕಾದ ಸಂಬಳದ ನೂರು ರೂಪಾಯಿ ಮಾತ್ರ ಇದೆ."

"ಅದನ್ನೇ ಕೊಟ್ಟು ಕಳುಹಿಸಿ."

"ತಮಗೆ ಸಂಬಳ?"

"ಸಂಬಳ! ಸಂಬಳ!! ನನ್ನ ಸಂಬಳ ಎಲ್ಲಿ ಹಾಳಾಗತ್ತೆ? ಇವತ್ತಲ್ಲದಿದ್ದರೆ ನಾಳೆಯಾಯಿತು, ನಾಳೆಯಿಲ್ಲದಿದ್ದರೆ ನಾಳದ್ದು. ಯಾವ ಪ್ರಪಂಚವೂ ಮುಳುಗುವುದಿಲ್ಲ. ಮೊದಲು ಇವನಿಗೆ ಕೊಟ್ಟು ಆಚೆ ಕಳುಹಿಸಿ. ಇಲ್ಲದಿದ್ದರೆ ಕಂಪನಿಗೆ ಮಾನ ಬರುವುದಿಲ್ಲ."

ನೂರು ರೂಪಾಯಿಗಳನ್ನು ವಸೂಲು ಮಾಡಿಕೊಂಡು ನರಸಣ್ಣ ಹೊರಬಿದ್ದ. ನೂರು ರೂಪಾಯಿಯನ್ನು ಹಿಂದಕ್ಕೆ ಕೊಡಿಸಿದ್ದಕ್ಕೆ ಕೃಷ್ಣಮೂರ್ತಿರಾಯರಿಗೆ ಪ್ರತಿಫಲ ಬೇಡವೇ? ಐದು ರೂಪಾಯಿ ನೋಟನ್ನು ನರಸಣ್ಣ ರಾಯರ ಜೇಬಿಗೆ ಇಳಿಬಿಟ್ಟ! ಅದೇ ದಿವಸ ರಾತ್ರಿ ಅಡ್ವೋಕೇಟ್ ಬಂಗ್ಲೆ ಕೃಷ್ಣರಾಯರ ಮನೆಗೆ ಹೋಗಿ ನಡೆದ ಸಂಗತಿಯನ್ನೆಲ್ಲ ತಿಳಿಸಿ ಕೃಷ್ಣಮೂರ್ತಿರಾಯರು ಮಳವಳ್ಳಿ ಸುಬ್ಬಣ್ಣನಿಗೆ ಒಂದು ಲಾಯರು ನೋಟೀಸನ್ನು ಕೊಡಿಸಿದರು. 'ಕರಾರಿನಂತೆ ನನ್ನ ಕಕ್ಷಿಗಾರರಿಗೆ ಮೊದಲ ತಾರೀಖು ಸಂಬಳ ಪಾವತಿ ಮಾಡದೇ ಇದ್ದ ಕಾರಣ ನಿಮ್ಮ ಮತ್ತು ನಮ್ಮ ಕಕ್ಷಿಗಾರರ ವ್ಯವಹಾರ ರದ್ದಾಗಿರುತ್ತೆಂಬ ವಿಷಯವನ್ನು ಈ ನೋಟೀಸು ಮೂಲಕ ನಿಮಗೆ ತಿಳಿಸಿರುತ್ತೆ'—ಎಂಬ ನೋಟೀಸನ್ನು ಸುಬ್ಬಣ್ಣ ಓದಿಕೊಂಡಾಗ ಕಣ್ಣುಗುಡ್ಡೆ ಹೇಗೆ ಮೇಲಕ್ಕೆ ಸಿಕ್ಕಿಹಾಕಿಕೊಳ್ಳುತ್ತೆ ಎಂಬ ಚಿತ್ರವನ್ನು ಯೋಚಿಸುತ್ತ ರಾತ್ರಿ ಹತ್ತು ಘಂಟೆ ರೈಲಿನಲ್ಲಿ ಹೊರಟು ರಾಯರು ಬೆಂಗಳೂರನ್ನು ತಲುಪಿದರು.

ಕೃಷ್ಣಮೂರ್ತಿರಾಯರು ಬೆಂಗಳೂರಿಗೆ ಹಿಂದಿರುಗಿ ಬೆಂಗಳೂರು ಯೂನಿಯನ್ನನ್ನು ಸೇರಿದರು. ಮತ್ತೆ ಕೆಲವು ದಿನಗಳ ಮೇಲೆ ಯೂನಿಯನ್ನಿನ ಆಯುಸ್ಸು ಮುಗಿಯಿತು. ಕೃಷ್ಣಮೂರ್ತಿರಾಯರು ಮೈಸೂರಿಗೆ ಬಂದು ವರದಾಚಾರ್ಯರ ಕಂಪನಿ ಸೇರಿದರು.

ಮೈಸೂರಿನ ವಿದ್ಯಾವಂತರೂ ಕಲಾಭಿಮಾನಿಗಳೂ ಹಿತೈಷಿಗಳೂ ಸೇರಿ ವರದಾಚಾರ್ಯರ ಕಂಪನಿಯ ಅಭಿವೃದ್ಧಿಗಾಗಿ ತಿಂಗಳಿಗೊಂದು ರೂಪಾಯಿನಂತೆ ಚಂದಾ ಹಣವನ್ನು ಕಂಪನಿಗೆ ಕೊಡುತ್ತಿದ್ದರು. ಆದರೆ ಕಂಪನಿಯು ಸ್ಥಿರವಾಗಿ ನಿಲ್ಲುವಂತಾಗಲು ಸಹಾಯವಾದದ್ದು ೧೯೦೬ರಲ್ಲಿ ಒದಗಿಬಂದ ಒಂದು ಸ್ವಾರಸ್ಯಮಯ ಸನ್ನಿವೇಶ.

೧೯೦೬ರಲ್ಲಿ ಐದನೆಯ ಜಾರ್ಜರು ಪ್ರಿನ್ಸ್ ಆಫ್ ವೇಲ್ಸ್‌ರಾಗಿ ಮೈಸೂರಿಗೆ ದಯಮಾಡಿಸಿದ್ದರು. ಅವರನ್ನು ಸ್ವಾಗತಿಸಲು ಸಕಲ ಸಿದ್ಧತೆಗಳೂ ವೈಭವದಿಂದ ನಡೆದಿದ್ದವು. ಊರ ತುಂಬ ಬಳೆಚಪ್ಪರ ಹಸಿರುವಾಣಿಚಪ್ಪರ

ಕತ್ತಿಗುರಾಣಿಗಳ ಚಪ್ಪರ ಮುಂತಾಗಿ ಹಲವಾರು ಬಗೆಯ ಆಕರ್ಷಣೀಯ ಚಪ್ಪರಗಳನ್ನು ಹಾಕಿದ್ದರು. ಎಳನೀರಿನ ಗೊಂಚಲು ಹಣ್ಣುಹಂಪಲುಗಳ ಗೊಂಚಲು ಬಗೆಬಗೆಯ ಹೂ ಬಳ್ಳಿಗಳು ಬಾಳೆಯ ಗೊನೆಗಳು ಇವುಗಳಿಂದ ಹೆಣೆದಿದ್ದ ಹಸಿರುವಾಣಿಚಪ್ಪರ ಕಣ್ಣಿಗೆ ಹಬ್ಬವನ್ನು ತಂದುಕೊಟ್ಟಿತ್ತು. ನಗರ ಸಭೆಯವರು ಸಹ ಇವೆಲ್ಲವನ್ನೂ ಮೀರಿಸುವಂಥ ಒಂದು ಸುಂದರವಾದ ಚಪ್ಪರ ವನ್ನು ಹಾಕಬೇಕೆಂದು ಆಲೋಚಿಸುತ್ತಿದ್ದರು. ಆಗ್ಗೆ ಎಚ್. ನಂಜುಂಡರಾಜೇ ಅರಸಿನವರು ನಗರಸಭೆಯ ಗೌರವಾಧ್ಯಕ್ಷರು. 'ಪಾತ್ರೆ ಚಪ್ಪರವನ್ನು ಯಾರೂ ಹಾಕಿಲ್ಲ, ನಾವು ಹಾಕಿಸಿದರೆ ಬಹಳ ಚೆನ್ನಾಗಿರುತ್ತೆ. ಯಾಕೆ ಹಾಕಿಸಬಾರದು ?' ಎಂದು ಯಾರೋ ಮಹನೀಯರು ಅರಸಿನವರ ಕಿವಿಗೆ ಹಾಕಿದ್ದರು. ಬಹಳ ಒಳ್ಳೆಯ ಸಲಹೆ ಎಂದು ಅರಸಿನವರು ಒಪ್ಪಿಕೊಂಡರು. ಆದರೆ ಪಾತ್ರೆ ಚಪ್ಪರವನ್ನು ಯಾರೂ ನೋಡಿದ್ದಿಲ್ಲ ಕೇಳಿದ್ದಿಲ್ಲ: ಹಾಕುವ ಬಗೆ ಹೇಗೆ ಎಂಬ ಸಮಸ್ಯೆಯನ್ನು ಅರಸಿನವರು ಬಿಡಿಸಲಾರದೇ ಪರದಾಡುತ್ತಿದ್ದರು. ಮೈಸೂರಿನಲ್ಲಿ ನಡೆಯಲಿದ್ದ ಈ ಸಂಭ್ರಮದ ಉತ್ಸವದ ಸಂದರ್ಭದಲ್ಲಿ ಪುರಭವನದಲ್ಲಿ ನಾಟಕ ಗಳನ್ನಾಡಿ ಬೇಕಾದಷ್ಟು ಹಣವನ್ನು ಸಂಪಾದಿಸಬಹುದೆಂಬ ಆಸೆಯಿಂದ ಹತ್ತಾರು ನಾಟಕಸಂಸ್ಥೆಯವರು ಪುರಭವನವನ್ನು ಪಡೆಯಲು ಅಧ್ಯಕ್ಷರಿಗೆ ಅರ್ಜಿ ಗಳನ್ನು ಹಾಕಿಕೊಂಡಿದ್ದರು. ಖುದ್ದಾಗಿ ಅವರನ್ನೇ ಕಂಡು ಪ್ರಾರ್ಥಿಸುತ್ತಿದ್ದರು. ಯಾರು ಯಾವ ವಿಷಯವಾಗಿ ಅರಸಿನವರನ್ನು ಭೇಟಿಮಾಡಿದರೂ ಸರಿ ಅವರದು ಒಂದೇ ಪ್ರಶ್ನೆ: 'ನಿಮಗೆ ಪಾತ್ರೆ ಚಪ್ಪರ ಹಾಕಿಸುವುದಕ್ಕೆ ಬರುತ್ತದೆಯೇನ್ರಿ ?' ಬಂದವರೆಲ್ಲ ಮುಖ ಜೋಲು ಮಾಡಿಕೊಂಡು ಕೈಯಲ್ಲಾಡಿಸಿ ಹಿಂದಿರುಗು ತ್ತಿದ್ದರು. ವರದಾಚಾರ್ಯರಿಗೂ ಪುರಭವನದ ಆವಶ್ಯಕತೆಯಿತ್ತು. ಕಂಪನಿಯ ಪರವಾಗಿ ಕೃಷ್ಣಮೂರ್ತಿರಾಯರು ನಂಜುಂಡರಾಜೇ ಅರಸಿನವರನ್ನು ಭೇಟಿ ಮಾಡಿದರು. ರಾಯರಿಗೂ ಅರಸಿನವರಿಗೂ ಏಕವಚನದಲ್ಲಿ ಮಾತುಕತೆಯಾಡು ವಷ್ಟು ಸ್ನೇಹ ಸಲುಗೆ.

"ಏನಯ್ಯ ಕಿಟ್ಟ ! ಇಷ್ಟು ದೂರ ?"

"ಏನಿಲ್ಲ ಬುದ್ಧಿಯೋರ ! ಸ್ವಲ್ಪ ಟೌನ್‌ಹಾಲ್ ಬೇಕಾಗಿತ್ತು. ಯಜಮಾನರು ನಿಮ್ಮನ್ನು ನೋಡಿ ಬಾ ಎಂದರು."

"ಟೌನ್‌ಹಾಲ್ ಬೇಕಾ ? ಅಗತ್ಯವಾಗಿ ಕೊಡ್ತೀನಿ. ಆದರೆ ಒಂದು ವಿಷಯ."

"ಏನು ?"

"ನಿನಗೆ ಪಾತ್ರೆ ಚಪ್ಪರ ಹಾಕಿಸೋದಕ್ಕೆ ಬರುತ್ತೆಯೋ ?"

“ಅದು ಯಾವ ಮಹಾವಿಷಯ? ಒಂದು ದಿವಸದಲ್ಲಿ ಹಾಕಿಸಿಕೊಡ್ತೀನಿ.”

“ಹಾಂ! ಹಾಕಿಸಿಕೊಡ್ತೀಯ? ಭಲೆ! ಒಂದು ತಿಂಗಳು ಬೇಕಾದರು ಟವನ್‌ಹಾಲ್‌ನ್ನ ನಿಮ್ಮ ಕಂಪನಿ ಹೆಸರಿಗೆ ಬರೆದುಕೊಡ್ತೀನಿ. ಈಗ ದುಡ್ಡು ಎಷ್ಟು ಬೇಕು ಚಪ್ಪರ ಹಾಕಿಸೋದಿಕ್ಕೆ?”

“ಸದ್ಯಕ್ಕೆ ಒಂದೈನೂರು ರೂಪಾಯಿ ಕೊಟ್ಟರಿ. ಉಳಿದುದನ್ನು ಆಮೇಲೆ ಲೆಕ್ಕಾಚಾರ ಮಾಡೋಣವಂತೆ.”

ಟವನ್‌ಹಾಲನ್ನು ಒಂದು ತಿಂಗಳಕಾಲ ಕಂಪನಿಗೆ ಬರೆಸಿಕೊಂಡು ಐನೂರು ರೂಪಾಯಿಯನ್ನು ಭದ್ರವಾಗಿ ಜೇಬಿನಲ್ಲಿ ಸೇರಿಸಿ ಕೃಷ್ಣಮೂರ್ತಿರಾಯರು ಹೊರಬಿದ್ದರು. ‘ಏನು ಪಾತ್ರೆ ಚಪ್ಪರ ಅಂದರೆ?’ ಎನ್ನುವುದು ನಂಜುಂಡರಾಜೇ ಅರಸಿನವರಿಗೆ ಎಷ್ಟು ಗೊತ್ತಿತ್ತೋ ಕೃಷ್ಣಮೂರ್ತಿಗಳಿಗೂ ಅಷ್ಟೇ ತಿಳಿದಿತ್ತು. ‘ನೋಡಿಕೊಳ್ಳೋಣ! ಆ ಸಮಯಕ್ಕೆ ಏನು ತೋರುತ್ತೋ ಅದನ್ನ ಮಾಡಿದರೆ ಆಯಿತು’ ಎಂದು ರಾಯರು ನೆಮ್ಮದಿಯಿಂದಿದ್ದರು.

ದೊಡ್ಡಪೇಟೆಯಲ್ಲಿ ಪಾತ್ರೆ ಅಂಗಡಿ ಇಟ್ಟಿದ್ದ ನೇಮಿರಾಜಯ್ಯ ವರದಾ ಚಾರ್ಯರ ಕಂಪನಿಯ ಹಿತೈಷಿಗಳಲ್ಲಿ ಒಬ್ಬರು. ಕೃಷ್ಣಮೂರ್ತಿರಾಯರು ಅವರಲ್ಲಿಗೆ ಬಂದು ನಡೆದ ಸಂಗತಿಯನ್ನೆಲ್ಲ ತಿಳಿಸಿದರು. ಸರಿ ಅಂಗಡಿಯಲ್ಲಿದ್ದ ಹಂಡೆ, ಕೊಡ, ತಪ್ಪೇಲೆ, ಚಂಬು, ಲೋಟ, ಪರಾತ (ಹಿತ್ತಾಳೆ ತಟ್ಟೆ) ಎಲ್ಲವನ್ನೂ ಸೇರಿಸಿ ಒಂದರ ಮೇಲೊಂದನ್ನು ಬೋರಲು ಹಾಕಿ ಹೇಗೋ ಅಂತೂ ಒಂದು ಚಪ್ಪರವನ್ನು ಸಿದ್ಧಪಡಿಸಿದ್ದಾಯಿತು. ಸೌಟು ಚಮಚಗಳನ್ನು ಜೋಡಿಸಿ ‘God Save the Prince of Wales’ ಎಂದು ಚಪ್ಪರದ ಮೇಲುಭಾಗದಲ್ಲಿ ಹೆಣೆದಿದ್ದೂ ಆಯಿತು. ನಂಜುಂಡರಾಜೇ ಅರಸಿನವರ ಆನಂದಕ್ಕೆ ಮಿತಿಯೇ ಇಲ್ಲ.

ಟವನ್‌ಹಾಲಿನಲ್ಲಿ ನಾಟಕಕ್ಕೆ ದುಡ್ಡಿನ ಸುರಿಮಳೆ. ಜನ ಜಾತ್ರೆಯೇ ಸೇರುತ್ತಿತ್ತು. ಕೃಷ್ಣಮೂರ್ತಿರಾಯರ ಪಾತ್ರೆ ಚಪ್ಪರ ವರದಾಚಾರ್ಯರ ಕಂಪನಿಗೆ ಶಾಶ್ವತವಾದ ನೆರಳಾಯಿತು!

ಸಾಂಗಲಿ ಕಂಪನಿ ಬಂದು ಹಲವಾರು ನಾಟಕ ಸಂಸ್ಥೆಗಳು ಜನ್ಮತಾಳಿ ದಂತೆ ೧೯೦೨ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರವರ ಪಟ್ಟಾಭಿಷೇಕ ಮಹೋತ್ಸವದ ಸಂದರ್ಭದಲ್ಲಿ ಮೈಸೂರಿಗೆ ಬಂದ ಬಾಲಿವಾಲಾ ಕಂಪನಿ, ಅದಕ್ಕೆ ಕೆಲವು ವರ್ಷಗಳ ಹಿಂದೆ ಬೊಂಬಾಯಿಯಿಂದ ಬಂದಿದ್ದ ಅಪ್ಪೂ ಕಂಪನಿ, ಎಂಬ ಪಾರ್ಸಿ ಕಂಪನಿಗಳಿಂದ ರಂಗಸಜ್ಜಿಕೆಯ ವಿಷಯದಲ್ಲಿ ಅನೇಕ ಸುಧಾರಣೆ ಗಳಾದವು. ಬಾಲಿವಾಲ ಕಂಪನಿಯವರು ಅರಮನೆ ಚಂದ್ರಶಾಲೆ ತೊಟ್ಟಿಯಲ್ಲಿ

ಹದಿನೆಂಟು ನಾಟಕಗಳನ್ನಾಡಿದರು. ಮಹಾರಾಜರು ಹದಿನೆಂಟು ಸಾವಿರ ರೂಪಾಯಿಗಳನ್ನು ಬಹುಮಾನವಾಗಿ ನೀಡಿದರು.

ಮೈಸೂರಿಗೆ ಹಾರ್ಮೋನಿಯಂ ವಾದ್ಯ ಕಾಲಿಟ್ಟದ್ದು ಇದೇ ಸನ್ನಿವೇಶದಲ್ಲಿ. ಅಲ್ಲಿಯತನಕ ಆ ವಾದ್ಯವನ್ನೇ ಯಾರೂ ನೋಡಿರಲಿಲ್ಲ. ಅರಮನೆ ಕಂಪನಿ ಮತ್ತು ವರದಾಚಾರ್ಯರ ಕಂಪನಿಗಳಲ್ಲಿ ಹಾರ್ಮೋನಿಯಂ ಬದಲು ಜೋಡಿ ತಂಬೂರಿಗಳನ್ನು ಶ್ರುತಿಗಾಗಿ ಬಳಸುತ್ತಿದ್ದರು. ಒಂದೊಂದು ಸೈಡ್‌ವಿಂಗಿನಲ್ಲಿ ಒಂದೊಂದು ತಂಬೂರಿ ಮತ್ತು ಒಂದೊಂದು ಪಿಟೀಲು; ಒಂದು ಕಡೆ ಒಂದು ತಬಲ: ಇಷ್ಟೆ ಆಗ್ಗೆ ನಾಟಕಗಳಲ್ಲಿ ಉಪಯೋಗಿಸುತ್ತಿದ್ದ ವಾದ್ಯಗಳು. ಅರಮನೆ ಕಂಪನಿಯಲ್ಲಿ ದೊಡ್ಡವೆಂಕಟರಮಣಪ್ಪ ಮತ್ತು ರಾಮಸ್ವಾಮಿ ಎಂಬುವರು ಪಿಟೀಲನ್ನೂ ಚಿಕ್ಕರಂಗಣ್ಣ ತಬಲವನ್ನೂ ನುಡಿಸುತ್ತಿದ್ದರು. ವರದಾಚಾರ್ಯರ ಕಂಪನಿಯಲ್ಲಿ ತಾಯಪ್ಪ ಮತ್ತು ಪುಟ್ಟು ಪಿಟೀಲನ್ನು ನುಡಿಸುತ್ತಿದ್ದರು. ಗುಂಡಪ್ಪ, ನಂಜಪ್ಪ, ರಾಘಪ್ಪ ತಬಲವನ್ನು ನುಡಿಸುತ್ತಿದ್ದರು. ರಾಘಪ್ಪನ ಪೂರ್ಣ ಹೆಸರು ಹನುಮಂತ ರಘುವೀರ ದೇಶಪಾಂಡೆ. ನಾಟಕ ಒಂದಕ್ಕೆ ತಾಯಪ್ಪ ಮತ್ತು ಪುಟ್ಟು ಅವರಿಗೆ ತಲಾ ಐದು ರೂಪಾಯಿಗಳನ್ನು ಕೊಡುತ್ತಿದ್ದರು. ಇವರಲ್ಲದೆ ಕಂಪನಿಯಲ್ಲಿ ಪಿಟೀಲನ್ನು ನುಡಿಸುವುದಕ್ಕಾಗಿ ದ್ಯಾವಣ್ಣ ಎಂಬುವರನ್ನು ಸಂಬಳ ಕೊಟ್ಟು ಇಟ್ಟುಕೊಂಡಿದ್ದರು. ಬಾಲಿವಾಲ ಕಂಪನಿಯಲ್ಲಿ ರಾಮಲಕ್ಷ್ಮಣರ ಪಾತ್ರ ವಹಿಸುತ್ತಿದ್ದ ಅರ್ಜುನ್‌ಮಹಾದೇವ್ ನಾಂಜಿ, ಅರ್ಜುನ್‌ಮಹಾದೇವ್ ಮೊಹಂಜಿ ಎಂಬ ಅವಳಿಜವಳಿ ಸಹೋದರರು ಹಾರ್ಮೋನಿಯಂ ವಾದ್ಯವನ್ನು ಚೆನ್ನಾಗಿ ನುಡಿಸುತ್ತಿದ್ದ ಕಾರಣ ಅವರಿಗೆ ಅರಮನೆಯಲ್ಲಿ ಸಂಬಳ ಮಾಡಿ ಮೈಸೂರಿನಲ್ಲೇ ಉಳಿಸಿಕೊಂಡರು. ಅಲ್ಲಿಂದಾಚೆಗೆ ಹಾರ್ಮೋನಿಯಂ ವಾದ್ಯದ ಪ್ರಭಾವ ಮೊದಲಾಯಿತು.

ಆಗಿನ ದಿನಗಳಲ್ಲಿ ಎಲೆಕ್ಟ್ರಿಕ್ ದೀಪಗಳು ಇರಲಿಲ್ಲ. ರಂಗಭೂಮಿಯ ಆಟಕ್ಕೆ ಬೊಂಬುಗಳನ್ನು ಕಟ್ಟಿ ಒಂದೊಂದು ಬೊಂಬಿಗೆ ಮೂರು ಮೂರು ತೂಗುದೀಪಗಳನ್ನು ಕಟ್ಟುತ್ತಿದ್ದರು. ಫುಟ್‌ಲೈಟುಗಳು ಬೆಳಕು ಬೇಕಾದಾಗ ಬರುವಂತೆ, ಬೇಡದೇ ಇದ್ದಾಗ ಮರೆಯಾಗುವಂತೆ ಮಾಡಲು ಉದ್ದವಾದ ಮರದ ಮುಚ್ಚಳವಿರುತ್ತಿತ್ತು. ಅರಣ್ಯದ ಸೀನ್ ಬಂದಾಗ ತೂಗುದೀಪಗಳನ್ನು ಮೇಲಕ್ಕೆಳೆದು ಫುಟ್‌ಲೈಟುಗಳನ್ನು ಮುಚ್ಚಳದಿಂದ ಮುಚ್ಚುತ್ತಿದ್ದರು. ಟ್ರಾನ್ಸ್‌ಫರ್ ಸೀನುಗಳು ಬಂದಾಗಲೂ ಹೀಗೆಯೇ ದೀಪಗಳನ್ನು ಮರೆಮಾಡಿ ಪಟಾಸನ್ನು ಹೊಡೆಯುತ್ತಿದ್ದರು....ಮಹಾರಾಜರ ಕಂಪನಿಯಲ್ಲಿ ವೇಷಭೂಷಣಗಳಿಗೆ ಯಾವ ಕೊರತೆಯೂ ಇರಲಿಲ್ಲ.

ಅರಮನೆಯಲ್ಲಿ ಸ್ವಯಂ ದೊರೆಗಳು ಮಹಾರಾಣಿಯವರೇ ಬಳಸುತ್ತಿದ್ದ ಬಟ್ಟೆಬರೆಗಳನ್ನೇ ನಟರು ಹಾಕಿಕೊಳ್ಳುತ್ತಿದ್ದರು. ಅರಮನೆಯ ಕಂಪನಿಯಲ್ಲಿ ಅಂಕದಪರದೆ, ರಸ್ತೆ, ಉದ್ಯಾನವನ, ಅರಮನೆಯ ಒಳಭಾಗದ ದೃಶ್ಯ, ಅರಣ್ಯ, ಹೀಗೆ ಮುಖ್ಯವಾಗಿ ಐದಾರು ಪರದೆಗಳಿರುತ್ತಿದ್ದವು. ಅಂಕದ ಪರದೆಮೇಲೆ ಚಾಮುಂಡಿಬೆಟ್ಟದ ದೇವಸ್ಥಾನ, ದೊಡ್ಡಕೆರೆಯ ಚಿತ್ರಗಳು. ವರದಾಚಾರ್ಯರ ಕಂಪನಿಯ ಅಂಕದ ಪರದೆ ಮೇಲೆ ಒಂದು ಪ್ರಕೃತಿ ಚಿತ್ರ.

ವರದಾಚಾರ್ಯರ ಕಂಪನಿಯವರು ಆಡುತ್ತಿದ್ದ ನಾಟಕಗಳೆಂದರೆ ರತ್ನಾವಳಿ, ಬಕಾವಲಿ, ಸತ್ಯವರ್ಮ ಚರಿತ್ರೆ, ಹರಿಶ್ಚಂದ್ರ, ಮನ್ಮಥವಿಜಯ, ರಾಮವರ್ಮ ಲೀಲಾವತಿ (*Romeo and Juliet* ನಾಟಕದ ರೂಪಾಂತರ), ವರದಾಚಾರ್ಯರೇ ಸ್ವಂತವಾಗಿ ರಚಿಸಿದ್ದ ಇಂದಿರಾನಂದ, ವಿಮಲಾವಿಜಯ ಎಂಬ ಸಾಮಾಜಿಕ ನಾಟಕ ಮೊದಲಾದವು.

ವರದಾಚಾರ್ಯರ ಕಂಪನಿಯಲ್ಲಿ ಹಾಡುತ್ತಿದ್ದ ಹಾಡುಗಳೆಲ್ಲ ಹೆಚ್ಚಾಗಿ ಜಾವಳಿ ಮಟ್ಟಿನಲ್ಲಿರುತ್ತಿದ್ದರೆ ಅರಮನೆಯ ಕಂಪನಿಯ ಹಾಡುಗಳು ಕೀರ್ತನೆಯ ಮಟ್ಟಿನಲ್ಲಿರುತ್ತಿದ್ದವು. ಹತ್ತು ಹನ್ನೆರಡು ವರ್ಷಗಳ ಕಾಲ ಪಾರ್ಸಿ ಕಂಪನಿಗಳಲ್ಲಿ ಪಾತ್ರವಹಿಸುತ್ತಿದ್ದ ಕಪನೀಪತಿ ಎಂಬುವರು ವರದಾಚಾರ್ಯರ ಕಂಪನಿಯನ್ನು ಸೇರಿದ ಮೇಲೆ ಕೆಲವು ಪಾರ್ಸಿ ಮಟ್ಟುಗಳನ್ನೂ ವರದಾಚಾರ್ಯರು ಸೇರಿಸಿಕೊಂಡಿದ್ದರು.

೫. ಇಬ್ಬರು ನಟವರರು

ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ವರದಾಚಾರ್ಯರ ಸ್ಥಾನ ಬಹು ದೊಡ್ಡದು. ನಾಟಕಕಲೆಯೇ ಮೂರ್ತಿವೆತ್ತಿತ್ತು ಅವರಲ್ಲಿ ಎಂದರೆ ಅತಿಶಯೋಕ್ತಿಯಲ್ಲ. ಮೋಹಕರೂಪ. ಭವ್ಯವಾದ ಶಾರೀರ. ಉತ್ತಮವಾದ ರಾಗಜ್ಞಾನ; ಖಚಿತವಾದ ತಾಳಜ್ಞಾನ. ಮಾತಿನ ಶೈಲಿ ಬಹು ಗಂಭೀರ, ಬಿಗಿ. ವಿದ್ಯಾವಂತರು. ಯಾವ ನಾಟಕದಲ್ಲಿ ಯಾವ ಪಾತ್ರ ಮಾಡಿದರೂ ಒಂದೇ ವಿಧವಾದ ಸೊಗಸು ಸಹಜತೆ ಎದ್ದು ಕಾಣುತ್ತಿದ್ದವು. ನಾಟಕಗಳನ್ನು ಚೆನ್ನಾಗಿ ಓದಿ ಪಾತ್ರದ ಭಾವವಿಶೇಷಗಳನ್ನು, ವೈಶಿಷ್ಟ್ಯವನ್ನು ವಿಶದವಾಗಿ ಅರ್ಥಮಾಡಿಕೊಂಡು ನಾಟಕವಾಡುವಾಗ ತಮ್ಮನ್ನು ತಾವೇ ಮರೆತು ಪಾತ್ರದೊಡನೆ ಸಂಪೂರ್ಣ ಬೆರೆಯುತ್ತಿದ್ದರು. ಸುಖಾಂತ ನಾಟಕಗಳಾಗಲೀ ವಿಷಾದಾಂತ ನಾಟಕಗಳಾಗಲೀ ಎರಡನ್ನೂ ಅತಿ ದಕ್ಷತೆಯಿಂದ ನಿರ್ವಹಿಸುತ್ತಿದ್ದರು. ವಿಷಾದಾಂತ ನಾಟಕಗಳಲ್ಲಿ ಪ್ರೇಕ್ಷಕರನ್ನು ದುಃಖ ಸಮುದ್ರದಲ್ಲಿ ಮುಳುಗಿಸುತ್ತಿದ್ದಂತೆ ಸುಖಾಂತ ನಾಟಕಗಳಲ್ಲಿ ಸಂತೋಷ ಸಂಭ್ರಮ ವಿಲಾಸಗಳಲ್ಲಿ ತೇಲಾಡಿಸುತ್ತಿದ್ದರು. ಅವರ ಪಾತ್ರಾಭಿನಯ ಅವರಿಗೇ ಸಮರ್ಪಕವೆನಿಸಿದ ಹೊರತು ಅವರು ಸಂತುಷ್ಟರಾಗುತ್ತಿರಲಿಲ್ಲ—ಎಂಬುದಕ್ಕೆ ಒಂದು ನಿದರ್ಶನವನ್ನು ಕೊಡಬಹುದು. ಶೂರಸೇನ ನಾಟಕವನ್ನು ಆಡಬೇಕೆಂದು ಸಾವಿರಾರು ರೂಪಾಯಿ ವೆಚ್ಚಮಾಡಿ ಹೊಸ ಹೊಸ ವೇಷಭೂಷಣಗಳು ಪರದೆ ಮುಂತಾದ ಸಲಕರಣೆಗಳನ್ನು ಸಿದ್ಧಮಾಡಿಸಿದ್ದರು. ತಿಂಗಳುಗಟ್ಟಲೆ ನಾಟಕದ ಅಭ್ಯಾಸ ನಡೆದಿತ್ತು. ಕೊನೆಗೆ ನಾಟಕವನ್ನು ಆಡುವ ದಿನವನ್ನೂ ನಿರ್ಧಾರ ಮಾಡಿದ್ದಾಯಿತು. 'ನಾಳೆ ದಿನ ರಾತ್ರಿ ಶೂರಸೇನ ಚರಿತ್ರೆ' ಎಂದು ಬೋರ್ಡನ್ನು ಬರೆಸಿಟ್ಟು ಮನೆಗೆ ಹೋಗಿ ಕಡೆಯ ಘಳಿಗೆಯಲ್ಲಿ ಮನಸ್ಸನ್ನು ಬದಲಿಸಿ ಬೋರ್ಡನ್ನು ತೆಗೆದು ಒಳಗಿಡುವಂತೆ ಆಳಿನ ಸಂಗಡ ಹೇಳಿ ಕಳುಹಿಸಿದ್ದೂ ಉಂಟು. ಒಂದಲ್ಲ ಎರಡಲ್ಲ ನಾಲ್ಕಾರು ಸಲ ಹೀಗೆ ಮಾಡಿದ್ದರು ವರದಾಚಾರ್ಯರು ಈ ನಾಟಕದ ವಿಷಯದಲ್ಲಿ. ಕುತೂಹಲ ಕೆರಳಿ ಒಮ್ಮೆ ನಾನೇ ವರದಾಚಾರ್ಯರಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದೆ. 'ಆಚಾರ್ಯರೇ, ಶೂರಸೇನ ನಾಟಕವನ್ನು ಆಡಬೇಕೆಂದು ಬಹು ದಿನದಿಂದಲೂ ನನಗೆ ಆಸೆ. ಆದರೆ ನಾಟಕದ ಸುಬ್ಬಣ್ಣ ಈ ನಾಟಕದಲ್ಲಿ ಮಾಡುತ್ತಿದ್ದ ಆಯಾಗೋ ಪಾತ್ರ ನನ್ನ ಕಣ್ಣುಮುಂದೆ ನಿಂತಾಗ ಆ ಮಟ್ಟದಲ್ಲಿ ನಾನು



ಎ. ವಿ. ವರದಾಚಾರ್

ಆ ಪಾತ್ರವನ್ನು ನಿರ್ವಹಿಸಬಲ್ಲೆನೇ ಎಂಬ ಸಂದೇಹ ನನ್ನನ್ನು ಆವರಿಸುತ್ತದೆ. ಸುಬ್ಬಣ್ಣನವರ ಕಲಾಕೌಶಲ್ಯವನ್ನು ಕಂಡ ಜನ ಸಹಜವಾಗಿ ನನ್ನಿಂದಲೂ ಅದೇ ಮಟ್ಟದ ಪಾತ್ರಪೋಷಣೆಯನ್ನು ನಿರೀಕ್ಷಿಸುತ್ತಾರೆ. ಆದ್ದರಿಂದ ಆ ನಾಟಕದ ಗೊಡವೆಯೇ ಬೇಡ ಎಂದು ತೀರ್ಮಾನಿಸಿದೆ' ಎಂದರು. ಕೊನೆಗೂ ಆ ನಾಟಕ ವನ್ನು ವರದಾಚಾರ್ಯರು ಆಡಲೇ ಇಲ್ಲ. 'ಇಷ್ಟು ನಾಟಕಗಳನ್ನು ನೀವು ಆಡುತ್ತಿದ್ದೀರಷ್ಟೆ. ಅವುಗಳಲ್ಲಿ ಯಾವುದು ನಿಮಗೆ ತುಂಬ ಮೆಚ್ಚುಗೆಯಾದುದು?' ಎಂದು ವರದಾಚಾರ್ಯರನ್ನು ಯಾರೋ ಒಮ್ಮೆ ಪ್ರಶ್ನಿಸಿದಾಗ ವರದಾಚಾರ್ಯರು 'ನಾನು ನೂರಾರು ಸಲ ಶಾಕುಂತಲ ನಾಟಕದಲ್ಲಿ ದುಷ್ಯಂತನ ಪಾತ್ರ ವಹಿಸಿದ್ದೀನಿ. ಒಂದೊಂದು ಸಾರಿ ಆ ಪಾತ್ರವನ್ನು ಮಾಡುವಾಗಲೂ ಒಂದೊಂದು ನವ್ಯತೆ ನನ್ನ ಅನುಭವಕ್ಕೆ ಬರುತ್ತದೆ. ನನ್ನ ಆಯುಷ್ಯದಲ್ಲಿ ಒಮ್ಮೆಯಾದರೂ ಆ ಪಾತ್ರವನ್ನು ತೃಪ್ತಿಕರವಾಗಿ ಪೂರೈಸಬಲ್ಲೆನೆ ಎಂದು ಎನ್ನಿಸುತ್ತದೆ ನನಗೆ' ಎಂದು ಹೇಳಿದುದು ಈಗಲೂ ನನಗೆ ನೆನಪಿನಲ್ಲಿದೆ.

ನಾಟಕಕ್ಕೆ ಬೇಕಾಗುವ ವಸ್ತ್ರ ಒಡವೆ ಪರದೆ ಮುಂತಾದ ಎಲ್ಲ ವಿಷಯಗಳಿಗೂ ವರದಾಚಾರ್ಯರೇ ಸ್ವತಃ ಲಕ್ಷ್ಯಕೊಡುತ್ತಿದ್ದರು. ಮನಸ್ಸಿಗೆ ತೃಪ್ತಿಯಾಗುವವರೆಗೂ ಯಾವುದನ್ನೂ ಒಪ್ಪುತ್ತಿರಲಿಲ್ಲ. ಕಂಪನಿಯಲ್ಲಿ ಬಾಪು ಎಂಬ ಚಿತ್ರಗಾರನಿದ್ದ. ಯಜಮಾನರ ಅಪ್ಪಣೆ ಮೇರೆಗೆ ಸಮುದ್ರದ ಪರದೆಯೊಂದನ್ನು ಸಿದ್ಧಪಡಿಸುತ್ತಿದ್ದ. ಪರದೆ ಚೆನ್ನಾಗಿಯೇ ರೂಪತಾಳಿತ್ತು. ಆದರೆ ಏಕೋ ಏನೋ ವರದಾಚಾರ್ಯರ ಮನಸ್ಸಿಗೆ ಮಾತ್ರ ಪರದೆ ಹಿಡಿಸಲಿಲ್ಲ. 'ಚೆನ್ನಾಗಿಲ್ಲ ಪರದೆ' ಎಂದು ನೇರವಾಗಿ ಬಾಪೂಗೆ ಹೇಳಲು ಸಂಕೋಚ. ಕಂಪನಿಯ ನಟರಾಗಿದ್ದ ರಾಮಚಂದ್ರಪಂಡಿತರನ್ನು ಕರೆದು 'ಬಾಪು ಪರದೆ ಬರೆದಿದ್ದಾನೆ. ನನಗೆ ಸಮಾಧಾನವಿಲ್ಲ. ಆದರೆ ಹಾಗೆ ತಿಳಿಸಲು ನನಗೆ ಸಂಕೋಚ. ನೀನು ಹೇಗಾದರೂ ಅವನಿಗೆ ನನ್ನ ಅಭಿಪ್ರಾಯವನ್ನು ತಿಳಿಸಬೇಕಲ್ಲ' ಎಂದರು. 'ಆಗತ್ಯವಾಗಿ ಆಗಲಿ. ತಾವು ಪರದೆಯನ್ನು ನೋಡುತ್ತಿರಿ. ನಾನು ಬಂದು ತಮ್ಮನ್ನು ಸೇರಿಕೊಳ್ಳುತ್ತೇನೆ. ಮುಂದಿನ ವಿಷಯವನ್ನು ನಾನು ನೋಡಿಕೊಳ್ಳುತ್ತೇನೆ' ಎಂದರು ರಾಮಚಂದ್ರಪಂಡಿತರು. ಅದರಂತೆಯೇ ವರದಾಚಾರ್ಯರು ಬಾಪು ಬಳಿ ಹೋದರು. ಎರಡು ನಿಮಿಷಗಳ ಬಳಿಕ ಪಂಡಿತರು ಅತ್ತ ಹಾಯ್ದು ಹೋದರು. 'ಪಂಡಿತರೇ! ಹೀಗೆ ಬನ್ನಿ. ಈ ಹೊಸ ಪರದೆಯನ್ನು ನೋಡಿದಿರಾ?' ಎಂದರು ವರದಾಚಾರ್ಯರು. ರಾಮಚಂದ್ರಪಂಡಿತರು ಒಂದು ಕಣ್ಣು ಮುಚ್ಚಿಕೊಂಡು ಇನ್ನೊಂದು ಕಣ್ಣಿನಿಂದ ಬಹು ಸೂಕ್ಷ್ಮವಾಗಿ ಪರದೆಯನ್ನು ನೋಡುವಂತೆ ನಟಿಸುತ್ತ 'ಆಹಾ! ಎಷ್ಟು ಚೆನ್ನಾಗಿದೆ ಚಿತ್ರ? ಏನು ಕಲ್ಲು! ಏನು ಬಂಡೆ!

ಎಷ್ಟು ಸೊಗಸಾದ ಮರಗಿಡಗಳು! ಸಾಕ್ಷಾತ್ ಬೆಟ್ಟವೇ ಎದುರಿಗೆ ನಿಂತಂತಿದೆ!' ಎಂದು ಬಣ್ಣಬಣ್ಣವಾಗಿ ವರ್ಣನೆಯನ್ನು ಪ್ರಾರಂಭಿಸಿದರು. ಬಾಪು ಈ ವರ್ಣನೆಯನ್ನು ಕೇಳಿ ಕಿಡಿಕಿಡಿಯಾದ! 'ಬೆಟ್ಟ ಅಲ್ಲ ಸ್ವಾಮಿ, ಸಮುದ್ರ! ಕಾಣುವುದಿಲ್ಲವೇ?' ಎಂದು ಅಬ್ಬರಿಸಿದ. ಪಂಡಿತರು ಮತ್ತೆ ತಂಪಾಗಿ 'ನೀನು ಹೇಳದೆ ಹೋಗಿದ್ದರೆ ನಾನು ನಿಜಕ್ಕೂ ಬೆಟ್ಟ ಎಂದೇ ನಂಬಿಬಿಡುತ್ತಿದ್ದೆ' ಎಂದರು. ಮುಂದಿದ್ದ ಬಣ್ಣದ ಬಟ್ಟಲುಗಳನ್ನೆಲ್ಲ ಪರದೆಯಮೇಲೆ ಬಿಸಾಡಿ ಬಾಪೂ ಮೇಲೆದ್ದ. 'ಛೆ! ಛೆ! ಏನು ಮಾಡಿಬಿಟ್ಟೆ ಬಾಪೂ! ಇಡೀ ಪರದೆಯನ್ನೇ ಮೊದಲಿಂದ ಬರೆಯಬೇಕಾಗಿ ಬಂತಲ್ಲ! ಛೇ ಛೆ!' ಎಂದು ಉದ್ಗಾರ ತೆಗೆದರು ವರದಾಚಾರ್ಯರು. ಮುಂದೆ ತಮಗೆ ಬೇಕಾದ ರೀತಿಯಲ್ಲಿ ಪರದೆಯನ್ನು ಬರೆಸಿಕೊಂಡರು!

ಜ್ಯೋತಿಷ್ಯದಲ್ಲಿ ವರದಾಚಾರ್ಯರಿಗೆ ಬಹಳ ನಂಬಿಕೆ. ಕೂತರೆ ನಿಂತರೆ ಮೀನ ಮೇಷ ಎಣಿಸುತ್ತಿದ್ದರು. ಎರಡು ಸಲ ಹೆಚ್ಚಾಗಿ ತೇಗು ಬಂದರೆ ಜ್ಯೋತಿಷ್ಯರಿಗೆ ಹೇಳಿಕಳುಹಿಸುವಷ್ಟು ನಚ್ಚು.

ವರದಾಚಾರ್ಯರು ಉದಾರಿಗಳು. ಮದುವೆ ಮುಂಜಿ ಮುಂತಾದ ಕಾರಣಗಳನ್ನು ಮುಂದಿಟ್ಟುಕೊಂಡು ಬಂದ ನೂರಾರು ಮಂದಿಗೆ ಸಹಾಯಾರ್ಥ ನಾಟಕಗಳನ್ನಾಡಿ ಉಪಕಾರಮಾಡಿದ್ದರು.

ವರದಾಚಾರ್ಯರಲ್ಲಿ ಒಂದು ವಿಶೇಷವನ್ನು ಕಂಡು ಎಷ್ಟೋಬಾರಿ ನನ್ನಲ್ಲಿ ನಾನೇ ಅಚ್ಚರಿಪಟ್ಟಿದ್ದೇನೆ. ರಂಗಭೂಮಿಯಮೇಲೆ ಎಲ್ಲೂ ಇಲ್ಲದ ಹುಮ್ಮಸ್ಸು ಉತ್ಸಾಹ ಅವರನ್ನು ಆವರಿಸುತ್ತಿತ್ತು. ಕಂದ ವೃತ್ತಗಳನ್ನು ಹಾಡುವಾಗ್ಗೆ ತಾನೇ ತಾನಾಗಿ ಪ್ರವಹಿಸುತ್ತಿತ್ತು ಮನೋಧರ್ಮ. ಮಟ್ಟುಗಳನ್ನು ಹಾಡುವಾಗ ಬಗೆಬಗೆಯ ಸಂಗತಿಗಳು ತಾಳದ ಚಮತ್ಕಾರಗಳು ನಿರರ್ಗಳವಾಗಿ ಒದಗಿಬರುತ್ತಿದ್ದವು. ಮಾತುಗಳನ್ನಾಡುವಾಗಲೂ ಅಷ್ಟೆ. ಶಾರದೆಯೇ ನಾಲಗೆಯ ಮೇಲೆ ಪ್ರತ್ಯಕ್ಷಳಾಗಿದ್ದಾಳೋ ಅನ್ನುವಂತಿರುತ್ತಿತ್ತು. ರಂಗಭೂಮಿಯನ್ನು ಆರೈಕ್ಷಣ ಬಿಟ್ಟು ಬಂದರೆ ಎಲ್ಲಿ ಮಾಯವಾಗುತ್ತಿದ್ದವೋ ಈ ಎಲ್ಲ ವರವಿಶೇಷಗಳು ಅನ್ನಿಸುತ್ತಿತ್ತು. ನಾಟಕದ ಮಾತುಗಳಲ್ಲದೇ ಬೇರೆ ಯಾವುದಾದರೂ ನಾಲ್ಕು ಮಾತುಗಳನ್ನು ಆಡಬೇಕಾದರೂ ಕೃಷ್ಣಮೂರ್ತಿರಾಯರನ್ನು ಮುಂದೆ ಬಿಡುತ್ತಿದ್ದರು. ಒಮ್ಮೆ ವೀಣೆ ಶೇಷಣ್ಣನವರ ಮನೆಗೆ ವರದಾಚಾರ್ಯರು ದಯಮಾಡಿಸಿದ್ದರು. 'ಏನಾದರೂ ಸ್ವಲ್ಪ ಹಾಡಿ ವರದಾಚಾರ್ಯರೇ' ಎಂದರು ಶೇಷಣ್ಣ. ಬಹಳ ಒತ್ತಾಯ ಮಾಡಿದಮೇಲೆ ವರದಾಚಾರ್ಯರು ಜುಂಜೋಟಿರಾಗವನ್ನು ಸ್ವಲ್ಪ ಹಾಡಿ ಒಂದು ಮಟ್ಟನ್ನು ಹಾಡಿದರು. ಅದೇ ರಾಗ ಅದೇ ಮಟ್ಟನ್ನು ಅವರು

ನಾಟಕದಲ್ಲಿ ಹಾಡಿದ್ದನ್ನು ಕೇಳಿದ್ದ ನನಗೆ ಆಶ್ಚರ್ಯವಾಯಿತು. ರಂಗಸ್ಥಲದಲ್ಲಿ ಅಮೃತಧಾರೆಯಂತೆ ಹರಿಯುತ್ತಿದ್ದ ಅವರ ಗಾನಲಹರಿ ಅಂದು ಏಕೆ ಹಾಗೆ ಬತ್ತಿ ಬರಿದಾಗಿತ್ತೋ ಎಂಬ ಸಮಸ್ಯೆ ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ ನನ್ನ ಪಾಲಿಗೆ!

ಒಮ್ಮೆ ಹೆಸರಾಂತ ಚಿತ್ರಗಾರ ರಾಜಾರವಿವರ್ಮ ವರದಾಚಾರ್ಯರ ನಾಟಕವನ್ನು ನೋಡಿ ಆನಂದಪರವಶನಾಗಿ ವರದಾಚಾರ್ಯರ ಕೈಕುಲುಕುತ್ತ 'ಮೈ ಮರೆಸುವಂತಹ ಗಾಯನ ನಿಮ್ಮದು; ನಾಟಕಕ್ಕೆ ಬಹಳ ಹೆಚ್ಚು; ಸಂಗೀತ ಕಛೇರಿಗೆ ಸ್ವಲ್ಪ ಕಡಮೆ' ಎಂದು ಹೇಳಿದ್ದು ಬಹಳ ಸರಿ, ಎಂದೆನಿಸಿತು ನನಗೆ.

ಹುಟ್ಟು ನಗೆಗಾರ ಕೃಷ್ಣಮೂರ್ತಿರಾಯರು. ವರದಾಚಾರ್ಯರು ಮತ್ತು ಕೃಷ್ಣಮೂರ್ತಿರಾಯರ ಜೋಡಿ ಎಂದರೆ ಒಂದು ಅಪೂರ್ವ ಸಂಗಮ. ಒಬ್ಬರನ್ನು ಬಿಟ್ಟು ಒಬ್ಬರು ಶೋಭಿಸುತ್ತಿರಲಿಲ್ಲ. ಒಂದೇ ನಾಟಕದ ಒಂದೇ ಪಾತ್ರವನ್ನು ಮಾಡುವಾಗ ಒಂದು ದಿವಸ ಹಾರಿಸಿದ ಹಾಸ್ಯ ಚಟಾಕಿಯನ್ನು ಇನ್ನೊಂದು ದಿವಸ ಬಳಸುತ್ತಿರಲಿಲ್ಲವಾದುದರಿಂದ ಅವರ ಹಾಸ್ಯಮಧು ಎಂದೂ ತಂಗಳಾದದ್ದೇ ಇಲ್ಲ. 'ನಿನ್ನ ತುಟಿಯ ಮೇಲೆ ನಗು ಸರ್ವದಾ ಮೂಡಿರಲಿ, ಹಾಸ್ಯವೇ ನಿನ್ನ ಬಾಳ ಉಸಿರಾಗಲಿ' ಎಂದು ಕಾಳಿಕಾದೇವಿ ತೆನಾಲಿರಾಮಕೃಷ್ಣನಿಗೆ ವರವಿತ್ತಿದ್ದಳೋ ಇಲ್ಲವೋ ನಮಗೆ ತಿಳಿಯದು. ಆದರೆ ಕೃಷ್ಣಮೂರ್ತಿರಾಯರಲ್ಲಿ ಆ ವರಪ್ರಸಾದವಿದ್ದುದನ್ನು ಮಾತ್ರ ಪ್ರತ್ಯಕ್ಷವಾಗಿ ನೋಡಿದ್ದೆ. ಅವರ ಸಹವಾಸದಲ್ಲಿ ಹೆಜ್ಜೆಹೆಜ್ಜೆಗೂ ವಿನೋದ, ನಗೆಯ ತುಂತುರು.

ಒಂದು ದಿನ ಸುಮಾರು ಬೆಳಿಗ್ಗೆ ಹತ್ತು ಘಂಟೆ ಸಮಯ. ಬೆಂಗಳೂರಿನ ಮಲ್ಲೇಶ್ವರಂ ರಸ್ತೆಯಲ್ಲಿ ಯಾವುದೋ ಕಾರ್ಯಗೌರವದ ನಿಮಿತ್ತ ಹೋಗುತ್ತಿದ್ದೆ. ಕಾಫಿ ತಿಂಡಿಯನ್ನು ಮುಗಿಸಿಕೊಂಡು ಸಂದಿಯ ಹೋಟೆಲೊಂದರಿಂದ ಹೊರಬಿದ್ದ ಕೃಷ್ಣಮೂರ್ತಿರಾಯರು ನನ್ನನ್ನು ಸೇರಿಕೊಂಡರು. ಇಬ್ಬರೂ ಸ್ವಲ್ಪ ದೂರ ಹೋಗುವಷ್ಟರಲ್ಲಿ ಎದುರುಗಡೆಯಿಂದ ಬರುತ್ತಿದ್ದ ನಮ್ಮಿಬ್ಬರಿಗೂ ಪರಿಚಿತರಾದ ಮಿತ್ರರೊಬ್ಬರ ಭೇಟಿಯಾಯಿತು. 'ಏನು ಸ್ವಾಮಿ! ಎಲ್ಲಿಂದ ಬರೋಣವಾಗುತ್ತಿದೆ ಸವಾರಿ?' ಎಂದು ಕೃಷ್ಣಮೂರ್ತಿರಾಯರು ಆ ಮಿತ್ರರನ್ನು ಪ್ರಶ್ನಿಸಿದರು. 'ಇಲ್ಲೆ; ಕರ್ಪೂರ ಶ್ರೀನಿವಾಸರಾಯರ ಬಳಿ ಸ್ವಲ್ಪ ಕೆಲಸವಿತ್ತು. ಹೋಗಿದ್ದೆ' ಎಂದು ಉತ್ತರಿಸಿ 'ತಾವು?' ಎಂದರು. ಒಡನೆಯೇ ನುಡಿದರು, ಕೃಷ್ಣಮೂರ್ತಿರಾಯರು: 'ಇಲ್ಲೆ ಸ್ವಲ್ಪ ಸಾಂಬ್ರಾಣಿ ಹನುಮಂತರಾಯರನ್ನು ನೋಡಬೇಕಾಗಿದೆ' ಎಂದು. ರಸ್ತೆಯಲ್ಲಿ ನಿಂತಿದ್ದೇವೆ ಎಂಬ ಪರಿವೆ ಸಹ ಇಲ್ಲದೆ

ಆ ಮಿತ್ರರೂ ನಾನೂ ಗಟ್ಟಿಯಾಗಿ ನಕ್ಕೆವು!

ಇನ್ನೊಂದು ಸಲ ನಾವೂ ಕೃಷ್ಣಮೂರ್ತಿರಾಯರೂ ನಂಜನಗೂಡು ಶ್ರೀಕಂಠಶಾಸ್ತ್ರಿಗಳ ಬಳಿಗೆ ಹೋಗುವ ಸಂದರ್ಭ ಬಂದಿತು. ಆಗಲೂ ಹೀಗೆಯೆ. ದಾರಿಯಲ್ಲಿ ನನಗೂ ಕೃಷ್ಣಮೂರ್ತಿರಾಯರಿಗೂ ಅನಿರೀಕ್ಷಿತ ಭೇಟಿ. ಕೃಷ್ಣಮೂರ್ತಿ ರಾಯರು ನನ್ನನ್ನೂ ಸಂಗಡ ಬರಬೇಕೆಂದು ಒತ್ತಾಯ ಮಾಡಿದರು. ಯಾವುದೋ ಒಂದು ನಾಟಕದ ಹಾಡು ಪೂರ್ತಿಯಾಗಿ ಬರೆದಿರಲಿಲ್ಲವಂತೆ ಶಾಸ್ತ್ರಿಗಳು. ಶಾಸ್ತ್ರಿಗಳನ್ನು ಕಂಡು 'ರಚನೆ ಪೂರ್ತಿಯಾಗಿದ್ದರೆ ತೆಗೆದುಕೊಂಡು ಬನ್ನಿ ಎಂದು ಯಜಮಾನರ ಅಪ್ಪಣೆಯಾಗಿದೆ ಶಾಸ್ತ್ರಿಗಳೇ' ಎಂದರು ರಾಯರು. 'ಇನ್ನೂ ಇಲ್ಲ ಕೃಷ್ಣಮೂರ್ತಿರಾಯರೇ! ಏಕೋ ಏನೋ ಪ್ರಾಸಗಳೇ ಸರಿಬರುತ್ತಿಲ್ಲ' ಎಂದರು ಶಾಸ್ತ್ರಿಗಳು. 'ಪ್ರಾಸಕ್ಕೆ ಇಷ್ಟು ಪ್ರಯಾಸವೇ?' ಎಂದು ಕೃಷ್ಣಮೂರ್ತಿರಾಯರು ಪ್ರಾಸಬದ್ಧವಾಗಿಯೇ ನಕ್ಕರು. 'ರಾಯರೇ! ಕವಿತ್ವವೆಂದರೆ ನೀವು ಹೇಳುವಷ್ಟು ಸುಲಭವಲ್ಲ. ಪ್ರಾಸ ಯತಿ ಗಣ ಎಲ್ಲ ಸಮರ್ಪಕವಾಗಿ ಒದಗಿಬರಬೇಕು' ಎಂದು ಸ್ವಲ್ಪ ಬಿರುಸಾಗಿಯೇ ನುಡಿದರು ಶಾಸ್ತ್ರಿಗಳು. 'ಅದೇನು ಮಹಾ, ಶಾಸ್ತ್ರಿಗಳೇ. ಈಗ ಬೇಕಾದರೆ ನಿಂತ ನಿಂತ ಹಾಗೆಯೇ ಒಂದು ಪದ್ಯ ಹೇಳಲೇ!' ಎಂದು ರಾಯರು ಸವಾಲು ಹಾಕುತ್ತ 'ಭರ್ಜರಿಯಿಂದಲಿ ಗರ್ಜನೆ ಮಾಳ್ಪುದು ದರ್ಜಿಯ ಮನೆಯಲಿ ಮಾರ್ಜಾಲ!'....ಎಂದು ಪ್ರಾಸಬದ್ಧವಾಗಿ ಹೇಳುತ್ತ 'ಹೇಗಿದೆ ಶಾಸ್ತ್ರಿಗಳೇ?' ಎಂದರು. ಮೂವರೂ ಬಿದ್ದುಬಿದ್ದು ನಕ್ಕೆವು!

ಊಟ ತಿಂಡಿ ಎಂದರೆ ಕೃಷ್ಣಮೂರ್ತಿರಾಯರಿಗೆ ಊರಗಲವಾಗುತ್ತಿತ್ತು ಬಾಯಿ. ತಿನ್ನುವುದರಲ್ಲಿ ಬಲು ಸುಖಿ. ಹೊತ್ತುಗೊತ್ತು ಎನ್ನುವುದೇ ಇಲ್ಲ. ಹಣ್ಣುಹಂಪಲು ಸದಾ ಇದ್ದೇ ಇರುತ್ತಿತ್ತು ಮನೆಯಲ್ಲಿ. ದ್ವಾದಶಿಯ ದಿನ ಬೆಳಿಗ್ಗೆ ಆರು ಘಂಟೆಗೆಲ್ಲ ಪಾರಣೆಯನ್ನು ಮುಗಿಸಿಕೊಂಡು ಏಳು ಘಂಟೆಯ ಹೊತ್ತಿಗೆ ದೋಸೆ ಪಲ್ಯವನ್ನು ತಿನ್ನಲು ಹೋಟೆಲಿನಲ್ಲಿ ಸಿದ್ಧವಾಗಿರುತ್ತಿದ್ದರು. ಮಧ್ಯರಾತ್ರಿ ಒಂದು ಘಂಟೆಯಲ್ಲಿ ಎದ್ದು ಕುಳಿತು, ಸ್ಟೌವ್ ಹತ್ತಿಸಿ, ಸಾಂಗೋಪಾಂಗವಾಗಿ ಸಣ್ಣ ರವೆ ಉಪ್ಪಿಟ್ಟನ್ನು ಮಾಡಿ ತಿಂದು ತೇಗಿ ಸಮಾಧಾನಚಿತ್ತದಿಂದ ಮಲಗುತ್ತಿದ್ದುದನ್ನು ನೋಡಿದ್ದೇನೆ!

'ನಾನು ಪ್ರಾಣಬಿಡುವುದೂ ಒಂದೇ ಕೃಷ್ಣಮೂರ್ತಿಯನ್ನು ಬಿಟ್ಟರುವುದೂ ಒಂದೇ. ಹೀಗಿದ್ದರೂ ಸಹ ಈಗ ಅವರನ್ನು ಕಂಪನಿಯಿಂದ ತೆಗೆಯಲೇಬೇಕಾಗಿದೆ. ಇದೊಂದು ವಿಷಯದಲ್ಲಿ ಮಾತ್ರ ನನ್ನನ್ನು ಬಲವಂತಪಡಿಸಬೇಡಿ' ಎಂದು ವರದಾಚಾರ್ಯರು ಶೇಷಣ್ಣ ಸುಬ್ಬಣ್ಣನವರ ಸಂಗಡ ನಾನು ಅವರ ಬಳಿಗೆ ಹೋದಾಗ ನುಡಿದುದು ಒಂದು ದಾರುಣ ಸನ್ನಿವೇಶದಲ್ಲಿ.

ನಾಲ್ವಡಿ ಕೃಷ್ಣರಾಜ ಒಡೆಯರು ಅರಮನೆ ಕಂಪನಿಯನ್ನು ಅರಮನೆಯ ಆಡಳಿತದಿಂದ ಪ್ರತ್ಯೇಕಿಸಿ ಒಂದು ಟ್ರಸ್ಟನ್ನು ಸ್ಥಾಪಿಸಿ ಕಂಪನಿಯನ್ನು ಆ ಟ್ರಸ್ಟಿಗೆ ಒಪ್ಪಿಸಿದರು. ಈ ಟ್ರಸ್ಟಿನ ವ್ಯವಸ್ಥಾಪಕರಿಗೂ ಸುಬ್ಬಣ್ಣ ರಾಚಪ್ಪನವರಿಗೂ ನಡುವೆ ಸ್ವಲ್ಪ ಭಿನ್ನಾಭಿಪ್ರಾಯಗಳು ತಲೆದೋರಿ ಸುಬ್ಬಣ್ಣ ಮತ್ತು ರಾಚಪ್ಪ ಕಂಪನಿಯಿಂದ ಹೊರಬಿದ್ದರು. ಸರದಾರ್ ಗೋಪಾಲರಾಜೇ ಅರಸಿನವರಿಗೆ ಇವರಿಬ್ಬರಲ್ಲಿ ತುಂಬ ವಿಶ್ವಾಸ ಸ್ನೇಹ. ಇವರಿಗೋಸ್ಕರವಾಗಿ ಬೇರೆ ಒಂದು ಕಂಪನಿಯನ್ನಾದರೂ ಕಟ್ಟಲು ಸಿದ್ಧರಾಗಿದ್ದರು. ಈ ಸಂದರ್ಭದಲ್ಲಿ ಯಾವುದೋ ಒಂದು ಧರ್ಮ ಕೆಲಸಕ್ಕಾಗಿ ಮುಂದಾಳುಗಳಾಗಿ ಹೊರಟಿದ್ದ ಸಾಧುಗಳೊಬ್ಬರು ಗೋಪಾಲರಾಜೇ ಅರಸಿನವರನ್ನು ಕಂಡು ಸಹಾಯ ಮಾಡಬೇಕೆಂದು ಕೇಳಿ ಕೊಂಡಿದ್ದರು. ಸುಬ್ಬಣ್ಣ ಮತ್ತು ರಾಚಪ್ಪನವರ ಜತೆಗೆ ವರದಾಚಾರ್ಯರ ಕಂಪನಿಯಿಂದ ಕೃಷ್ಣಮೂರ್ತಿರಾಯರು ಮೊದಲಾದ ನಾಲ್ಕೈದು ಮಂದಿ ನಟರನ್ನು ಕರೆದುಕೊಂಡು ಕೆಲವು ನಾಟಕಗಳಿಂದ ಸ್ವಾರಸ್ಯವಾದ ಭಾಗಗಳನ್ನು ಆರಿಸಿಕೊಂಡು ಮದ್ರಾಸಿನಲ್ಲಿ ಪ್ರದರ್ಶಿಸಿದರೆ ತುಂಬ ಹಣವನ್ನು ಸಂಪಾದಿಸ ಬಹುದು, ಸಾಧುಗಳಿಗೂ ಸಹಾಯ ಮಾಡಬಹುದು ಎಂದು ಅರಸಿನವರು ಯೋಚಿಸಿದರು. ಮಿತ್ರರಾದ ಮುನಿವೆಂಕಟಪ್ಪನವರ ಮುಂದೆ ತಮ್ಮ ಸಲಹೆ ಯನ್ನಿತ್ತರು. 'ಅತ್ಯುತ್ತಮವಾದ ಆಲೋಚನೆ' ಎಂದು ಬೆಂಬಲವಿತ್ತರು ಮುನಿ ವೆಂಕಟಪ್ಪನವರು. ಸರಿ ಗೋಪಾಲರಾಜೇ ಅರಸಿನವರೂ ಮುನಿವೆಂಕಟಪ್ಪನವರೂ ವರದಾಚಾರ್ಯರ ಬಳಿಗೆ ಹೋಗಿ ತಮ್ಮ ಉದ್ದೇಶವನ್ನು ವಿವರಿಸಿ ಕಂಪನಿಯ ನಾಲ್ಕೈದು ಮಂದಿ ನಟರನ್ನೂ ಅವರಿಗೆ ಬೇಕಾದ ಬಟ್ಟೆ ಬರೆ ಮುಂತಾದ ಸಲಕರಣೆಗಳನ್ನೂ ಉಪಯೋಗಿಸಿಕೊಳ್ಳಲು ಅನುಮತಿ ಕೊಡಬೇಕೆಂದು ಪ್ರಾರ್ಥಿ ಸಿದರು. ಅಗತ್ಯವಾಗಿ ಆಗಬಹುದೆಂದು ವರದಾಚಾರ್ಯರು ಒಪ್ಪಿಕೊಂಡರು. ಕೃಷ್ಣಮೂರ್ತಿರಾಯರು, ಶ್ಯಾಮರಾಯರು ಮುಂತಾದ ನಾಲ್ಕೈದು ಮಂದಿ ನಟರು ಯಜಮಾನರ ಅಪ್ಪಣೆ ಪಡೆದು ಮದ್ರಾಸಿಗೆ ತೆರಳಿದರು. 'ಮದ್ರಾಸಿಗೆ ಹೋಗಲು ನಮ್ಮನ್ನು ಚುನಾಯಿಸಿಕೊಳ್ಳಲಿಲ್ಲವಲ್ಲ' ಎಂದು ಉಳಿದವರಿಗೆ ಒಳಗೊಳಗೇ ಅಸಮಾಧಾನ. ಅವರಲ್ಲಿ ಮುಖ್ಯರಾದ ಒಬ್ಬಿಬ್ಬರು ವರದಾಚಾರ್ಯರ ಮನಸ್ಸಿಗೆ ಹುಳಿ ಹಿಂಡಲು ಹವಣಿಸಿದರು.

'ವರದಾಚಾರ್ಯರು ತಮ್ಮ ಕಂಪನಿಯಲ್ಲಿ ಇದುವರೆಗೂ ಬ್ರಾಹ್ಮಣರಲ್ಲದೆ ಬೇರೆ ಯಾವ ಜಾತಿಯ ನಟರಿಗೂ ಅವಕಾಶ ಕೊಡದಿದ್ದವರು ಈಗ ಕಂಪನಿಯ ಕೆಲವು ಆಟಗಾರರಿಗೆ ಬ್ರಾಹ್ಮಣೇತರರೊಡನೆ ಬೆರೆತು ಆಡಲು ಅವಕಾಶ ಕೊಟ್ಟ ದ್ದಾರೆ. ಇದು ಪರಮ ಅನ್ಯಾಯ' ಎಂದು ಊರಲ್ಲೆಲ್ಲ ಸಾರಿ ವರದಾಚಾರ್ಯರ

ಬಂಧುಮಿತ್ರರ ಮೂಲಕ ಅವರ ನಿರ್ಧಾರವನ್ನು ಬದಲಾಯಿಸಲು ವಿಶ್ವಪ್ರಯತ್ನ ನಡಸಿದರು. ಮೊದಮೊದಲ ವರದಾಚಾರ್ಯರು ಯಾರ ಮಾತಿಗೂ ಕಿವಿಗೊಡ ಲಿಲ್ಲ. ಆದರೆ ಬರಬರುತ್ತ ಸುತ್ತಮುತ್ತಲಿದ್ದವರ ಒತ್ತಾಯ ಬಲವಾಯಿತು. ವರದಾಚಾರ್ಯರ ಮನಸ್ಸು ಸಡಿಲವಾಯಿತು. ನಾಟಕದಲ್ಲಿ ಪಾರ್ಟು ಮಾಡ ಕೂಡದು. ಒಡನೆಯೇ ಮೈಸೂರಿಗೆ ಹಿಂದಿರುಗತಕ್ಕದ್ದು' ಎಂದು ಮದ್ರಾಸಿಗೆ ಟೆಲಿಗ್ರಾಮನ್ನು ಕಳುಹಿಸಿಯೇಬಿಟ್ಟರು!

ಆದರೆ ಮದ್ರಾಸಿನಲ್ಲಿ ಪ್ರದರ್ಶನಕ್ಕೆ ಸಕಲಸಿದ್ಧತೆಗಳೂ ಜರುಗಿದ್ದವು. ಮೂರು ದಿನಗಳು ನಾಟಕವಾಡುವ ಸಲುವಾಗಿ ನಾಟಕಮಂದಿರವನ್ನು ಬಾಡಿಗೆಗೆ ಗೊತ್ತುಮಾಡಿದ್ದಾಗಿತ್ತು. ಬೇಕಾದಹಾಗೆ ಜಾಹಿರಾತು ಸಹ ನಡೆದುಹೋಗಿತ್ತು. ಕೃಷ್ಣಮೂರ್ತಿರಾಯರಿಗೂ ಅವರ ಸಂಗಡಿಗರಿಗೂ ಕಳವಳಕ್ಕಿಟ್ಟುಕೊಂಡಿತು. 'ಹೊರಡಿ ಎಂದು ಅನುಮತಿ ಕೊಟ್ಟವರೂ ವರದಾಚಾರ್ಯರೇ, ಆಡಕೂಡದು ಹಿಂದಕ್ಕೆ ಬನ್ನಿ ಎಂದು ಹೇಳುತ್ತಿರುವವರೂ ಅವರೇ. ಇದರ ಅರ್ಥವೇನು? ಈಗ ನಾವು ಮಾಡತಕ್ಕದ್ದೇನು' ಎಂದು ಯೋಚಿಸುತ್ತಿರುವಾಗ ಗೋಪಾಲರಾಜೇ ಅರಸಿನವರೂ ಮುನಿವೆಂಕಟಪ್ಪನವರೂ ಅಲ್ಲಿಗೆ ದಯಮಾಡಿಸಿದರು. 'ಕೃಷ್ಣ ಮೂರ್ತಿರಾಯರೇ! ಸ್ವಲ್ಪವೂ ಯೋಚಿಸಬೇಡಿ, ಅಲ್ಲಿ ಏನು ನಡೆದಿದೆಯೋ ನಾವು ಕಾಣೆವು, ಇಲ್ಲಿ ನಡೆದಿರುವ ಏರ್ಪಾಡುಗಳೆಲ್ಲ ನಿಮಗೆ ತಿಳಿದೇ ಇದೆ. ಇಷ್ಟೆಲ್ಲ ಏರ್ಪಾಡುಗಳನ್ನು ಮಾಡಿ ನಾಟಕವನ್ನು ಆಡದೆ ನಿಲ್ಲಿಸುವುದಕ್ಕಾಗುವು ದಿಲ್ಲ. ನೀವು ನಾಟಕವಾಡುವುದರಿಂದ ಒಂದುವೇಳೆ ವರದಾಚಾರ್ಯರಿಗೆ ಅಸಮಾಧಾನವಾಗಿ ನಿಮ್ಮಗಳಿಗೇನಾದರೂ ತೊಂದರೆಯಾಗುವ ಪಕ್ಷಕ್ಕೆ ನಿಮ ಗೋಸ್ಕರವಾಗಿ ನಾವೇ ಒಂದು ಹೊಸ ನಾಟಕ ಸಂಸ್ಥೆಯನ್ನು ಕಟ್ಟುತ್ತೇವೆ. ಆದರ ಏರ್ಪಾಡುಗಳೆಲ್ಲ ಪೂರ್ತಿಯಾಗಿ ನಾಟಕಗಳನ್ನು ರಂಗಭೂಮಿಯ ಮೇಲೆ ತರುವವರೆಗೂ ನಿಮ್ಮ ಯೋಗಕ್ಷೇಮದ ಜವಾಬ್ದಾರಿ ನಮಗಿರಲಿ' ಎಂದು ಆಶ್ವಾಸನವಿತ್ತರು. ನಾಟಕಗಳು ಮದ್ರಾಸಿನಲ್ಲಿ ನಡದೇಹೋದವು. ಈ ಸುದ್ದಿ ಯನ್ನು ತಿಳಿದ ವರದಾಚಾರ್ಯರು 'ನನ್ನ ಮಾತಿಗೆ ಬೆಲೆ ಕೊಡಲಿಲ್ಲವಲ್ಲ ಇವರು' ಎಂಬ ಸಿಟ್ಟಿನಿಂದ ಮದ್ರಾಸಿಗೆ ಹೋಗಿದ್ದ ತಮ್ಮ ನಟರನ್ನೆಲ್ಲ ಕಂಪನಿ ಯಿಂದ ತೆಗೆದುಹಾಕಿಬಿಟ್ಟರು. ನೂರಾರು ಮಂದಿ ಹಿತೈಷಿಗಳು ವರದಾಚಾರ್ಯ ರನ್ನು ಕಂಡು 'ಈ ನಿರ್ಧಾರ ಅನುಚಿತ, ಉಭಯತಾಪಿ ಇದರಿಂದ ಲಾಭವಿಲ್ಲ. ನಾಟಕಕಲೆಯ ದೃಷ್ಟಿಯಿಂದಲಾದರೂ ನೀವೆಲ್ಲರೂ ಒಂದಾಗುವುದು ಒಳ್ಳೆಯದು' ಎಂದು ಮುಂತಾಗಿ ಪ್ರಾರ್ಥಿಸಿದರು.

ಈ ಸಂದರ್ಭದಲ್ಲೇ ನಾನೂ ಸುಬ್ಬಣ್ಣನವರೂ ಶೇಷಣ್ಣನವರೂ ವರದಾ

ಚಾರ್ಯರೊಡನೆ ಸಂಧಾನಕ್ಕಾಗಿ ಹೋಗಿದ್ದುದು. ವರದಾಚಾರ್ಯರ ಮನಸ್ಸು ಮಾತ್ರ ಬಂಡೆಯಂತೆ ಕದಲದೆ ಉಳಿಯಿತು. ಆಗಲೂ ಸಹ ಕೃಷ್ಣಮೂರ್ತಿ ರಾಯರ ಬಗ್ಗೆ ತಮಗಿದ್ದ ಗೌರವ ವಿಶ್ವಾಸಗಳನ್ನು ಹೃದಯ ಬಿಚ್ಚಿ ವ್ಯಕ್ತಪಡಿಸಿದರು. "ಆಚಾರ್ಯರೇ, ಕೃಷ್ಣಮೂರ್ತಿ ಹುಟ್ಟು ಕಲಾವಿದ. ಅಂತಹ ನಟ ದೊರೆಯುವುದು ಬಹಳ ವಿರಳ. ಎಂತೆಂತಹ ಸಂದರ್ಭಗಳಲ್ಲಿ ನಮ್ಮ ಕಂಪನಿಯ ಸ್ಥಾನಮಾನಗಳನ್ನು ಆತ ಕಾಪಾಡಿದ್ದಾನೆ ಎಂಬುದು ಅನೇಕರಿಗೆ ತಿಳಿದಿರಲಾರದು. ಈಚೆಗೆ ಮಧುರೆಯಲ್ಲಿ ನಡೆದ ಅಂಥ ಒಂದು ಸಂದರ್ಭವನ್ನು ಕೇಳಿ. ರಾತ್ರಿ ಪ್ರಹ್ಲಾದ ಚರಿತ್ರೆ ನಾಟಕ. ಮಿತ್ರರೊಬ್ಬರ ಆಹ್ವಾನದ ಮೇಲೆ ಅರವತ್ತು ಮೈಲಿ ದೂರದಲ್ಲಿದ್ದ ಅವರ ಜಹಗೀರಿಗೆ ಕಾರಿನಲ್ಲಿ ಬೆಳಗ್ಗೆ ಹೊರಟೆದ್ದೆ. ಸಂಜೆ ಐದು ಘಂಟೆಗೆ ಅಲ್ಲಿಂದ ಹೊರಟರೂ ನಾಟಕ ಪ್ರಾರಂಭವಾಗುವ ವೇಳೆಗೆ ಮಧುರೆಗೆ ಹಿಂದಿರುಗಬಹುದೆಂದು ಯೋಚಿಸಿದ್ದೆವು. ಅದೇ ರೀತಿ ಸಂಜೆ ಐದು ಐದೂವರೆಯ ಸಮಯಕ್ಕೆ ಅಲ್ಲಿಂದ ಹೊರಟೆವು. ಹೊರಡುವುದಕ್ಕೆ ಮೊದಲು ಕಂಪನಿಗೆ ಒಂದು ತಂತಿಯನ್ನೂ ಕಳುಹಿಸಿದೆ. ಸ್ವಲ್ಪ ದೂರ ಬರುವಷ್ಟರಲ್ಲಿ ಕಾರಿನ ಒಂದು ಟೈರು ಒಡೆದು ಕಾರು ನಿಂತಿತು. ಅದನ್ನು ಸರಿಪಡಿಸಿಕೊಂಡು ಹೊರಡುವ ಹೊತ್ತಿಗೆ ಏಳೂವರೆ ಘಂಟೆಯಾಯಿತು. ಮತ್ತೆ ಹೊರಟೆವು. ಸುಮಾರು ಎಂಟು ಹತ್ತು ಮೈಲಿಗಳು ಬಂದಮೇಲೆ ಪೆಟ್ರೋಲು ಮುಗಿದು ದಾರಿಯ ಮಧ್ಯೆ ಕಾರು ಮತ್ತೆ ಮುಷ್ಕರ ಹೂಡಿತು. ಹೀಗಾಗಿ ನಾನು ಸಕಾಲದಲ್ಲಿ ಮಧುರೆಗೆ ಬರಲು ಸಾಧ್ಯವೇ ಆಗಲಿಲ್ಲ. 'ಸರಿ ನಾಟಕದ ಅವಸ್ಥೆ ಮುಗಿಯಿತು' ಎಂದುಕೊಂಡೆ. ಮಧುರೆಯನ್ನು ತಲುಪಿದಾಗ ರಾತ್ರಿ ಸುಮಾರು ಒಂದು ಘಂಟೆಯ ಸಮಯ. 'ನಾಟಕವನ್ನು ರದ್ದುಮಾಡಿ ಎಲ್ಲರೂ ಹಾಯಾಗಿ ಮಲಗಿರುತ್ತಾರೆ' ಎಂದು ಯೋಚಿಸುತ್ತ ಕಂಪನಿ ಮನೆಗೆ ಬಂದೆ. ಬೀಗಹಾಕಿತ್ತು. ಆಶ್ಚರ್ಯಭರಿತನಾಗಿ ನಾಟಕಶಾಲೆಯ ಕಡೆ ಸರಸರ ನಡದೆ. ಕಿಕ್ಕಿರಿದಿತ್ತು ಜನ. ನಾಟಕ ಮುಗಿಯುವುದಕ್ಕೆ ಒಂದೆರಡು ಪ್ರವೇಶಗಳು ಮಾತ್ರ ಉಳಿದಿದ್ದವು. ಗ್ರೀನ್‌ರೂಮಿಗೆ ನುಗ್ಗಿದೆ. ನಡೆದ ಸಂಗತಿಯೆಲ್ಲ ತಿಳಿಯಿತು.

"ನಾನು ಮಾಡಬೇಕಾಗಿದ್ದ ಪಾತ್ರವನ್ನು ನನಗಿಂತಲೂ ಚೆನ್ನಾಗಿ ಮಾಡಿ ಕೃಷ್ಣಮೂರ್ತಿರಾಯರು ಕಂಪನಿಯ ಗೌರವವನ್ನು ಉಳಿಸಿದ್ದರು. ನಾಟಕವೆಲ್ಲ ಮುಗಿದಮೇಲೆ ನಡೆದ ಸಂದರ್ಭವನ್ನೆಲ್ಲ ಪ್ರೇಕ್ಷಕರಿಗೆ ನಿವೇದಿಸಿ ಅಂದಿನ ನಾಟಕದಲ್ಲಿ ಪಾತ್ರ ತೆಗೆದುಕೊಳ್ಳಲು ಅನಿವಾರ್ಯವಾಗಿ ಸಾಧ್ಯವಾಗದೆ ಹೋದುದಕ್ಕೆ ಕ್ಷಮಾಪಣೆ ಬೇಡಿದೆ. ಅಲ್ಲಿಯ ವಕೀಲಪ್ರಮುಖರೊಬ್ಬರು ರಂಗಭೂಮಿಯ ಮೇಲೆ ಬಂದು 'ಇಂದು ವರದಾಚಾರ್ಯರು ನಾಟಕಕ್ಕೆ ಬರಲಾಗದೆ ಇದ್ದುದೂ

ಒಂದು ವಿಧದಲ್ಲಿ ಒಳ್ಳೆಯದೇ ಆಯಿತು ಎನ್ನಬೇಕು. ವರದಾಚಾರ್ಯರ ಕಂಪನಿಯಲ್ಲಿ ಎಲ್ಲರೂ ವರದಾಚಾರ್ಯರಷ್ಟೇ ಸಮರ್ಥರು ನಿಪುಣರು ಎನ್ನುವ ವಿಷಯ ಇಂದು ಬೆಳಕಿಗೆ ಬಂತು' ಎಂದು ಎಲ್ಲ ಕಲಾವಿದರನ್ನೂ ಶ್ಲಾಘಿಸಿದರು. ಈ ಗೌರವ ಕೃಷ್ಣಮೂರ್ತಿಗೇ ಪೂರ್ಣವಾಗಿ ಸಲ್ಲಬೇಕು" ಎಂದು ಮುಕ್ತಕಂಠದಿಂದ ಕೃಷ್ಣಮೂರ್ತಿರಾಯರ ಗುಣಗಾನ ಮಾಡಿದರು ವರದಾಚಾರ್ಯರು. ಇಷ್ಟಾದರೂ ಹಿಡಿದ ಪಟ್ಟನ್ನು ಬಿಡಲೇ ಇಲ್ಲ. ಆಡಿದ ಮಾತಿನಂತೆ ಗೋಪಾಲರಾಜೇ ಅರಸಿನವರೂ ಮುನಿವೆಂಕಟಪ್ಪನವರೂ ಹೊಸ ನಾಟಕ ಸಂಸ್ಥೆಯನ್ನು ಕಟ್ಟುವ ಉದ್ಯಮದಲ್ಲಿ ತೊಡಗಿದರು. 'ಶ್ರೀ ಚಾಮುಂಡೇಶ್ವರೀ ಕರ್ಣಾಟಕ ನಾಟಕ ಸಭೆ' ಎಂಬ ಲಿಮಿಟೆಡ್ ಕಂಪನಿಯ ರಚನೆಯಾಯಿತು.

ವರದಾಚಾರ್ಯರ ಕಂಪನಿಯ ಕಡೆಯ ದಿನಗಳು ಈ ವೇಳೆಗಾಗಲೇ ಕಣ್ಣಿಗೆ ಕಾಣಿಸತೊಡಗಿದವು. ಶಾರದಾ ಥಿಯೇಟರ್ಸ್ ಕಂಪನಿಯೆಂಬ ಇನ್ನೊಂದು ಲಿಮಿಟೆಡ್ ಸಂಸ್ಥೆಯನ್ನು ಪ್ರಾರಂಭಿಸಿ ಅಳಿದುಳಿದಿದ್ದ ವರದಾಚಾರ್ಯರ ಕಂಪನಿಯನ್ನು ಅದರಲ್ಲಿ ಸೇರಿಸಿಕೊಂಡರು. ಈ ಹೊಸ ಲಿಮಿಟೆಡ್ ಕಂಪನಿ ಆಶ್ರಯದಲ್ಲಿ ಮದ್ರಾಸಿನಲ್ಲಿ ಕೆಲವು ನಾಟಕಗಳಾದುವು. ಕಂಪನಿಗೆ ಬಹಳ ನಷ್ಟವಾಗಿ ಹುಟ್ಟಿದ ಕೆಲವೇ ದಿನಗಳಲ್ಲಿ ಶಾರದಾ ಥಿಯೇಟರ್ಸ್ ಕಂಪನಿಯೂ ಅಳಿದುಹೋಯಿತು. ಇದಾದ ತರುಣದಲ್ಲೇ ಶ್ರೇಷ್ಠ ಕಲಾವಿದ ವರದಾಚಾರ್ಯರು ಕಣ್ಮರೆಯಾದರು.

೬. ಕೇಳಿದ ಕೆಲವು ಕಥೆಗಳು

ಪಗಡೆ ಇಸ್ಪೀಟು ಚದುರಂಗ ಗಂಜೀಪು ಇವೇ ಆಗಿನ ಆಟಪಾಟಗಳು. ಬಕ್ಷಿ ಚಾಮಪ್ಪಾಜಿ, ಕಾಂತರಾಜೇ ಅರಸಿನವರು, ಷಹ ನಂಜಪ್ಪನವರು, ನಂಜುಂಡಶಾಸ್ತ್ರಿಗಳು, (ಪ್ರೋಕ್ರಿ) ಶ್ರೀಕಂಠಯ್ಯ, ಗೋಮಟಂ ಶ್ರೀನಿವಾಸಾ ಚಾರ್ಯ, ಕರವಟ್ಟಿ ಶಿಂಗ್ರಾಚಾರ್ಯರು, ಇವರೇ ಮೊದಲಾದವರು ಚದುರಂಗದ ಆಟದಲ್ಲಿ ನಿಸ್ಸೀಮರು. ಬಕ್ಷಿ ಚಾಮಪ್ಪಾಜಿಯವರ ಕುಮಾರಿ ಇವರೆಲ್ಲರನ್ನೂ ಮೀರಿಸಿದ್ದರು.

ಕ್ಲೋಸ್‌ಪೇಟೆ ಅಂದರೆ ಈಗಿನ ರಾಮನಗರದಲ್ಲಿ ಆಗ್ಗೆ ಒಂದು ಮಿಲಿಟರಿ ಕ್ಯಾಂಪಿದ್ದಿತು. ಕಾಬೂಲ್ ದೇಶದಿಂದ ಕುದುರೆಗಳನ್ನು ಮಾರುವವನೊಬ್ಬ ಕುದುರೆಗಳನ್ನು ವಿಕ್ರಯಮಾಡುವ ಸಲುವಾಗಿ ಕ್ಲೋಸ್‌ಪೇಟೆಗೆ ಬಂದ. ಆತನೂ ಚದುರಂಗದಲ್ಲಿ ಬಲುಗಟ್ಟಿಗ. ಕ್ಯಾಂಪಿನಲ್ಲಿದ್ದ ಸೈನಿಕರಲ್ಲೊಬ್ಬಾತ ಬಹಳ ಚೆನ್ನಾಗಿ ಚದುರಂಗವನ್ನಾಡುತ್ತಾನೆ ಎಂಬ ಸುದ್ದಿ ಕಾಬೂಲಿನ ಕುದುರೆಯ ಮಾರಾಟಗಾರನಿಗೆ ತಿಳಿಯಿತು. ಹೇಗೋ ಅವನೊಡನೆ ಆಟವಾಡಲು ಅವಕಾಶ ಕಲ್ಪಿಸಿಕೊಂಡ. ಇಬ್ಬರು ಆಟಗಾರರ ನಡುವೆ ಪಂದ್ಯಗಳು ನಡೆದವು. ಸೈನಿಕರ ಕೈಚಳಕವನ್ನು ಕಂಡು ಬೆರಗಾದ ಮಾರಾಟಗಾರ 'ಅದ್ಭುತ, ನಿನ್ನ ಆಟ' ಎಂದು ಕೊಂಡಾಡಿದ. 'ಅಯ್ಯೋ ಹುಚ್ಚ! ನನ್ನ ಆಟಕ್ಕೇ ನೀನು ಇಷ್ಟು ಮರುಳಾದೆಯಲ್ಲ! ನಿನಗೆ ನಿಜವಾಗಿಯೂ ಚದುರಂಗದಲ್ಲಿ ಆಸಕ್ತಿ ಯಿದ್ದು ಅದ್ಭುತವಾದ ಆಟವನ್ನು ನೋಡಬೇಕೆಂಬ ಆಸೆಯಿದ್ದರೆ ಮೈಸೂರಿಗೆ ಹೋಗಿ ಬಕ್ಷಿ ಚಾಮಪ್ಪಾಜಿಯವರ ಮಗಳ ಆಟವನ್ನು ನೋಡಬೇಕು. ಆದರೆ ಆಕೆಗೆ ಘೋಷ. ಆದ್ದರಿಂದ ಆಕೆಯೊಡನೆ ಆಟವಾಡುವುದು ಸಾಧ್ಯವಾಗ ಲಾರದು! ನೋಡು ಪ್ರಯತ್ನಮಾಡು. ಒಂದು ವೇಳೆ ನಿನ್ನ ಪ್ರಯತ್ನವೇನಾ ದರೂ ಕೈಗೂಡಿದರೆ ನಿನ್ನ ಜನ್ಮದಲ್ಲೇ ನೀನು ನೋಡರಿಯದ ಚದುರಂಗವನ್ನು ನೋಡಿ ಆನಂದಿಸುವೆ' ಎಂದ ಆ ಸೈನಿಕ.

ಮಾರಾಟಗಾರನಿಗೆ ಕುತೂಹಲ ಕೆರಳಿತು. ಹೇಗಾದರೂ ಮಾಡಿ ಅರಸು ಮಗಳ ಆಟವನ್ನು ನೋಡಬೇಕೆಂಬ ಹೆಬ್ಬಯಕೆಯಾಯಿತು. ಮೈಸೂರಿಗೆ ಬಂದ. ಪ್ರತಿದಿನ ಬೆಳಗ್ಗೆ ಬಸಪ್ಪಾಜಿಯವರ ಬಂಗಲೆಯ ಮುಂದೆ ನಿಂತು ಬಸಪ್ಪಾಜಿಯವರು ಬಂಗಲೆಯಿಂದ ಹೊರಗಡೆ ಹೊರಡುವಾಗ ಅವರಿಗೆ ಕೈಮುಗಿದು ಹಿಂದಿರುಗುತ್ತಿದ್ದ. ಹೀಗೆ ನಾಲ್ಕಾರು ದಿನಗಳು ಕಳೆದಮೇಲೆ

ಬಸಪ್ಪಾಜಿಯವರು ಮೂರಾಟಗಾರನನ್ನು 'ಅಯ್ಯಾ! ಯಾರು ನೀನು? ಏನಾಗ ಬೇಕು? ಹೀಗೇಕೆ ಪ್ರತಿದಿನ ಕೈಮುಗಿದು ಹೋಗುತ್ತಿದ್ದೀಯೆ?' ಎಂದು ಕೇಳಿದರು. ತನ್ನ ಹೆಬ್ಬಯಕೆಯನ್ನು ಆತ ಚಾಮಪ್ಪಾಜಿಯವರಲ್ಲಿ ವಿಜ್ಞಾಪಿಸಿ ಕೊಂಡ. 'ನಮ್ಮಗಳಲ್ಲಿ ಘೋಷಾ ಪದ್ಧತಿಯಿರುವುದರಿಂದ ಎಷ್ಟರಮಟ್ಟಿಗೆ ನಿನ್ನ ಕೋರಿಕೆಯನ್ನು ನಡಸುವುದಕ್ಕಾಗುತ್ತದೆಯೋ ಹೇಳಲಾರೆ. ಆದರೂ ನನ್ನ ಮಗಳಲ್ಲಿ ಈ ವಿಷಯವನ್ನು ಪ್ರಸ್ತಾಪಮಾಡುತ್ತೇನೆ. ನಾಳೆ ಬೆಳಗ್ಗೆ ಬಂದರೆ ಆಕೆಯ ಅಭಿಪ್ರಾಯವನ್ನು ತಿಳಿಸುತ್ತೇನೆ' ಎಂದು ಹೇಳಿ ಚಾಮಪ್ಪಾಜಿ ಆತ ನನ್ನು ಕಳುಹಿಸಿಕೊಟ್ಟರು. ಒಳಗೆ ಬಂದು ನಡೆದ ಸಂಗತಿಯೆಲ್ಲವನ್ನೂ ಮಗಳಿಗೆ ತಿಳಿಸಿದರು. 'ಅಗತ್ಯವಾಗಿ ಆಗಲಿ, ಅಪ್ಪಾಜಿ. ನಾಳೆಯ ಮಧ್ಯಾಹ್ನವೇ ಪಂದ್ಯ ವನ್ನು ಆಡಲು ನಾನು ಸಿದ್ಧ. ನಮ್ಮಿಬ್ಬರ ಮಧ್ಯೆ ಒಂದು ಪರದೆಯನ್ನು ಹಾಕಿಸಿಕೊಡಿ. ಪರದೆಯ ಮಧ್ಯೆ ಒಂದು ಸಣ್ಣ ಕಿಂಡಿಯಿರಲಿ. ಅದರ ಮೂಲಕ ನಾನು ಕಾಯಿಗಳನ್ನು ನೋಡಿಕೊಂಡು ಯಾವ ಕಾಯಿಯನ್ನು ನಡಸಬೇಕೆಂದು ತಿಳಿಸುತ್ತೇನೆ. ನನ್ನ ಪರವಾಗಿ ನೀವೇ ಕಾಯಿಗಳನ್ನು ನಡಸಿದರೆ ಆಯಿತು' ಎಂದರು ಆಕೆ. ಮರುದಿನ ಬೆಳಗ್ಗೆ ಮೂರಾಟಗಾರ ಹಾಜರಾದ. 'ಮಧ್ಯಾಹ್ನ ಪಂದ್ಯವನ್ನಾಡಲು ನನ್ನ ಮಗಳು ಸಿದ್ಧ' ಎಂದರು ಚಾಮಪ್ಪಾಜಿ. ಆತನ ಸಂತೋಷಕ್ಕೆ ಪಾರವೇ ಇಲ್ಲ.

ಮಧ್ಯಾಹ್ನ ಗೊತ್ತಾದ ವೇಳೆಗೆ ಸರಿಯಾಗಿ ಹಾಜರಾದ. ಪಂದ್ಯಕ್ಕೆ ಎಲ್ಲ ಸಿದ್ಧತೆಗಳೂ ನಡೆದಿದ್ದವು. ಆತ ಅರಸುಕುಮಾರಿಗೆ ಕೈಮುಗಿದು ಆಟಕ್ಕೆ ಕುಳಿತ. ಆಟ ಮೊದಲಾಗುವ ಮೊದಲೇ 'ಯಾವ ಪ್ಯಾದೆಯಿಂದ ಅವರ ಅರಸ ನನ್ನು ಹಿಡಿಸಬೇಕು ಕೇಳಿ ಅವರನ್ನು' ಎಂದು ಅಪ್ಪಾಜಿಗೆ ಹೇಳಿದರು ಆಕೆ. ಅದನ್ನು ಕೇಳಿಯೇ ಅರ್ಧ ಜೀವ ಹಾರಿಹೋಯಿತು ಮೂರಾಟಗಾರನಿಗೆ. ಯಾವುದೋ ಒಂದು ಪ್ಯಾದೆಯನ್ನು ತೋರಿಸಿದ. 'ಒಳ್ಳೆಯದು' ಎಂದರು ಅರಸು ಮಗಳು. ಕೇವಲ ನಾಲ್ಕಾರು ಕಾಯಿಗಳನ್ನು ನಡಸುವಷ್ಟರಲ್ಲೇ, ಆತ ತೋರಿ ಸಿದ್ದ ಪ್ಯಾದೆಯನ್ನು ಮುಂದೆಮಾಡಿಕೊಂಡು 'ಸಿಕ್ಕಿಬಿದ್ದ ನಿಮ್ಮ ರಾಜ' ಎಂದರು ಆಕೆ. ಬೆರಗಾದ ಆ ಮೂರಾಟಗಾರ. 'ನನ್ನ ಜನ್ಮದಲ್ಲೇ ಇಂಥ ಸೋಲನ್ನು ನಾನು ಅನುಭವಿಸಿಲ್ಲ, ಎಂತಹ ಚಮತ್ಕಾರ' ಎಂದು ಹೇಳುತ್ತ ಆಕೆಗೆ ಕೈಮುಗಿದು ಮೇಲೆದ್ದ!

ಉತ್ತರದೇಶದಿಂದ ಜ್ಯೋತಿಷ್ಕರೊಬ್ಬರು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರಿಗೆ ಬಂದಿದ್ದರಂತೆ. ಅವರ ಹೆಸರು ಏನು ಎಂದು ಯಾರಿಗೂ

ತಿಳಿಯದು, ಎಲ್ಲರೂ ಅವರನ್ನು 'ಮಹಾಪುರುಷರು' ಎಂದು ಕರೆಯುತ್ತಿದ್ದರು. ಜ್ಯೋತಿಷ್ಯದಲ್ಲಿ ಅವರಿಗಿದ್ದ ಅಸಾಧಾರಣ ಪಾಂಡಿತ್ಯದ ವಿಷಯ ಕಿವಿಯಿಂದ ಕಿವಿಗೆ ಹರಡಿ ದೊರೆಗಳಿಗೂ ತಿಳಿಯಿತು. ಮುಮ್ಮಡಿ ಕೃಷ್ಣರಾಜ ಒಡೆಯರೇ ಸ್ವಯಂ ದೊಡ್ಡ ವಿದ್ವಾಂಸರು ಜ್ಯೋತಿಷ್ಯದಲ್ಲಿ. ಮಹಾಪುರುಷರ ಜ್ಞಾನದ ಆಳ ವನ್ನು ತಿಳಿಯಬೇಕೆಂಬ ಅಪೇಕ್ಷೆಯಾಯಿತಂತೆ ಮಹಾರಾಜರಿಗೆ. ಕರಿಕಂಬಳಿ ಯೊಂದನ್ನು ಹೊದೆದುಕೊಂಡು ತಾವು ಮಹಾರಾಜರು ಎಂಬ ಸುಳಿವು ಸಹ ಕೊಡದಂತೆ ವೇಷ ಬದಲಾಯಿಸಿಕೊಂಡು ಆ ಜ್ಯೋತಿಷ್ಕರ ಬಳಿಗೆ ಹೋಗಿ 'ಸ್ವಲ್ಪ ಈ ಕೈ ನೋಡಿ ಬುದ್ಧಿ' ಎಂದು ತಮ್ಮ ಬಲಗೈಯನ್ನು ಮುಂದೆ ಮಾಡಿದರಂತೆ ಪ್ರಭುಗಳು. ಅರೆಕ್ಷಣ ಹಸ್ತರೇಖೆಗಳನ್ನು ನೋಡಿ 'ಇದು ಕಟ್ಟಿಗೆ ಮಾರಿ ಜೀವಿಸುವ ಕೈ' ಎಂದರು ಅವರು. 'ಓಹೋ! ಹಾಗೋ! ಸರಿ!' ಎಂದು ದೊರೆಗಳು ಅರಮನೆಗೆ ತೆರಳಿದರು. 'ನೋಡಿದಿರಾ! ಮಹಾಸ್ವಾಮಿ! ಎಲ್ಲ ಬರಿಯ ಬೂಟಾಟಿಕೆ!' ಎಂದರು ದೊರೆಗಳ ಪರಿವಾರದವರು. ಮಾರನೆಯ ದಿನ ದೊರೆಗಳು ತಮ್ಮ ಪೋಷಾಕನ್ನು ಧರಿಸಿಕೊಂಡು ಭದ್ರಾಸನದಲ್ಲಿ ಕುಳಿತು ಆ ಜ್ಯೋತಿಷ್ಕರಿಗೆ ಅರಮನೆಗೆ ಬರುವಂತೆ ಹೇಳಿ ಕಳುಹಿಸಿದರು. 'ಈ ಹಸ್ತ ವನ್ನು ಸ್ವಲ್ಪ ನೋಡೋಣವಾಗಲಿ' ಎಂದು ಪ್ರಭುಗಳು ಮತ್ತೆ ಅಂಗೈಯನ್ನು ಮುಂದೆ ಮಾಡಿದರು. ನೋಡುವುದೇ ತಡ 'ಈ ಹಸ್ತವನ್ನು ನಿನ್ನೆಯೇ ನೋಡಿ ಹೇಳಿದ್ದೇನಲ್ಲ! ಇದು ಕಟ್ಟಿಗೆ ಮಾರಿ ಜೀವಿಸುವ ಕೈ' ಎಂದರಂತೆ! ದೊರೆಗಳ ಪರಿವಾರದವರು ಅಟ್ಟಹಾಸದ ನಗುಮುಖದಿಂದ 'ಮಹಾಪುರುಷರೇ ಇವರು ಯಾರು ಎಂಬುದು ತಮಗೆ ತಿಳಿದಿದೆಯೋ!' ಎಂದು ಕೇಳಿದರು. 'ಇವರು ಯಾರು ಎಂದು ತಿಳಿಸಬೇಕೆ? ಹಾಗಾದರೆ ಸ್ವಲ್ಪ ಜೇನುಮೇಣ ವನ್ನೂ ಒಂದು ಕೆಂಡವನ್ನೂ ತರಿಸಿಕೊಡಿ' ಎಂದರು ಅವರು. ಮರುಕ್ಷಣದಲ್ಲಿ ಎಲ್ಲವೂ ಸಿದ್ಧವಾಯಿತು. ಮೇಣವನ್ನು ಕೆಂಡದಮೇಲಿಟ್ಟು ಕಾಯಿಸಿ ಅದರಿಂದ ಎರಡು ಬಿಲ್ಲೆಗಳನ್ನು ಮಾಡಿ 'ಮಹಾರಾಜರು ಸ್ವಲ್ಪ ಬಾಯಿ ತೆರೆಯಬೇಕು' ಎಂದರು. ಮಹಾರಾಜರ ಎರಡು ದವಡೆಯೊಳಗೂ ಆ ಮೇಣದಬಿಲ್ಲೆಗಳನ್ನು ಒತ್ತಿ ಹೊರಗೆ ತೆಗೆದರು. ಒಂದೊಂದರ ಮೇಲೂ ಒಂದೊಂದು ವಿಷ್ಣು ಚಕ್ರದ ಗುರುತಿದ್ದಿತು. 'ಇಲ್ಲಿ ಪರಾಂಬರಿಸಬೇಕು ಪ್ರಭುಗಳು. ತಮ್ಮನ್ನು ಸಿಂಹಾಸನಾಧೀಶ್ವರರನ್ನಾಗಿ ಮಾಡಿರುವುದು ಈ ವಿಷ್ಣುಚಕ್ರಗಳು! ಹಸ್ತ ರೇಖೆಯಲ್ಲ' ಎಂದರು. ಎಲ್ಲರೂ ಬೆರಗಾದರು. 'ಮಹಾಪುರುಷರ ದರ್ಶನ ಲಾಭದಿಂದ ಪುನೀತನಾದೆ' ಎಂದು ಪ್ರಣಾಮಮಾಡಿದರು ಕೃಷ್ಣರಾಜ ಒಡೆಯರು.

ವೀಣೆ ಸಾಂಬಯ್ಯನವರು ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದ ಹಿರಿಯ ವಿದ್ವಾಂಸರು. ದೊರೆಗಳು ಬಿಟ್ಟಿದ್ದಂತೆಯೇ ಸಾಂಬಯ್ಯನವರೂ ಗಿರಲುಮೀಸೆಯನ್ನು ಬೆಳಸಿದ್ದರು. ಅಭ್ಯಾಸಬಲದ ಮೇಲೆ ದೊರೆಗಳ ಸನ್ನಿಧಿಯಲ್ಲಿದ್ದಾಗಲೂ ಸಾಂಬಯ್ಯನವರು ಮೀಸೆಯನ್ನು ಹುರಿಮಾಡಿಕೊಳ್ಳುತ್ತಿದ್ದರಂತೆ. 'ನನ್ನೆದುರಿನಲ್ಲೇ ಸಾಂಬಯ್ಯ ಮೀಸೆಯನ್ನು ತಿರುವುತ್ತಾರಲ್ಲ ಏನು ಮಾಡುವುದು?' ಎಂದು ಕೃಷ್ಣರಾಜ ಒಡೆಯರು ಪೇಚಾಡುತ್ತಿದ್ದರಂತೆ. 'ಹೇಗಾದರೂ ಮಾಡಿ ಸಾಂಬಯ್ಯನವರು ಒಂದು ಯಾಗವನ್ನು ಮಾಡುವಂತೆ ಮಾಡಿದರೆ ಯಾಗದೀಕ್ಷೆಯನ್ನು ಕೊಡುವ ಸಂದರ್ಭದಲ್ಲಿ ಅವರ ಗಡ್ಡಮೀಸೆಗಳನ್ನು ತೆಗೆದೇ ತೆಗೆಯುತ್ತಾರೆ. ತಮ್ಮ ಮುಂದೆ ಅವರು ಮೀಸೆ ಹುರಿಮಾಡುವುದು ತಾನಾಗಿಯೇ ತಪ್ಪುತ್ತದೆ' ಎಂದು ಹತ್ತಿರವಿದ್ದವರು ಪ್ರಭುಗಳಿಗೆ ಸೂಚಿಸಿದರಂತೆ. 'ಸೊಗಸಾದ ಉಪಾಯ' ಎಂದರು ಪ್ರಭುಗಳು. 'ಆದರೆ ಸಾಂಬಯ್ಯನವರನ್ನು ಈ ವಿಷಯದಲ್ಲಿ ಒಪ್ಪಿಸುವುದು ಹೇಗೆ?' ಎಂಬುದು ಮುಂದಿನ ತೊಡಕಾಯಿತು. ಅದಕ್ಕೂ ಉಪಾಯವನ್ನು ಹೇಳಿಕೊಟ್ಟರು ದೊರೆಗಳ ಆಪ್ತರು. 'ಸಾಂಬಯ್ಯನವರಿಗೆ ಸ್ವಲ್ಪ ಸಾಲಸೋಲವಿದೆ. ಅದನ್ನು ತೀರಿಸಿ ಸಾಂಬಯ್ಯನವರಿಗೆ ಸ್ವಲ್ಪ ಹೊಗಳಿಬಿಟ್ಟರೆ ಯಾವ ಕೆಲಸವನ್ನು ಬೇಕಾದರೂ ಅವರಿಂದ ಸುಲಭವಾಗಿ ಮಾಡಿಸಿಬಿಡಬಹುದು' ಎಂದು ದೊರೆಗಳಿಗೆ ಸಲಹೆ ಮಾಡಿದರು.

ಮಾರನೆಯ ದಿನ ಸಾಂಬಯ್ಯನವರೊಡನೆ ಮಾತುಕತೆಯಾಡುತ್ತಿರುವ ಸಮಯದಲ್ಲಿ ದೊರೆಗಳು 'ಏನು ಸಾಂಬಯ್ಯನವರೇ ನಿಮಗೆ ಸ್ವಲ್ಪ ಸಾಲವಿದೆ ಅಂತ ಕೇಳಿದೆ ನಿಜವೇ' ಎಂದರು. 'ಹೌದು ಪ್ರಭು! ಅಲ್ಲಿ ಇಲ್ಲಿ ಸ್ವಲ್ಪ ಸಾಲ ಮಾಡಿದ್ದೀನಿ. ಏನೋ ಸಂಸಾರ ತಾಪತ್ರಯ' ಎಂದರು ಸಾಂಬಯ್ಯ. ಛೇ! ಎಲ್ಲಾದರೂ ಉಂಟೆ? ತಮ್ಮಂತಹ ಘನವಿದ್ವಾಂಸರಿಗೆ, ಸಾತ್ವಿಕಶಿರೋಮಣಿಗಳಿಗೆ ಸಾಲವೆಂದರೇನು? ಅದರಲ್ಲೂ ನಮ್ಮ ಆಸ್ಥಾನದಲ್ಲಿದ್ದುಕೊಂಡು?' ಎಂದು ಪ್ರಭುಗಳು ಸಾಂಬಯ್ಯನವರಲ್ಲಿ ಬಹಳ ಅನುತಾಪ ತೋರಿದರು. ಹಿಗ್ಗಿ ಹೀರೇಕಾಯಾದರು ಸಾಂಬಯ್ಯ. ಸಾಂಬಯ್ಯನವರಿಂದ ಸಾಲದ ವಿವರಗಳನ್ನು ತಿಳಿದು ದೊರೆಗಳು ಸಾಂಬಯ್ಯನವರ ಸಾಲವನ್ನೆಲ್ಲ ಅರಮನೆಯಿಂದ ತೀರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅಪ್ಪಣೆ ಮಾಡಿದರು. ಇದರ ಗುಟ್ಟನ್ನು ತಿಳಿಯದ ಸಾಂಬಯ್ಯ ಧರ್ಮಪ್ರಭುವಿನ ಉದಾರಹೃದಯವನ್ನು ಮನಸಾರ ಕೊಂಡಾಡಿದರು.

ಇಷ್ಟಾದ ನಾಲ್ಕಾರು ದಿನಗಳ ಮೇಲೆ ಪ್ರಭುಗಳು ಸಾಂಬಯ್ಯನವರನ್ನು

ಬರಮಾಡಿಕೊಂಡು ಯಾಗದ ವಿಷಯವನ್ನು ಪ್ರಸ್ತಾಪಿಸಿದರು. 'ತಾವು ಬಹಳ ಆಚಾರಪರರು, ನೇಮನಿಷ್ಠರು. ತಮ್ಮಿಂದಲೇ ಈ ಯಾಗ ನಡೆಯಬೇಕೆಂದು ನಮ್ಮ ಅಭಿಲಾಷೆ. ಅದಕ್ಕೆ ಆಗುವ ವೆಚ್ಚವೆಲ್ಲವನ್ನೂ ನಾವು ವಹಿಸಿಕೊಳ್ಳುತ್ತೇವೆ. ಬೇಕಾದ ಏರ್ಪಾಡುಗಳೆಲ್ಲವನ್ನೂ ಅರಮನೆಯಿಂದಲೇ ಮಾಡಿಸಿಕೊಡುತ್ತೇವೆ. ತಾವು ದೊಡ್ಡ ಮನಸ್ಸುಮಾಡಿ ಈ ಮಹತ್ಕಾರ್ಯವನ್ನು ಆಗಮಾಡಿಸಬೇಕು' ಎಂದರು ದೊರೆಗಳು. 'ಇದಕ್ಕಿಂತ ಪುಣ್ಯಕೆಲಸವುಂಟೆ ಪ್ರಭು? ಅಗತ್ಯವಾಗಿ ಆಗಲಿ' ಎಂದರು ಸಾಂಬಯ್ಯನವರು. ಸರಿ, ಸಕಲ ಸಿದ್ಧತೆಗಳೂ ನಡೆದವು. ಯಾಗ ಪ್ರಾರಂಭವಾಗುವ ಸುದಿನವೂ ಪ್ರಾಪ್ತವಾಯಿತು. ಯಾಗಶಾಲೆಗೆ ಸಾಂಬಯ್ಯನವರನ್ನು ಗೌರವದಿಂದ ಕರೆದುತಂದರು. ದೀಕ್ಷೆ ತೆಗೆದುಕೊಳ್ಳುವ ಮೊದಲು ಆಯುಷ್ಕರ್ಮವಾಗಬೇಕೆಂದು ಋತ್ವಿಕರು ತಿಳಿಸಿದರು. ಆಗಲೇ ಮೀಸೆಯ ವಿಷಯದಲ್ಲಿ ಸಾಂಬಯ್ಯನವರಿಗೆ ಯೋಚನೆಗೆ ಮೊದಲಾಯಿತು. ತಲೆ ಗಡ್ಡಗಳನ್ನು ಬೋಳಿಸಿ ಕ್ಷೌರಿಕ ಮೀಸೆಗೆ ಸಾಬೂನನ್ನು ಹಚ್ಚಿದ. 'ಮೀಸೆಯನ್ನೂ ತೆಗೆಯಬೇಕೇ?' ಎಂದು ಸಾಂಬಯ್ಯ ಹಂಬಲಿಸಿದರು. 'ಅಲ್ಲವೇ ಮತ್ತೆ?' ಎಂದರು ಋತ್ವಿಕರು. ತಮ್ಮ ಪ್ರಾಣವನ್ನೇ ಬಲಿಕೊಟ್ಟಷ್ಟು ಸಂಕಟವಾಯಿತು ಸಾಂಬಯ್ಯನವರಿಗೆ. ಏಕಾದರೂ ಈ ಯಾಗ ಮಾಡಲು ಒಪ್ಪಿಕೊಂಡೆನೋ ಎಂದು ತಮ್ಮನ್ನು ತಾವೇ ಶಪಿಸಿಕೊಂಡರು. 'ಇದೆಲ್ಲ ಕೃಷ್ಣರಾಜ ಒಡೆಯರ ಸನ್ನಾಹವೇ ಇರಬೇಕೆಂದು' ಒಳಗೊಳಗೇ ಗೊಣಗಿಕೊಂಡರು. ಏನಾದರೇನು? ಮೀಸೆ ಮಾಯವಾಯಿತು. ಯಾಗ ಪೂರ್ಣವಾಯಿತು. ದೊರೆಗಳ ಇಚ್ಛೆ ಪೂರೈಸಿತು.

ಶೃಂಗೇರಿಮಠದ ಜಗದ್ಗುರು ನರಸಿಂಹಭಾರತಿಗಳು ಒಮ್ಮೆ ಮೈಸೂರಿಗೆ ಬಂದು ಪಶ್ಚಿಮವಾಹಿನಿಯಲ್ಲಿ ಬಿಡಾರ ಮಾಡಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರು ಸ್ವಾಮಿಗಳ ಸನ್ನಿಧಿಗೆ ದರ್ಶನಾಕಾಂಕ್ಷಿಗಳಾಗಿ ಬಂದರು. ಸ್ವಾಮಿಗಳಿಗೆ ಸಾಷ್ಟಾಂಗನಮಸ್ಕಾರಮಾಡಿ ಕೈಜೋಡಿಸಿ ನಿಂತಾಗ 'ಅಯ್ಯ! ನೀನು ನಮಗೊಂದು ವಾಗ್ದಾನ ಮಾಡಬೇಕು' ಎಂದರು ಸ್ವಾಮಿಗಳು. 'ಅಪ್ಪಣೆಯಾಗಬೇಕು' ಎಂದರು ದೊರೆಗಳು. 'ಕುಣಿಗಲ್ ರಾಮಶಾಸ್ತ್ರಿಗಳ ದ್ವಿತೀಯ ಪುತ್ರ ಶಿವಸ್ವಾಮಿಯನ್ನು ನಮ್ಮ ಸಂಸ್ಥಾನಕ್ಕೆ ದತ್ತುಕೊಡಿಸಬೇಕು' ಎಂದರಂತೆ ನರಸಿಂಹಭಾರತಿಗಳು. ನಡಸಿಕೊಡುತ್ತೇನೆಂದು ದೊರೆಗಳು ಕಾವೇರಿ ಜಲದಿಂದ ಸಂಕಲ್ಪಮಾಡಿ ಮಾತುಕೊಟ್ಟು ಮೈಸೂರಿಗೆ ಹಿಂದಿರುಗಿದರು.

'ಅಯ್ಯಾ! ಕುಣಿಗಲ್ ರಾಮಶಾಸ್ತ್ರಿಗಳನ್ನು ನೋಡಿ ತುಂಬ ದಿವಸಗಳಾದವು. ಮಹಾ ತರ್ಕವಿದ್ವಾಂಸರು ಅವರು. ಅವರನ್ನು ಅರಮನೆಗೆ ಕರೆದು ತನ್ನಿ' ಎಂದು ಹತ್ತಿರವಿದ್ದವರಿಗೆ ಅಪ್ಪಣೆ ಮಾಡಿದರು. ಶಾಸ್ತ್ರಿಗಳಿಗೆ ಹತ್ತು ಹನ್ನೆರಡು ಸಾವಿರ ರೂಪಾಯಿ ಸಾಲವಿದ್ದ ಸಂಗತಿ ಪ್ರಭುಗಳಿಗೆ ತಿಳಿದಿತ್ತು. ಅವರು ಅರಮನೆಗೆ ದಯಮಾಡಿಸಿದೊಡನೆ ಲೋಕಾಭಿರಾಮವಾಗಿ ಮಾತನಾಡುತ್ತ ಪ್ರಸ್ತಾಪತ್ವೇನ ಅವರ ಸಾಲದ ವಿಷಯವನ್ನು ಪ್ರಭುಗಳೇ ಎತ್ತಿದರು. 'ತಾವೇನೂ ಯೋಚಿಸಬೇಕಾದ್ದಿಲ್ಲ ಶಾಸ್ತ್ರಿಗಳೇ! ದೇವರು ನಿಮ್ಮ ಸಂಕಟಗಳನ್ನೆಲ್ಲ ಬಗೆಹರಿಸುತ್ತಾನೆ' ಎಂದು ಅಭಯವಿತ್ತರು. ಶಾಸ್ತ್ರಿಗಳ ಸಾಲವನ್ನೆಲ್ಲ ಅರಮನೆಯಿಂದ ತೀರಿಸಲಾಯಿತು.

ಇದಾದ ಸ್ವಲ್ಪದಿನಗಳ ಬಳಿಕ ಸಂಸ್ಥಾನದ ಅಶೇಷ ವೈದಿಕ ಮಹಾಶಯರನ್ನೂ ಆಹ್ವಾನಿಸಿ ಅಂಬಾವಿಳಾಸದಲ್ಲಿ ಒಂದು ವಿದ್ವಜ್ಜನ ಸಭೆಯನ್ನು ದೊರೆಗಳು ಏರ್ಪಡಿಸಿದರು. ರಾಮಶಾಸ್ತ್ರಿಗಳಿಗೂ ಶಿವಸ್ವಾಮಿಗೂ ವಿಶೇಷ ಆಹ್ವಾನವನ್ನು ಕಳುಹಿಸಿದ್ದರು. ಇಬ್ಬರೂ ಸಭೆಗೆ ದಯಮಾಡಿಸಿದ್ದರು. ಕೃಷ್ಣರಾಜ ಒಡೆಯರು ಕುಮಾರ ಶಿವಸ್ವಾಮಿಯವರನ್ನು ಹತ್ತಿರ ಕರೆದು 'ಏನಾದರೊಂದನ್ನು ಅಪ್ಪಣೆ ಕೊಡಿಸಬೇಕು' ಎಂದರಂತೆ. 'ದಿಶಸ್ತು ಕಕುಭಃ ಕಾಷ್ಠಾ....' ಎಂದು ಅಮರದ ಒಂದು ಶ್ಲೋಕವನ್ನು ಶಿವಸ್ವಾಮಿ ಪ್ರಾರಂಭ ಮಾಡಿದರಂತೆ. 'ಸಾಕು ಸಾಕು. ದಿಗ್ವಿಜಯಮಾಡುವುದಕ್ಕಾಗಿಯೇ ತಾವು ಅವತಾರ ಮಾಡಿರುವುದು. ಮುಂದೆ ಶೃಂಗೇರಿ ಜಗದ್ಗುರುಗಳಾಗತಕ್ಕವರು ತಾವು' ಎಂದು ಹೇಳಿ, ತುಂಬಿದ ಸಭೆಯಲ್ಲಿ ನಡುಕಟ್ಟಿ ಶಿವಸ್ವಾಮಿಗೆ ಸಾಷ್ಟಾಂಗವೆರಗಿದರಂತೆ ಮುಮ್ಮಡಿ ಕೃಷ್ಣರಾಜ ಒಡೆಯರು. ಕುಣಿಗಲ್ ರಾಮಶಾಸ್ತ್ರಿಗಳಿಗೆ ಏನೊಂದೂ ಅರ್ಥವಾಗಲಿಲ್ಲ. ಆಗ ಪ್ರಭುಗಳು ಶಾಸ್ತ್ರಿಗಳನ್ನು ಕುರಿತು 'ಕ್ಷಮಿಸಬೇಕು, ತಮ್ಮ ಅನುಮತಿಯಿಲ್ಲದೆಯೇ ನಾನು ತಮ್ಮ ಕುಮಾರರನ್ನು ಶ್ರೀಗಳವರ ಆಜ್ಞಾನುಸಾರ ಮಠಕ್ಕೆ ಧಾರೆಯೆರೆದು ಕೊಟ್ಟದ್ದೇನೆ. ಲೋಕಕಲ್ಯಾಣಕ್ಕಾಗಿ ಮಾಡಿದ ಈ ಕೆಲಸವನ್ನು ತಾವು ದೊಡ್ಡ ಮನಸ್ಸುಮಾಡಿ ನೆರವೇರಿಸಿಕೊಡಬೇಕು' ಎಂದು ಪ್ರಾರ್ಥಿಸಿಕೊಂಡರಂತೆ. ಶಾಸ್ತ್ರಿಗಳು ಮಾಡುವುದಾದರೂ ಏನನ್ನು? ಜಗದ್ಗುರುಗಳಿಗೆ ವಾಗ್ದಾನಮಾಡಿಯಾಗಿದೆ. ತುಂಬಿದ ಸಭೆಯಲ್ಲಿ ಕುಮಾರನನ್ನು ಮುಂದಿನ ಜಗದ್ಗುರುಗಳು ಎಂದು ಸಾರಿ ದೊರೆಗಳೇ ಸಾಷ್ಟಾಂಗಮಾಡಿದ್ದಾರೆ! 'ದೇವರ ಚಿತ್ತ' ಎಂದರು ರಾಮಶಾಸ್ತ್ರಿಗಳು. ಕುಮಾರಸ್ವಾಮಿ ಮುಂದೆ ಜಗದ್ಗುರು ಅಭಿನವ ನರಸಿಂಹಭಾರತಿಗಳಾದರು!

ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಒಂದು ಬಾರಿ ಗ್ರಹಗತಿಗಳು ಬಹಳ

ಕ್ರೂರವಾಗಿದ್ದುದರಿಂದ ಸುವರ್ಣ ಗೋದಾನ ಮಾಡಬೇಕೆಂದು ಗೊತ್ತಾಯಿತು. ಆದರೆ ದಾನವನ್ನು ಸ್ವೀಕರಿಸಿ ಪಾಪ ನಿವೃತ್ತಿಮಾಡಿಕೊಳ್ಳುವ ಧೈರ್ಯ ಯಾರಿಗೂ ಬರಲಿಲ್ಲ. ದಾನವನ್ನು ತೆಗೆದುಕೊಳ್ಳಲು ಯಾರೂ ಮುಂದೆ ಬರಲಿಲ್ಲ. ದಾನವನ್ನು ಯಾರಿಗೆ ಕೊಡಬೇಕು ಎಂದು ದೊರೆಗಳು ಯೋಚಿಸುತ್ತಿರುವಾಗ 'ಮಹಾಸ್ವಾಮಿ! ಎಡತೊರೆಯಲ್ಲಿ ಒಬ್ಬ ಸೋಮಯಾಜಿಗಳಿದ್ದಾರೆ. ಮಹಾ ತೇಜಸ್ವಿಗಳು, ಆಹ್ನಿಕಪರರು, ಸೂರ್ಯಾರಾಧಕರು. ಈ ದಾನವನ್ನು ತೆಗೆದುಕೊಳ್ಳುವುದಕ್ಕೆ ಅವರನ್ನು ಬಿಟ್ಟರೆ ಬೇರೆ ಯಾರೂ ಯೋಗ್ಯರಲ್ಲ' ಎಂದು ಹತ್ತಿರವಿದ್ದವರು ಅರಿಕೆಮಾಡಿದರಂತೆ. ಸರಿ, ಸೋಮಯಾಜಿಗಳನ್ನ ಅರಮನೆಗೆ ಕರೆಸಿಕೊಂಡು 'ದಾನವನ್ನು ಪರಿಗ್ರಹಿಸಬೇಕು' ಎಂದು ದೊರೆಗಳು ಪ್ರಾರ್ಥಿಸಿಕೊಂಡರಂತೆ. 'ಆಗಬಹುದು' ಎಂದು ಸೋಮಯಾಜಿಗಳು ಎಡಗೈಯ್ಯನ್ನು ಮುಂದುಮಾಡಿದರಂತೆ. 'ಹಾ! ಹಾ! ಏನನ್ಯಾಯ! ದೊರೆಗಳು ನೀಡುವ ದಾನವನ್ನು ತೆಗೆದುಕೊಳ್ಳಲು ವಾಮಹಸ್ತವನ್ನು ಒಡ್ಡೋಣವೆಂದರೇನು? ಏನು ಗರ್ವ ಈ ಬ್ರಾಹ್ಮಣನಿಗೆ?' ಎಂದು ಮುಂತಾಗಿ ಪರಿವಾರದ ಜನ ಗುಜುಗುಜು ಮಾಡಿದರು. ಪ್ರಭುಗಳಿಗೂ ಕಣ್ಣು ಕೆಂಪಾಯಿತು! 'ಮಹಾಪ್ರಭು! ಬಲಗೈಯಲ್ಲಿ ದಾನಪ್ರತಿಗ್ರಹಮಾಡಿದರೆ ತಮಗೆ ಶ್ರೇಯಸ್ಸಲ್ಲ, ಆದ್ದರಿಂದ ಎಡಗೈಯನ್ನು ಹಿಡಿದಿದ್ದೇನೆ. ತಾವು ಅನ್ಯಥಾಭಾವಿಸಬಾರದು' ಎಂದರು ಸೋಮಯಾಜಿಗಳು. 'ಬಲಗೈಯ್ಯಲ್ಲಿ ಸ್ವೀಕರಿಸಿದರೆ ಆಗುವ ನಷ್ಟವೇನೋ' ಎಂದು ವ್ಯಂಗ್ಯ ಮಾತುಗಳನ್ನಾಡಿ 'ಸೋಮಯಾಜಿಗಳು ಬಲಗೈಯಲ್ಲೇ ದಾನವನ್ನು ತೆಗೆದುಕೊಳ್ಳುವಂತೆ ಅಪ್ಪಣೆಯಾಗಬೇಕು ಪ್ರಭು' ಎಂದರು ಪರಿವಾರದವರು. 'ಸರಿ! ಸೂರ್ಯದೇವನ ಚಿತ್ತ' ಎಂದು ಸೋಮಯಾಜಿಗಳು ದಕ್ಷಿಣ ಹಸ್ತದಿಂದಲೇ ದಾನವನ್ನು ಪರಿಗ್ರಹಿಸಿದರು.

ಸೋಮಯಾಜಿಗಳು ಬಲಗೈಯ್ಯಲ್ಲಿ ದಾನ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದುದೇಕೆ ಎಂಬ ಕುತೂಹಲ ಕೆರಳಿತು ದೊರೆಗಳಿಗೆ. ಸೋಮಯಾಜಿಗಳನ್ನೇ ಕೇಳಿದರಂತೆ ಪ್ರಭುಗಳು. ಆಗ ಸೋಮಯಾಜಿಗಳು 'ಪ್ರಭು! ಆಗಬೇಕಾದುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಒಳ್ಳೆಯದು, ಬೆರಣಿಯ ಚೂರನ್ನು ತರಿಸಿಕೊಡೋಣವಾಗಲಿ. ಬಲಗೈಯನ್ನು ಏಕೆ ಹಿಡಿಯಲಿಲ್ಲ ಎಂಬುದಕ್ಕೆ ಕಾರಣವನ್ನು ತೋರಿಸುತ್ತೇನೆ' ಎಂದರು. ಬೆರಣಿಯ ಚೂರನ್ನು ತರಿಸಲಾಯಿತು. ಸೋಮಯಾಜಿಗಳು ತಮ್ಮ ಬಲಗೈಯಮೇಲೆ ಒಂದು ಚೂರು ಬೆರಣಿಯನ್ನು ಪುಡಿಮಾಡಿ ಉದುರಿಸಿಕೊಂಡರಂತೆ. 'ಭಗ್' ಎಂದು ಬೆಂಕಿ ಕಾಣಿಸಿಕೊಂಡಿತಂತೆ! ದೊರೆಗಳ ಸಮೀಪದಲ್ಲಿದ್ದವರೆಲ್ಲರೂ ಆಶ್ಚರ್ಯಚಕಿತ

ರಾಗಿ ಮೂಕರಾದರು. ದೊರೆಗಳ ಮುಖ ಬಾಡಿತು. ಜ್ಯೋತಿಷದಲ್ಲಿ ಸ್ವಯಂ ಪಂಡಿತರಾದ ಪ್ರಭುಗಳಿಗೆ ಭವಿಷ್ಯದ ಚಿತ್ರ ಕಣ್ಣುಮುಂದೆ ಸುಳಿದು ಸರಿಯಿತು. 'ಈಶ್ವರಸಂಕಲ್ಪ' ಎಂದು ಸುಮ್ಮನಾದರು. 'ಕ್ಷಮಿಸಬೇಕು ಪ್ರಭು' ಎಂದರು ಸೋಮಯಾಜಿಗಳು. ಉಳಿದವರಿಗೆ ಏನೊಂದೂ ಅರ್ಥವಾಗಲಿಲ್ಲ. ಗ್ರಹಗತಿಗಳು ತಮ್ಮ ಆಟವನ್ನು ಮುಗಿಸಿಯೇ ಮುಗಿಸಿದವು! ರಾಜ್ಯ ಬ್ರಿಟಿಷ್ ಕಂಪನಿಯ ವಶವಾಯಿತು!

೭. ರಸಿಕರ ಸರಸ

ಒಂದು ಸಂಗೀತ ಕಛೇರಿ ಕಳೆಕಟ್ಟುವುದು ಬಿಡುವುದು ಸಂಗೀತ ವಿದ್ವಾಂಸನನ್ನು ಎಷ್ಟರಮಟ್ಟಿಗೆ ಅವಲಂಬಿಸಿರುತ್ತದೆಯೋ ಕೇಳುಗನನ್ನೂ ಅಷ್ಟೇ ಅವಲಂಬಿಸಿರುತ್ತದೆ ಎಂದು ನನ್ನ ಅಭಿಪ್ರಾಯ. ಹಾಡುವವನ ಅಥವಾ ನುಡಿಸುವವನ ಮನೋಧರ್ಮಕ್ಕೆ ಕೇಳುವವನು ಕೈಗನ್ನಡಿಯಿದ್ದಂತೆ. ಒಂದು ಕತೆ ಹೇಳುವುದುಂಟು. ಯಾವುದೋ ದೇಶದಲ್ಲಿ ಒಬ್ಬ ದೊರೆ ಇದ್ದನಂತೆ. ಸಂಗೀತ ಅಂದರೆ ತೊಲ ಎಷ್ಟು ಎಂದು ಕೇಳುವ ಗುಂಪಿನವನು. ಆದರೆ ರಸಿಕ, ಕಲಾಭಿಮಾನಿ ಎಂದೆನ್ನಿಸಿಕೊಳ್ಳಬೇಕೆಂಬ ಹಂಬಲ. ಬಂದ ಸಂಗೀತ ವಿದ್ವಾಂಸರುಗಳನ್ನೆಲ್ಲ ಹಾಡಿಸುತ್ತಿದ್ದ, ಗೌರವಿಸುತ್ತಿದ್ದ. ಕಛೇರಿಯ ಯಾವ ಭಾಗದಲ್ಲಿ ತಲೆದೂಗಬೇಕೆಂದು ಸೂಚಿಸುವ ಸಲುವಾಗಿಯೇ ಒಬ್ಬ ರಸಿಕನನ್ನು ನೇಮಿಸಿಕೊಂಡಿದ್ದನಂತೆ. ದೊರೆಯ ಪೇಟಕ್ಕೆ ಒಂದು ದಾರ ಕಟ್ಟಿ ಆತ ಹಿಂದೆ ಕುಳಿತಿರುತ್ತಿದ್ದ. ಒಂದು ಉತ್ತಮ ಸಂಗತಿಯೋ, ಚಮತ್ಕಾರದ ತಾಳದ ಕೆಲಸವೋ ಬಂದಾಗ ದಾರ ಎಳೆಯುತ್ತಿದ್ದ. ದೊರೆ ತಲೆದೂಗುತ್ತಿದ್ದ. ಇಂಥ ರಸಿಕರ ಮುಂದೆ ಹಾಡುವುದೆಂದರೆ ಸ್ವಲ್ಪ ಪ್ರಯಾಸದ ಕೆಲಸವೇ ಸರಿ.

ಹಾಡುವ ಕ್ರಮ, ಶೈಲಿ, ಕಛೇರಿಯ ಕ್ರಮ ಇವುಗಳಲ್ಲಿ ಹೇಗೋ ಹಾಗೆಯೇ ಕೇಳುಗರ ಅಭಿರುಚಿಯಲ್ಲೂ ಸಹ ಕೆಲವೊಂದು ವ್ಯತ್ಯಾಸಗಳನ್ನು ನನ್ನ ಈ ದೀರ್ಘ ಅನುಭವದಲ್ಲಿ ಕಂಡಿದ್ದೇನೆ. ಆಗಿನ ದಿವಸಗಳಲ್ಲಿ ಯಾವುದರಲ್ಲೂ ಅವಸರವಿರಲಿಲ್ಲ. ಪ್ರಾಯಿಕವಾಗಿ, ರಾತ್ರಿ ೯ ಘಂಟೆಯ ಹೊತ್ತಿಗೆ ಸಂಗೀತ ಕಛೇರಿಗಳು ಪ್ರಾರಂಭವಾಗುತ್ತಿದ್ದವು. ಊಟ ಉಪಚಾರಗಳನ್ನು ಮುಗಿಸಿಕೊಂಡು ಜನ ನೆಮ್ಮದಿಯಿಂದ ಸೇರುತ್ತಿದ್ದರು ಸಂಗೀತ ಕೇಳಲು. ರಾಮೋತ್ಸವ ಕೃಷ್ಣೋತ್ಸವಗಳಲ್ಲಿ ಶೇಷಣ್ಣನವರ ಮನೆ ಕಲೆಯ ದೇಗುಲದಂತಿರುತ್ತಿತ್ತು. ಆದರೆ ಮನೆ ಸಣ್ಣದು. ಕಛೇರಿಗಳನ್ನು ಕೇಳುವ ಜನಸಂದಣಿಗೆ ಅವರ ಮನೆಯಲ್ಲಿ ಸ್ಥಳದ ಸಂಕೋಚ ಅತಿಯಾಗಿತ್ತು. ಜನ ಊಟ ಮುಗಿಸಿಕೊಂಡು, ಕಂಕುಳ ಸಂದಿನಲ್ಲಿ ಚಾಪೆ ದಿಂಬುಗಳನ್ನು ಸುತ್ತಿಕೊಂಡು, ಶೇಷಣ್ಣನವರ ಮನೆಯ ಮುಂದೆ ರಸ್ತೆಯಲ್ಲಿ ಚಾಪೆಗಳನ್ನು ಹಾಸಿಕೊಂಡು, ದಿಂಬಿಗೆ ತಲೆ ಒರಗಿಸಿ ಹಾಯಾಗಿ ಮಲಗಿ ಕಛೇರಿಗಳನ್ನು ಕೇಳುತ್ತಿದ್ದರು. ಒಮ್ಮೊಮ್ಮೆ ಬೆಳಗಿನ ಜಾವದವರೆಗೂ ಸಂಗೀತ ನಡೆಯುತ್ತಿತ್ತು. ಜನ ಉತ್ಸಾಹಭರಿತರಾಗಿ ಕೇಳಿ ಆನಂದಿಸುತ್ತಿದ್ದರು.

ಇಂಥದೇ ವರ್ಣ ಹಾಡಬೇಕು, ಅಂಥದೇ ಕೃತಿ ಹಾಡಬೇಕು, ಇದೇ ಕ್ರಮದಲ್ಲಿ ಹಾಡಬೇಕು, ಇಷ್ಟು ಹೊತ್ತೇ ಹಾಡಬೇಕು ಎಂಬ ಕಟ್ಟು ನಿಯಮಗಳಿರಲಿಲ್ಲ. ತಮಗೆ ಯಾವುದು ತೋಚುತ್ತಿತ್ತೋ ಅದನ್ನು ಹಾಡುತ್ತಿದ್ದರು ವಿದ್ವಾಂಸರು. ಸಭಿಕರು ಕೇಳಿ ಸಂತೋಷಪಡುತ್ತಿದ್ದರು.

ಒಮ್ಮೆ, ತಿರುವೆಯ್ಯಾರಿನ ಧನಿಕರೊಬ್ಬರ ಮನೆಯಲ್ಲಿ ಮಹಾ ವೈದ್ಯ ನಾಥಯ್ಯರ್ ಅವರ ಕಛೇರಿ. ತುಂಬಿದ ಸಭೆ. 'ಚಿಂತಯಮಾ ಕಂದಮೂಲ ಕಂದಂ' ಎಂಬ ಭೈರವಿ ರಾಗದ ಕೀರ್ತನೆಯಿಂದ ಕಛೇರಿ ಪ್ರಾರಂಭವಾಯಿತು. ಅದ್ಭುತವಾದ ಗಾಯನ. ಸಭೆ ಸಮ್ಮೋಹನಾಸ್ತ್ರಕ್ಕೆ ಕಟ್ಟುಬಿದ್ದಂತಿತ್ತು. ಆ ಕೃತಿಯಾದ ಬಳಿಕ, ಕಛೇರಿಯನ್ನೇರ್ಪಡಿಸಿದ್ದ ಧನಿಕನಿಗೆ ಯಾವುದೋ ಒಂದು ಕೀರ್ತನೆಯನ್ನು ಕೇಳಬೇಕೆಂಬ ಇಚ್ಛೆಯಾಯಿತು. ಚೀಟಿಯೊಂದರಲ್ಲಿ ತನ್ನ ಕೋರಿಕೆಯನ್ನು ಸೂಚಿಸಿ, ಸಭೆಯಲ್ಲಿದ್ದ ವೈದ್ಯನಾಥಯ್ಯರ್ ಅವರ ಅಣ್ಣಂದಿರ ಮುಂದಿಟ್ಟ. ಮಡಿಸಿದ ಕಾಗದವನ್ನು ಬಿಚ್ಚಿ ಓದುತ್ತಿದ್ದಂತೆಯೇ ಅವರ ಮುಖ ಕೆಂಪಿಟ್ಟಿತು. ತಂಬೂರಿಗೆ ಮುಸುಕಿಹಾಕಿ ಮೇಲೇಳುವಂತೆ ತಮ್ಮನಿಗೆ ಆಜ್ಞಾಪಿಸಿದರು. ಅಣ್ಣನ ಮಾತು ಎಂದರೆ ವೈದ್ಯನಾಥಯ್ಯರ್ ಅವರಿಗೆ ವೇದವಾಕ್ಯ. ಮರುಮಾತಿಲ್ಲದೆ ಮೇಲೆದ್ದರು. ಧನಿಕ ತಬ್ಬಿಬ್ಬಾದ. ಸಭಿಕರೆಲ್ಲರೂ ಆಶ್ಚರ್ಯ ಚಕಿತರಾದರು. 'ಏನು ಅಪರಾಧವಾಯಿತೋ ನನ್ನಿಂದ ತಿಳಿಯಲಿಲ್ಲ ಮನ್ನಿಸಬೇಕು' ಎಂದು ಧನಿಕ ಬೇಡಿಕೊಂಡ. 'ಇನ್ನು ಕಛೇರಿಮಾಡುವ ಕಾಲ ಹೋಯಿತು. ಭಾವಾವೇಶಭರಿತನಾಗಿ ತನಗೆ ತೋರಿದುದನ್ನು ಹಾಡುವ ಸ್ವಾತಂತ್ರ್ಯವನ್ನು ಕಳೆದುಕೊಂಡು, ಕೇಳುಗರ ಇಷ್ಟಾನಿಷ್ಟಗಳ ಸಂಕೋಲೆಗೆ ಸಿಕ್ಕಿಬಿದ್ದಮೇಲೂ ಕಛೇರಿಗಳನ್ನು ಮಾಡುವುದು ವಿದ್ವಾಂಸನೆನಿಸಿಕೊಂಡವನಿಗೆ ಉಚಿತವಲ್ಲ. ಇನ್ನುಮೇಲೆ ನಿನ್ನ ಸಂಗೀತ ಕೇವಲ ನಿನ್ನ ಆತ್ಮಾನಂದಕ್ಕಾಗಿಯೇ ಹೊರತು, ಮಾರಾಟಕ್ಕಲ್ಲ' ಎಂದು ಹೇಳಿ ತಮ್ಮನನ್ನು ಎಬ್ಬಿಸಿಕೊಂಡು ಸಭೆಯಿಂದ ಹೊರಟೇಬಿಟ್ಟರು!

ಚೀಟಿಯಲ್ಲಿ ತಮ್ಮತಮ್ಮ ಕೋರಿಕೆಗಳನ್ನು ಬರೆದು ವಿದ್ವಾಂಸರ ಮುಂದೆ ಇಡುವ ಈಚಿನ ಪದ್ಧತಿಯನ್ನು ಕಂಡಾಗಲೆಲ್ಲ ಒಂದು ಸ್ವಾರಸ್ಯ ಪ್ರಸಂಗ ನೆನಪಿಗೆ ಬರುತ್ತದೆ. ಬೆಂಗಳೂರು ಗಾಯನ ಸಮಾಜದಲ್ಲಿ ಬಿಡಾರಂ ಕೃಷ್ಣಪ್ಪನವರ ಕಛೇರಿ ಏರ್ಪಾಡಾಗಿತ್ತು. ಸುಮಾರು ಒಂದು ಒಂದೂವರೆ ಘಂಟೆ ಕಾಲ ಕಛೇರಿ ನಡೆದಿತ್ತು. ಕೃಷ್ಣಪ್ಪನವರು ತೋಡಿ ರಾಗವನ್ನು ಸವಿಸ್ತಾರವಾಗಿ ಆಲಾಪನೆಮಾಡಿ, ಯಾವುದೋ ಕೀರ್ತನೆಯನ್ನು ಹಾಡಿ, ನೆರವಲು,

ಸ್ವರ ಎಲ್ಲ ಮುಗಿಸಿ ಅದೇ ತಾನೆ ನಿಲ್ಲಿಸಿದ್ದರು. ಮುಂದಿನ ಕೃತಿಯನ್ನು ಪ್ರಾರಂಭಮಾಡುವುದರಲ್ಲಿದ್ದರು. ಅಷ್ಟರಲ್ಲಿ ಸಭಾಂಗಣದಲ್ಲಿ ಮುಂದಿನ ಸಾಲಿನಲ್ಲೇ ಕುಳಿತಿದ್ದ ಸರಿಗೆ ರುಮಾಲಿನ ರಸಿಕರೊಬ್ಬರು ಮೇಲೆದ್ದರು. 'ವಿದ್ವಾಂಸರಲ್ಲಿ ಒಂದು ವಿಜ್ಞಾಪನೆ. ದಯವಿಟ್ಟು ಸ್ವಲ್ಪ ತೋಡಿ ರಾಗ ಅಪ್ಪಣೆಯಾಗಬೇಕು' ಎಂದು ಹೇಳಿ ಕುಳಿತರು. ಆತ ದೊಡ್ಡ ಅಧಿಕಾರಸ್ಥಾನದಲ್ಲಿದ್ದವರು. ಯಾರೂ ಏನೂ ಅನ್ನುವಂತಿಲ್ಲ. ಒಬ್ಬರ ಮುಖವನ್ನಿನ್ನೊಬ್ಬರು ನೋಡಿಕೊಂಡು ಸುಮ್ಮನೆ ಕುಳಿತರು. ಕೃಷ್ಣಪ್ಪನವರು 'ಅಗತ್ಯವಾಗಿ ಆಗಬಹುದು. ತಾವು ಕೇಳುವುದು ಹೆಚ್ಚೋ ನಾನು ಹಾಡುವುದು ಹೆಚ್ಚೋ?' ಎಂದು ಹೇಳಿ ಮುಂದೆ ಯಾವುದೋ ಬೇರೆ ರಾಗ ಹಾಡಿ, ಕೀರ್ತನೆ ಹಾಡಿ ನಿಲ್ಲಿಸಿದರು. ತಮ್ಮ ಅಭಿಲಾಷೆಯನ್ನು ನಡಸಿಕೊಟ್ಟ ಮೇಲೆ ಕೃತಜ್ಞತೆಯನ್ನು ಸಮರ್ಪಿಸದೆ ಇರುವುದಕ್ಕಾಗುತ್ತದೆಯೇ? ಮತ್ತೆ ಮೇಲೆದ್ದರು ಆ ರಸಿಕಾಗ್ರಗಣ್ಯರು. 'ನನ್ನ ಮಾತನ್ನು ದೊಡ್ಡ ಮನಸ್ಸುಮಾಡಿ ನಡಸಿಕೊಟ್ಟದ್ದಕ್ಕೆ ಅನೇಕ ವಂದನೆಗಳು. ಹಿಂದೆ ಇಂಥ ತೋಡಿಯನ್ನು ಕೇಳಿರಲಿಲ್ಲ, ಮುಂದೆ ಕೇಳುವುದು ಅಸಂಭವ' ಎಂದು ಆ 'ತೋಡಿ'ಯನ್ನು ಕೊಂಡಾಡಿ ಕುಳಿತರು! ಸುಮ್ಮನೆ ಚೀಟಿಯ ಮುಖಾಂತರವಾದರೂ ತಮ್ಮ ಕೋರಿಕೆಯನ್ನು ನಿವೇದಿಸಿಕೊಂಡಿದ್ದರೆ ಇನ್ನೂ ರಸಿಕರಾಗಿಯೇ ಉಳಿದುಕೊಳ್ಳುತ್ತಿದ್ದರೋ ಏನೋ ಆತ! ಅಲ್ಲಿಂದಾಚೆಗೆ ಗಾಯನ ಸಮಾಜದವರು ಕಛೇರಿಯ ವಿವರಗಳನ್ನು ರಾಗ ತಾಳಗಳ ವಿವರಗಳೊಂದಿಗೆ ಅಚ್ಚುಮಾಡಿಸಿ ಸಭಿಕರಲ್ಲಿ ಪೂರ್ವಭಾವಿಯಾಗಿ ಹಂಚುವ ವ್ಯವಸ್ಥೆ ಮಾಡಿದರು!

ತಿರುವೆಯ್ಯಾರಿನ ಜನ ಬಹು ರಸಿಕರು, ಜಾಣರು. ನನ್ನ ಗುರು ಪಟ್ಣಂ ಸುಬ್ರಹ್ಮಣ್ಯ‌ಅಯ್ಯರ್ ಮತ್ತು ಮಹಾವೈದ್ಯನಾಥಯ್ಯರ್ ಇವರಿಬ್ಬರ ನಡುವಿನ ಸಂಬಂಧ ಎಣ್ಣೆ ಸೀಗೇಕಾಯಿಗಿರುವಷ್ಟು ಅನ್ಯೋನ್ಯ. ಒಬ್ಬರನ್ನು ಕಂಡರೆ ಇನ್ನೊಬ್ಬರು ಸಿಡಿಯುತ್ತಿದ್ದರು. ಇಬ್ಬರೂ ಘನವಿದ್ವಾಂಸರು. ಹಾಡಿಕೆಯಲ್ಲಿ ಒಬ್ಬೊಬ್ಬರದು ಒಂದೊಂದು ಸೊಗಸು, ವೈಖರಿ. ಈ ಇಬ್ಬರು ಗಾಯಕರ ಸಂಗೀತದ ಸವಿಯನ್ನೂ ಒಮ್ಮೆಲೇ ಕೇಳಿ ಆನಂದಿಸಬೇಕೆಂಬ ಬಯಕೆ ಜನಕ್ಕೆ. ಇದಕ್ಕೊಂದುಪಾಯವನ್ನು ಕಂಡುಕೊಂಡಿದ್ದರು ಊರಿನವರು. ಪ್ರಣತಾರ್ತಿಹರ ದೇವಾಲಯದ ಪ್ರಾಕಾರದಲ್ಲಿ ಈ ಇಬ್ಬರು ದಿಗ್ದಂತಿಗಳ ಸಂಗೀತವನ್ನೂ ಏಕಕಾಲದಲ್ಲಿ ಏರ್ಪಡಿಸುತ್ತಿದ್ದರು. ಈಶ್ವರನ ದೇವಾಲಯದ ಮುಂದೆ ಒಬ್ಬರದು. ಅಮ್ಮನವರ ದೇವಾಲಯದ ಮುಂದೆ ಇನ್ನೊಬ್ಬರದು. ಒಬ್ಬರ

ಸಂಗೀತಕ್ಕೆ ಕರತಾಡನವಾಯಿತೆಂದರೆ ಸರಿ, ಇನ್ನೊಬ್ಬರಿಗೆ ಉತ್ಸಾಹ ಇಮ್ಮಡಿಯಾಗುತ್ತಿತ್ತು. ಸಭಿಕರ ಮೆಚ್ಚುಗೆಯನ್ನು ಪಡೆಯಬೇಕೆಂಬ ಛಲ ಹುಟ್ಟುತ್ತಿತ್ತು. ತಮ್ಮ ವಿದ್ವತ್ತಿನ ಆಳವನ್ನು ಮುಟ್ಟುತ್ತಿದ್ದರು. ಶ್ರೋತೃಗಳಿಗೆ ಔತಣ ನೀಡುತ್ತಿದ್ದರು.

ನನಗೂ ವೀಣೆ ಶೇಷಣ್ಣನವರಿಗೂ ನಡುವೆ ಸ್ನೇಹ ನಿಷ್ಠುರಗಳು ಬೆಳಕು ಕತ್ತಲುಗಳಂತೆ, ಒಂದರ ಹಿಂದೆ ಒಂದು ಬರುತ್ತಿದ್ದವು, ಹೋಗುತ್ತಿದ್ದವು. ನನ್ನದು ಸ್ವಲ್ಪ ಹಿತ್ತಾಳೆ ಕಿವಿ; ಅವರದೂ ಹಾಗೆಯೇ ಸ್ವಲ್ಪ. ಈ ಗುಟ್ಟನ್ನು ಅರಿತಿದ್ದ ಹಿತಶತ್ರುಗಳು ಕೆಲವರು ನಮ್ಮಗಳ ಕಿವಿಯನ್ನು ಅವರವರ ಲಾಭಕ್ಕೆ ತಕ್ಕಂತೆ ನುಲಿಯುತ್ತಿದ್ದರು, ಹುಳಿ ಹಿಂಡುತ್ತಿದ್ದರು. ಹಿಂದುಮುಂದು ಯೋಚಿಸದೆಯೇ, ನಾವು ಒಬ್ಬರಮೇಲೊಬ್ಬರು ಕತ್ತಿಯನ್ನು ಮಸೆಯುತ್ತಿದ್ದೆವು. ಹಿತೈಷಿಗಳೂ ಸಂಗೀತಪ್ರೇಮಿಗಳೂ ನಡುವೆ ಬಾಯಿಹಾಕಿ, ತಪ್ಪು ತಿಳಿವಳಿಕೆಯ ಮೇಲೆ ಬೆಳಕು ಚೆಲ್ಲಿ, ಇಬ್ಬರ ಮಧ್ಯೆ ಮತ್ತೆ ಸ್ನೇಹದ ಹೊನಲನ್ನು ಹರಿಯಿಸುತ್ತಿದ್ದರು. ಇದು ನಿತ್ಯನಿಯಮವಾಗಿಬಿಟ್ಟದ್ದಿತು.

ಒಮ್ಮೆ, ನನಗೂ ಶೇಷಣ್ಣನವರಿಗೂ ನಡುವೆ ಮನಸ್ತಾಪದ ತೆರೆಯೊಂದು ಬಿದ್ದಿತ್ತು. ಸುಮಾರು ಆರು ತಿಂಗಳು ಕಾಲ ಈ ತೆರೆ ಸರಿಯಲಿಲ್ಲ. ಒಬ್ಬರೊಡನೆ ಇನ್ನೊಬ್ಬರು ಮಾತನಾಡುತ್ತಿರಲಿಲ್ಲ. ಈ ಸಂದರ್ಭದಲ್ಲಿ ಒಂದು ಸ್ವಾರಸ್ಯ ಪ್ರಸಂಗ ನಡೆಯಿತು. ನನಗೆ ತಿಳಿಯದಂತೆ ಶೇಷಣ್ಣನವರನ್ನೂ, ಶೇಷಣ್ಣನವರಿಗೆ ತಿಳಿಯದಂತೆ ನನ್ನನ್ನೂ ಕೆಲವು ಕಲಾಭಿಮಾನಿಗಳು ಕಂಡು ಒಂದು ಕಛೇರಿಯನ್ನು ಏರ್ಪಡಿಸಿದರು. ಕಛೇರಿ ಮೈಸೂರು ಕಾಡಯ್ಯನವರ ಛತ್ರದಲ್ಲಿ ನಡೆಯತಕ್ಕದ್ದೆಂದು ತೀರ್ಮಾನವಾಯಿತು. ಶಿಷ್ಯಂದಿರ ಸಂಗಡ ತಂಬೂರಿಯನ್ನು ತೆಗೆಸಿಕೊಂಡು ಗೊತ್ತಾದ ವೇಳೆಗೆ ಛತ್ರಕ್ಕೆ ಹೋದೆ. ಅತ್ತಲಿಂದ, ಶೇಷಣ್ಣನವರೂ ತಮ್ಮ ಶಿಷ್ಯರ ಸಂಗಡ ವೀಣೆಯನ್ನು ತೆಗೆಸಿಕೊಂಡು ಬಂದರು. ನನ್ನನ್ನು ಕಂಡು ಶೇಷಣ್ಣನವರು ಕೆಂಡಕಾರಿದರು. ಅವರನ್ನು ಕಂಡು ನನಗೆ ಮೈಯೆಲ್ಲ ಬೆಂಕಿಯಾಯಿತು. 'ಇದೇನು ಹುಡುಗಾಟಿಕೆ?' ಎಂದು ಕಛೇರಿಯನ್ನು ಏರ್ಪಡಿಸಿದ್ದ ವ್ಯವಸ್ಥಾಪಕರ ಮೇಲೆ ಹಾರಾಡಿದೆವು. 'ನಿಮ್ಮಂಥ ದೊಡ್ಡ ದೊಡ್ಡ ವಿದ್ವಾಂಸರುಗಳು ಹೀಗೆ ಜಗಳಕ್ಕೆ ನಿಲ್ಲಬಹುದೆ? ನಿಮ್ಮಿಬ್ಬರ ಸಂಗೀತವನ್ನೂ ಒಮ್ಮೆಗೆ ಕೇಳಬೇಕೆಂಬ ಆಸೆ ಅನೇಕರಿಗೆ. ಆದ್ದರಿಂದ, ಈ ಸಂಚು ಹೂಡಬೇಕಾಯಿತು. ನಿಮ್ಮ ವೈಮನಸ್ಯಗಳನ್ನು ದಯಮಾಡಿ ಮರೆಯಿರಿ. ನಿಮ್ಮ ಸಂಗೀತದ ಸವಿಯನ್ನು ಸಭಿಕರಿಗೆ ಧಾರೆ ಎರೆಯಿರಿ'

ಎಂದು ಮುಂತಾಗಿ ಮಾತಾಡಿ, ಹೇಗೋ ನಮ್ಮನ್ನು ಒಪ್ಪಿಸಿ, ಸಭೆಗೆ ಕರೆದುಕೊಂಡು ಹೋದರು. ಮೊದಲು ಯಾರು ಪ್ರಾರಂಭಿಸಬೇಕು ಎಂಬ ಸಮಸ್ಯೆ ಬಗೆಹರಿಯಲು ಸ್ವಲ್ಪಕಾಲ ಹಿಡಿಯಿತು. 'ನಾನೇ ಮೊದಲು ನುಡಿಸಿಬಿಡುತ್ತೇನೆ; ನನಗೆ ಸ್ವಲ್ಪ ತುರ್ತು ಕೆಲಸವಿದೆ. ನಾನು ಕಛೇರಿ ಯಾದೊಡನೆಯೇ ಹೋಗಬೇಕು' ಎಂದರು ಶೇಷಣ್ಣ. ಕಛೇರಿ ಪ್ರಾರಂಭ ವಾಯಿತು. ಅಂದು ವೀಣೆಯನ್ನು ನುಡಿಸಿದವರು ಶೇಷಣ್ಣನವರಲ್ಲ; ಸರಸ್ವತಿಯ ಆವಾಹನೆಯೇ ಆಗಿತ್ತು ಅವರಲ್ಲಿ. ಇಂಥವರೊಡನೆ ಹಗೆತನವೇ? ಎಂದು ಒಳದನಿ ಮಿಡಿಯುತ್ತಿತ್ತು ನನ್ನಲ್ಲಿ. ಹೋಗಿ ಅಪ್ಪಿಕೊಂಡುಬಿಡಲೇ? ಅವರ ಪಾದಗಳ ಮೇಲೆ ಬಿದ್ದು ಹೊರಳಾಡಿ, ಕ್ಷಮೆ ಯಾಚಿಸಲೇ? ಎಂಬ ಯೋಚನೆಗಳು ಸುಳಿದಾಡಿದವು. ಆದರೆ, ಸ್ವಾಭಿಮಾನ? ಸುಮ್ಮನೆ ಕುಳಿತೆ. ಸಂತೋಷ ಉಕ್ಕಿಬಂದು ಮೂಕನಾಗಿದ್ದೆ. ವೀಣೆಯತಂತಿ ನಿಂತಾಗಲೇ ನನಗೆ ಬಾಹ್ಯದ ಅರಿವುಂಟಾದದ್ದು. 'ಆಯಿತು. ಇಷ್ಟರಮೇಲೆ ಯಾವ ವಿದ್ವಾಂಸ ಹಾಡಿ ಸಭೆಗೆ ಕಳೆಕೊಡುತ್ತಾನೋ ನೋಡೋಣ', ಎಂದರು ಶೇಷಣ್ಣ. ವೀಣೆಯನ್ನು ಪಕ್ಕಕ್ಕೆ ಸರಿಸಿ ಒರಗುದಿಂಬಿಗೆ ಆತುಕೊಂಡು ಕುಳಿತರು. ಮುಂದೇನೊ ಎಂತೋ ಎಂಬ ಕುತೂಹಲದಿಂದ ಸಭಿಕರು ಅವಾಕ್ಕಾದರು. ಮೇಲೆದ್ದೆ ನಾನು. ದೇವರನ್ನೂ ಗುರುಗಳನ್ನೂ ಸ್ಮರಿಸಿದೆ. 'ಹಾಡಿಯೇ ಹಾಡುತ್ತೇನೆ, ಕಳೆಕಟ್ಟಿಸಿಯೇ ಕಟ್ಟಿಸುತ್ತೇನೆ' ಎಂದು ಹಠತೊಟ್ಟೆ. ಆ ಧೈರ್ಯ, ಆ ಹುಮ್ಮಸ್ಸು, ಹೇಗೆ ಒದಗಿತೋ ನನಗೇ ತಿಳಿಯದು. ಶಕ್ತಿಮೀರಿ ಹಾಡಿದೆ. ಶೇಷಣ್ಣನವರ ಕಣ್ಣುಗಳು ಒದ್ದೆಯಾಗಿದ್ದವು. ಅಂಗವಸ್ತ್ರದಿಂದ ಕಣ್ಣೀರನ್ನು ತಡೆಯುತ್ತಿದ್ದರು. ಆರು ತಿಂಗಳಿನ ಮೌನವ್ರತ ಅರೆಕ್ಷಣದಲ್ಲಿ ಮಾಯ ವಾಯಿತು. ಎದ್ದು ನಿಂತರು ಶೇಷಣ್ಣ. 'ಆಚಾರ್ಯರೇ! ಚಾಡಿಕೋರರ ಮಾತನ್ನು ಕೇಳಿ, ನಾವು ನೀವು ಹೇಗೆ ಆರುತಿಂಗಳು ಕಾಲ ಒಬ್ಬರನ್ನೊಬ್ಬರನ್ನು ನೋಡದೆ, ಮಾತುಕತೆಯಾಡದೆ ಇದ್ದವಪ್ಪ? ಒಂದು ರೀತಿಯಲ್ಲಿ ಈ ಪೈಪೋಟಿ ಏರ್ಪಾಡಾದದ್ದೂ ಒಳ್ಳೆಯದೇ ಆಯಿತೆನ್ನಬೇಕು. ನಿಮ್ಮ ನಿಜವಾದ ಸತ್ವ ಬೆಳಕಿಗೆ ಬಂತು ಇಂದು. ಎಷ್ಟಾದರೂ ವಾದ್ಯ ವಾದ್ಯವೇ, ಹಾಡಿಕೆ ಹಾಡಿಕೆಯೇ! ದೇವರು ನಿಮ್ಮನ್ನು ಚೆನ್ನಾಗಿಟ್ಟಿರಲಿ. ನಮ್ಮಿಬ್ಬರನ್ನೂ ಒಟ್ಟುಗೂಡಿಸಿದ ಈ ರಸಿಕ ಮಿತ್ರರಿಗೆ ಎಷ್ಟು ಕೃತಜ್ಞರಾಗಿದ್ದರೂ ಸಾಲದು' ಎಂದರು ಶೇಷಣ್ಣ. ಮಗುವಿನಂತೆ ಅತ್ತೆ; ಕ್ಷಮಾಪಣೆ ಕೇಳಿದೆ. ಸಭೆಯಲ್ಲಿ ಸಮಾಧಾನ ಸಂತೋಷಗಳು ತುಂಬಿ ತೇಲಾಡಿದವು. ದಾರಿಯಲ್ಲಿ ನಡೆಯುತ್ತ ಶೇಷಣ್ಣನವರು ಅಂದರು: 'ನಿಜವಾದ ಸಂಗೀತದ

ಲಕ್ಷಣವೇ ಇದು ಆಚಾರ್ಯರೇ; ಹಗೆತನ, ಕೋಪತಾಪ, ನೋವು ಸಂಕಟ ಎಲ್ಲವನ್ನೂ ಒಂದು ಘಳಿಗೆಯಲ್ಲಿ ಮರಸುತ್ತದೆ. ಸುಖಭೋಜನ, ಸ್ತ್ರೀ ವ್ಯಾಮೋಹ ಮೊದಲಾದ ಯಾವ ಭೋಗವಿಲಾಸಗಳ ಕಡೆಗೂ ಮನಸ್ಸನ್ನು ಯಾವುದು ಹರಿಯಬಿಡುವುದಿಲ್ಲವೋ, ಅದೇ ನಿಜವಾದ ಸಂಗೀತ' ಎಂದು. ಈ ಮಾತು ಎಷ್ಟು ನಿಜ ಎನ್ನಿಸುತ್ತದೆ ಇಂದಿಗೂ ನನಗೆ.

ಚಾಮರಾಜನಗರದ ವೆಂಕಟಪತಯ್ಯನವರು ದೊಡ್ಡ ಜಮೀನ್ದಾರರು. ಸಂಗೀತದಲ್ಲಿ ಅತಿ ಹುಚ್ಚು. ಅದರಲ್ಲೂ 'ಜಾವಳಿ' ಎಂದರೆ ಮೈಯೆಲ್ಲ ಕಿವಿ ಯನ್ನಾಗಿಸಿಕೊಂಡು ಕೇಳಿ ಆನಂದಿಸುತ್ತಿದ್ದರು. ಒಂದು ಬಾರಿ ಅವರ ಮನೆಯಲ್ಲಿ ಯಾವುದೋ ಒಂದು ಮದುವೆಯ ಸಂದರ್ಭ. ಶೇಷಣ್ಣನವರ ವೀಣೆ ಮತ್ತು ನನ್ನ ಸಂಗೀತವನ್ನು ಜಮೀನ್ದಾರರು ಏರ್ಪಡಿಸಿದ್ದರು. ಮೊದಲನೆಯ ದಿನ ಶೇಷಣ್ಣನವರ ಕಛೇರಿ ನಡೆಯಿತು. ಮರುದಿನ ನನ್ನ ಸಂಗೀತ. ಕಛೇರಿಗೆ ಹೊರ ಡುವ ಮುನ್ನ ಶೇಷಣ್ಣನವರು ನನ್ನನ್ನು ಕರೆದು, 'ಆಚಾರ್ಯರೇ! ಕಛೇರಿಗೆ ನಿಮಗೆ ಗೊತ್ತಾಗಿರುವ ಸಂಭಾವನೆಗಿಂತ ಹತ್ತು ರೂಪಾಯಿ ಹೆಚ್ಚಾಗಿ ಬರುವ ಒಂದು ಉಪಾಯವನ್ನು ಹೇಳಿಕೊಟ್ಟರೆ ಏನುಕೊಡುತ್ತೀರಿ ನನಗೆ' ಎಂದರು. 'ತದರ್ಥಂ!' ಎಂದೆ. "ನೋಡಿ, ಜಮೀನ್ದಾರರಿಗೆ ಜಾವಳಿಗಳೆಂದರೆ ಮಹಾ ಖುಷಿ. ವರ್ಣ, ಕೀರ್ತನೆ, ರಾಗ, ತಾನ, ಪಲ್ಲವಿ ಎಲ್ಲ ಮುಗಿಯುವವರೆಗೂ ಆತ ಕಾಯಲಾರರು. ಒಂದೆರಡು ಕೀರ್ತನೆಗಳಾಗುವುದೇ ತಡ, ಒಂದು 'ಜಾವಳಿ ಅಪ್ಪಣೆಯಾಗಬೇಕು' ಎನ್ನುತ್ತಾರೆ. ಹಾಡಿದೊಡನೆಯೇ ನಿಮ್ಮ ಸಂಭಾವನೆ ಮೇಲೆ ಹತ್ತು ರೂಪಾಯಿ, ನಿಮ್ಮ ಮುಂದೆ ಸಿದ್ಧವಾಗುತ್ತದೆ" ಎಂದರು. ನನ್ನ ಕಛೇರಿ ಮೊದಲಾಯಿತು. ನಿರೀಕ್ಷಿಸಿದ್ದಂತೆಯೇ ಒಂದು ವರ್ಣ, ಒಂದು ಕೀರ್ತನೆಯಾಗುವುದನ್ನೇ ಕಾದಿದ್ದ ಜಮೀನ್ದಾರರು 'ಒಂದು ಜಾವಳಿ ಅಪ್ಪಣೆ ಯಾಗಬೇಕು' ಎಂದರು. ಹಾಡಿದೆ. ಬಂದಿತು ಒಳಗಿನಿಂದ ಸಂಭಾವನೆಯ ಹಣ, ಮೇಲೆ ಹತ್ತು ರೂಪಾಯಿ!

ಬೆಂಗಳೂರಿನಲ್ಲಿ ಅಡ್ವೋಕೇಟರಾಗಿದ್ದ ಡಿ. ರಾಘವಾಚಾರ್ಯರೂ ಸಹ ಭಾರಿ ಜಮೀನ್ದಾರರು, ದೊಡ್ಡ ರಸಿಕರು. ಬೆಂಗಳೂರಿಗೆ ನಾನು ಹೋದಾಗಲೆಲ್ಲ ನನ್ನ ಕಛೇರಿಯನ್ನೇರ್ಪಡಿಸುತ್ತಿದ್ದರು, ಸಂಭಾವನೆ ಮಾಡುತ್ತಿದ್ದರು. ಒಂದು ಬಾರಿ ಹೀಗೆ ನನ್ನ ಕಛೇರಿ ಏರ್ಪಟ್ಟಾಗ, ಕಛೇರಿ ಪ್ರಾರಂಭವಾಗುವುದಕ್ಕೆ ಮುನ್ನ ಜಮೀನ್ದಾರರು ಒಂದು ದಪ್ಪ ನೋಟ್‌ಬುಕ್ಕನ್ನು ನನ್ನ ಮುಂದಿಟ್ಟರು. 'ಏನಿದು?' ಎಂದೆ. 'ತೆಗೆದು ನೋಡೋಣವಾಗಲಿ' ಎಂದರು. ಪುಸ್ತಕದ

ತುಂಬ ಕೀರ್ತನೆಗಳ ಪಟ್ಟಿ, ರಾಗ ತಾಳಗಳ ವಿವರಗಳೊಂದಿಗೆ. 'ನಾನು ಇದು ವರೆಗೆ ಕೇಳಿರುವ ಕೀರ್ತನೆಗಳನ್ನೆಲ್ಲ ಗುರುತುಹಾಕಿದ್ದೇನೆ ಅದರಲ್ಲಿ. ನಾನು ಕೇಳದೆ ಇರುವ ಕೀರ್ತನೆಗಳನ್ನು ನೀವು ಹಾಡಿದ್ದೇ ಆದರೆ, ಕೀರ್ತನೆಯೊಂದಕ್ಕೆ ಐದು ರೂಪಾಯಿ' ಎಂದರು. ಸುಮಾರು ಮೂವತ್ತು ಕೀರ್ತನೆಗಳನ್ನು ಹಾಡಿದೆ. 'ಸಾಕು ಆಚಾರ್ಯರೇ, ಹಣ ಏರುತ್ತ ಹೋಗುತ್ತಿದೆ' ಎಂದು ನಕ್ಕರು ರಾಘವಾಚಾರ್ಯರು !

ಶೃಂಗೇರಿಯ ಮಠಾಧೀಶ್ವರ ಜಗದ್ಗುರು ಅಭಿನವ-ಭಾರತಿಯವರ ಹಿಂದಿನ ಸ್ವಾಮಿಗಳು ವಿನೋದಪ್ರಿಯರು, ಸಂಗೀತ, ಶಾಸ್ತ್ರಪಾರಂಗತರು. ಸಂಗೀತ ವಿದ್ವಾಂಸರೊಬ್ಬರು ತಮ್ಮ ಮಗಳ ಮದುವೆಗಾಗಿ ಸಹಾಯವನ್ನಪೇಕ್ಷಿಸಿ ಶ್ರೀಗಳವರನ್ನು ಆಶ್ರಯಿಸಿದ್ದರು. ಇದನ್ನು ತಿಳಿದ ಸ್ವಾಮಿಗಳು ವಿದ್ವಾಂಸರಿಗೆ ೫೦೦ ರೂಪಾಯಿಗಳ ಸಂಭಾವನೆಯನ್ನು ಕೊಡುವಂತೆ ಸಂಬಂಧಪಟ್ಟ ಮಠದ ಅಧಿಕಾರಿಗಳಿಗೆ ಅಪ್ಪಣೆಮಾಡಿದರು. 'ನನ್ನ ಸಂಗೀತವನ್ನು ಕೇಳುವ ಕೃಪೆ ಮಾಡಿ ಆ ಬಳಿಕ ಅನುಗ್ರಹಮಾಡಬೇಕು' ಎಂದು ವಿದ್ವಾಂಸರು ಪ್ರಾರ್ಥಿಸಿ ಕೊಂಡರು. ವಿದ್ವನ್ಮರ್ಯಾದೆಯಾಗಿ ಹಣವನ್ನು ತೆಗೆದುಕೊಳ್ಳಬೇಕೆಂದು ಆತನ ಇಷ್ಟ. ಸರಿ, ಮರುದಿನ ರಾತ್ರಿ ಕಛೇರಿ ಏರ್ಪಾಡಾಯಿತು. 'ಏನು ಹಾಡಬೇಕು ಎನ್ನುವುದನ್ನು ಶ್ರೀಗಳವರೇ ಅಪ್ಪಣೆಕೊಡಿಸಬೇಕು' ಎಂದರು ವಿದ್ವಾಂಸರು. 'ತಮಗೆ ಯಾವುದು ತೋಚುತ್ತದೆಯೋ ಅದನ್ನು ಹಾಡಬಹು ದಲ್ಲ' ಎಂದರು ಸ್ವಾಮಿಗಳು. 'ಇಲ್ಲ, ತಾವೇ ಅಪ್ಪಣೆಮಾಡಬೇಕು' ಎಂದರು ವಿದ್ವಾಂಸರು. 'ಹಾಗೆಯೇ ? ಹಾಗಾದರೆ ಸ್ವಲ್ಪ ಮಂಟಪಾಲಂಕಾರ ರಾಗವನ್ನು ಹಾಡಿ' ಎಂದರು ಶ್ರೀಗಳವರು. ವಿದ್ವಾಂಸರಿಗೆ ಕಣ್ಣುಗುಡ್ಡೆ ಮೇಲುಕೆಳಗಾಯಿತು. 'ಇವತ್ತು ಶಾರೀರ ಏಕೋ ಸ್ವಲ್ಪ ತೊಂದರೆ ಕೊಡುತ್ತಿದೆ. ಅಪ್ಪಣೆಯಾದರೆ, ನಾಳೆ ಹಾಡುತ್ತೇನೆ ಸನ್ನಿಧಿಯಲ್ಲಿ' ಎಂದು ಸ್ವಾಮಿಗಳ ಅನುಮತಿಯನ್ನು ಪಡೆದು ವಿದ್ವಾಂಸರು ಮೇಲೆದ್ದರು. ಮನೆಗೆ ಬಂದು ತಮ್ಮಲ್ಲಿದ್ದಬದ್ದ ಸಂಗೀತ ಗ್ರಂಥಗಳನ್ನೆಲ್ಲ ತಿರುವಿ ಹಾಕಿದರು. ಯಾವುದರಲ್ಲೂ ಮಂಟಪಾಲಂಕಾರ ರಾಗದ ಹೆಸರೇ ಇಲ್ಲ. ನಿಷ್ಕಾರಣವಾಗಿ ಕೈತೋರಿಸಿ ಅವಲಕ್ಷಣವೆನ್ನಿಸಿಕೊಂಡೆನಲ್ಲ ಎಂದು ಪರಿತಪಿಸಿದರು. ಮರುದಿನ ಸಂಜೆ ಪೆಚ್ಚುಮೋರೆ ಮಾಡಿಕೊಂಡು 'ಶ್ರೀಗಳವರು ಕ್ಷಮಿಸಬೇಕು. ತಾವು ನಿನ್ನೆ ಅಪ್ಪಣೆಕೊಡಿಸಿದ ಮಂಟಪಾಲಂಕಾರ ರಾಗದ ವಿಷಯ ಯಾವ ಗ್ರಂಥದಲ್ಲೂ ಉಲ್ಲೇಖವಾಗಿಲ್ಲ' ಎಂದರು ವಿದ್ವಾಂಸರು. 'ಇಷ್ಟೇನೆ ನಿಮ್ಮ

ಬುದ್ಧಿವಂತಿಕೆ? ಮಂಟಪವನ್ನು ಅಲಂಕರಿಸಲು ಏನನ್ನು ಉಪಯೋಗಿಸುತ್ತಾರೆ, ತಿಳಿಯದೆ?' ಎಂದು ಸ್ವಾಮಿಗಳು ಪ್ರಶ್ನಿಸಿದರು. ಆಗಲೂ ವಿದ್ವಾಂಸರಿಗೆ ಸುಳಿವು ಸಿಗಲಿಲ್ಲ. 'ಯಾಕೆ, ಮಂಟಪಾಲಂಕಾರಕ್ಕೆ ಬ್ಯಾಗಡೆ ಉಪಯೋಗಿಸುವುದನ್ನು ನೀವು ನೋಡಿಲ್ಲವೇ?' ಎನ್ನುತ್ತ ಸ್ವಾಮಿಗಳು ನಸುನಕ್ಕರು. 'ಓಹೋ ಬೇಗಡೆ ರಾಗವನ್ನೇ ಸ್ವಾಮಿಗಳು ಅಪ್ಪಣೆಕೊಡಿಸಿದ್ದು! ಈ ಅಲ್ಪಬುದ್ಧಿಗೆ ಹೊಳೆಯಲೇ ಇಲ್ಲ' ಎಂದು ಹೇಳಿ ಕಛೇರಿಯನ್ನು ವಿದ್ವಾಂಸರು ಪ್ರಾರಂಭ ಮಾಡಿದರು!

ಬೆಂಗಳೂರಿನ ಬಸವನಗುಡಿಯ ಸಮೀಪದಲ್ಲಿ ನರಹರಿರಾಯರ ಗುಡ್ಡ ಎಂಬ ಒಂದು ವಿಹಾರಕೇಂದ್ರವಿದೆ. Mount Joy ಎಂದು ಅದನ್ನು ಕರೆಯುತ್ತಾರೆ. ಗುಡ್ಡದ ಮೇಲೆ ಒಂದು ಈಶ್ವರ ದೇವಸ್ಥಾನ. ಒಂದು ಶಿವರಾತ್ರಿ ಹಬ್ಬದ ದಿನ ರಾತ್ರಿ ನಾನು, ಚೀಫ್ ಜಡ್ಜ್ ನರಹರಿರಾಯರ ಮಕ್ಕಳು ಮತ್ತು ಆಗ್ಗೆ ಅಸಿಸ್ಟೆಂಟ್ ಕಂಟ್ರೋಲರಾಗಿದ್ದ ಲಕ್ಷ್ಮೀನರಸಿಂಹರಾಯರೂ ಹೋಗಿದ್ದೆವು. ಜನರ ಜಾತ್ರೆ ಸೇರಿತ್ತು. ದಾಸಯ್ಯಗಳ ಶಂಖ, ಜಾಗಟೆ, ಹತ್ತಾರು ಶ್ರುತಿಗಳಲ್ಲಿ ನಾಗಸ್ವರ ವಾದನ, ಗೊಂದಲವೋ ಗೊಂದಲ! ಈ ಗದ್ದಲದ ಸಂತೆಯಲ್ಲಿ ರಸಿಕ ರಾಯರಿಗೆ ಒಂದು ಚಪಲ ಪ್ರಾರಂಭವಾಯಿತು.

"ಆಚಾರ್ಯರೇ!"

"ಏನು ರಾಯರೇ?"

"ಈಗ ಒಂದು ಹೊಸ ಕೀರ್ತನೆ ರಚನೆಯಾಗಬೇಕು. ಈಶ್ವರನ ಮೇಲಿರಬೇಕು. ಕೇತಾರಗೌಳ ರಾಗದಲ್ಲಿರಬೇಕು. ಮಾಡಬೇಕಲ್ಲ?"

"ಏನು ಹುಡುಗಾಟಿಕೆ ಸ್ವಾಮಿ ನಿಮ್ಮದು? ಈ ಅಪಸ್ವರದ ಮೇಳದಲ್ಲಿ ಯಾರಿಂದ ಸಾಧ್ಯ ಈ ಕೆಲಸ? ಕೂತಹಾಗೆ ನಿಂತಹಾಗೆ ಕೀರ್ತನೆಮಾಡುವುದು ಎಂದರೆ ತಮಾಷೆ ಮಾತಾಯಿತೇ?"

"ಅದೆಲ್ಲ ನನಗೆ ಗೊತ್ತಿಲ್ಲ. ಇವತ್ತು ನಿಮ್ಮಿಂದ ಆ ಕೆಲಸ ನಡದೇ ತೀರಬೇಕು. ಆ ಕೀರ್ತನೆಯನ್ನು ಕೇಳಿಯೇ ಮುಂದಿನ ಕೆಲಸ."

ಆ ರಸಿಕರ ಬಯಕೆಯ ಫಲ 'ಪಾಲಯ ಮಾಂ ಪರಮೇಶ್ವರ' ಎಂಬ ಕೇತಾರಗೌಳ ರಾಗದ ನನ್ನ ಕೀರ್ತನೆ.

ಕೇತಾರಗೌಳ ರಾಗಕ್ಕೆ ಸಂಪೂರ್ಣ ಮಾರುಹೋಗಿದ್ದ ಇನ್ನೊಬ್ಬ ರಸಿಕರೆಂದರೆ ಆಗ್ಗೆ ಅರಮನೆ ದರ್ಬಾರು ಭಕ್ಷಿಯವರಾಗಿದ್ದ ಎಚ್. ಲಿಂಗರಾಜೇ ಅರಸಿನವರು. ಸ್ವಲ್ಪದಿನ ಅವರಿಗೆ ನಾನು ಸಂಗೀತ ಪಾಠ ಹೇಳುತ್ತಿದ್ದೆ. ಒಂದಾ

ವೃತ್ತಿ ಭಕ್ಷಿಯವರು ಮಹಾರಾಜರೊಡನೆ ನೀಲಗಿರಿಯ ಪ್ರವಾಸ ಮುಗಿಸಿಕೊಂಡು ಮೈಸೂರಿಗೆ ಹಿಂದಿರುಗಿದ್ದರು. ಈ ವಿಷಯ ತಿಳಿದು, ಪಾಠ ಹೇಳುವುದಕ್ಕಾಗಿ ಭಕ್ಷಿಯವರ ಮನೆಗೆ ಹೋದೆ. ಆದೇ ತಾನೆ ಭಕ್ಷಿಯವರು ಪೇಟ ಅಂಗಿ ಯನ್ನು ಬಿಚ್ಚಿಡುತ್ತಿದ್ದರು. ಆಯಾಸಪರಿಹಾರಾರ್ಥವಾಗಿ ಮೈಕೈ ಮುರಿಯುತ್ತ 'ಶಂಭೋ ಶಂಕರ' ಎಂದರು ಗಟ್ಟಿಯಾಗಿ. ಒಡನೆಯೇ ಒಂದು ವಿಚಿತ್ರ ಬಯಕೆ ಮೂಡಿತು ಅವರಲ್ಲಿ. "ಗುರುಗಳೇ! ನನ್ನ ಒಂದು ಆಸೆಯನ್ನು ನಡೆಸಿಕೊಡ ಬೇಕು ಈಗ. 'ಶಂಭೋ ಶಂಕರ' ಎಂತಲೇ ಮೊದಲುಮಾಡಿಕೊಂಡು ಕೇತಾರಗೌಳ ರಾಗದಲ್ಲಿ ಒಂದು ರಚನೆ ಮಾಡಬೇಕು" ಎಂದರು. ಒಂದು ಹೊಸ ಕೀರ್ತನೆಯನ್ನು ಮಾಡಿ ಹಾಡುವವರೆಗೆ ಭಕ್ಷಿಯವರು ಮೇಲೇಳಲೇ ಇಲ್ಲ.

ಪ್ರಸಿದ್ಧ ಪಿಟೀಲು ವಿದ್ವಾಂಸರಾಗಿದ್ದ ತಿರುಕೋಡುಕಾವಲ್ ಕೃಷ್ಣಯ್ಯರ್ ಅವರ ಒಂದು ಕಛೇರಿಯಲ್ಲಿ ಒಂದು ವಿನೋದ ಜರುಗಿತು. ವಾದ್ಯದ ಮೇಲೆ ಕೃಷ್ಣಯ್ಯರ್ ಅವರಿಗೆ ಅದ್ಭುತವಾದ ಸ್ವಾಮಿತ್ವ. ಎಲ್ಲಿಂದ ಎಲ್ಲಿಯವರೆಗೆ ಬೇಕಾದರೂ ಲೀಲಾಜಾಲವಾಗಿ ಕೈ ಬೆರಳುಗಳನ್ನಾಡಿಸುತ್ತಿದ್ದರು. ಅಪಸ್ವರದ ನೆರಳು ಸಹ ಅವರ ವಾದ್ಯದ ಮೇಲೆ ಬೀಳುತ್ತಿರಲಿಲ್ಲ ಎಂಬುದಕ್ಕೆ ಒಂದು ನಿದರ್ಶನ ಇದು. ಒಮ್ಮೆ, ಪಕ್ಕವಾದ್ಯ ನುಡಿಸುತ್ತಿದ್ದರು. ಅಕಸ್ಮಾತ್ತಾಗಿ ಪಿಟೀಲಿನ ತಂತಿಯೊಂದು ಕಿತ್ತುಹೋಯಿತು. ತಾನು ಹಾಡಿದ ಸಂಗತಿಯನ್ನು ನುಡಿಸಲಾರದೆ ಉದ್ದೇಶಪೂರ್ವಕವಾಗಿಯೇ ತಂತಿಯನ್ನು ಕಿತ್ತು ಆಟ ಹೂಡಿ ದ್ದಾರೆ ಎಂದು ಗಾಯಕ ಕುಚೋದ್ಯದ ನಗೆಯನ್ನು ಬೀರಿದ. ಇದನ್ನು ಕಂಡು, ಉಂಗುಷ್ಟದಿಂದ ಹಿಡಿದು ನೆತ್ತಿಯವರೆಗೂ ಕೃಷ್ಣಯ್ಯರ್ ಅವರಿಗೆ ಬಿಸಿ ಏರಿತು. 'ನಿಮ್ಮ ಸಂಗೀತಕ್ಕೆ ಪಕ್ಕವಾದ್ಯ ನುಡಿಸಲು, ನಾಲ್ಕು ತಂತಿ ಗಳು ಬೇಕೆ? ಇಗೋ ಇನ್ನೂ ಎರಡು ತಂತಿಗಳನ್ನು ಕಿತ್ತೆಸೆಯುತ್ತೇನೆ' ಎಂದು ಹೇಳಿ ಕೃಷ್ಣಯ್ಯರ್ ಅವರು ಒಂದೇ ತಂತಿಯಲ್ಲಿ ಉಳಿದ ಕಛೇರಿಯೆಲ್ಲವನ್ನೂ ನಿರ್ವಹಿಸಿದರು. ಇಂಥ ನಿಪುಣತೆಯುಳ್ಳ ಕಲಾವಿದರು ನುಡಿಸುತ್ತಿರುವಾಗ್ಗೆ ಅಂದು ಹಠಾತ್ತಾಗಿ ಒಂದು ಅಪಸ್ವರ ಕೈತಪ್ಪಿ ಬಂದಿತು. 'ಶಹಭಾಸ್' ಎಂದ ಆ ಸಮಯಕ್ಕೆ ಸರಿಯಾಗಿ, ಸಭೆಯಲ್ಲಿದ್ದ ರಸಿಕ ಭೂಪತಿಯೊಬ್ಬ! ಕೃಷ್ಣಯ್ಯರ್ ಅವರು ಪಿಟೀಲನ್ನು ಪಕ್ಕಕ್ಕಿರಿಸಿ, ಆ ರಸಿಕನನ್ನುದ್ದೇಶಿಸಿ 'ರಸಿಕ ಮಹಾಶಯರೇ, ತಮಗೆ ಬೇಕಾದುದು ಬಂದಾಯಿತಲ್ಲ. ತಮಗೆ ಇನ್ನೇನು ಕೆಲಸ ಇಲ್ಲಿ? ಹೊರಡಬಹುದಲ್ಲ?' ಎಂದು ತಂಪಾಗಿ ಕೇಳಿದರು. ಇಡೀ ಸಭೆ ಘೊಳ್ಳೆಂದಿತು!

ಶೇಷಣ್ಣನವರ ಕಾಲದ ತರುವಾಯ ಚಾಮರಾಜ ಒಡೆಯರು ಸಂಗೀತ ವಿಭಾಗದ ಮೇಲ್ವಿಚಾರಣೆಯನ್ನು ವೀಣೆ ಭಕ್ಷಿ ಸುಬ್ಬಣ್ಣನವರಿಗೆ ವಹಿಸಿದರು. ಆ ದಿವಸಗಳಲ್ಲಿ ನಡೆದ ಒಂದು ಸ್ವಾರಸ್ಯ ಇದು. ಅರಮನೆಯಲ್ಲಿ ಯಾವ ಸಂಗೀತ ಕಛೇರಿಯಾಗಬೇಕಾಗಿದ್ದರೂ, ಯಾವ ವಿದ್ವಾಂಸರು ಪ್ರಭುಕಟಾಕ್ಷಕ್ಕೆ ಪಾತ್ರರಾಗಬೇಕಾಗಿದ್ದರೂ ಸುಬ್ಬಣ್ಣನವರ ಶಿಫಾರಸ್ಸು ಅತ್ಯಗತ್ಯವಾಗಿತ್ತು. ಹೀಗಿರುವಲ್ಲಿ ಉತ್ತರದೇಶದಿಂದ ಪ್ರಸಿದ್ಧ ಗಾಯಕನೊಬ್ಬ ರಾಜಸನ್ಮಾನವನ್ನು ಬಯಸಿ ಮೈಸೂರಿಗೆ ಬಂದ. ಸುಬ್ಬಣ್ಣನವರನ್ನು ಕಂಡಲ್ಲದೆ ಅರಮನೆಗೆ ಪ್ರವೇಶವಿಲ್ಲ, ಎಂಬ ಸಂಗತಿ ಆತನ ಕಿವಿಗೆ ಬಿತ್ತು. ಹೊಳೆ ನೀರಿಗೆ ಡೊಣೆನಾಯಕನ ಅಪ್ಪಣೆಯೇಕೆ? ಹಾಡುವವನು ನಾನು, ಕೇಳಿ ಸನ್ಮಾನ ಮಾಡಬೇಕಾಗಿರುವವರು ಪ್ರಭುಗಳು. ಈ ಮಧ್ಯೆ ಸುಬ್ಬಣ್ಣನವರ ಕೈವಾಡ ವೇಕೆ? ಎಂದು ಮುಂತಾಗಿ ಯೋಚಿಸಿದ. ಆ ವಿದ್ವಾಂಸ ಅವರನ್ನು ಭೇಟಿ ಮಾಡಲೇ ಇಲ್ಲ. ಒಬ್ಬಿಬ್ಬ ಅರಮನೆಯ ಅಧಿಕಾರಿಗಳನ್ನು ಕಂಡು, ದೊರೆಗಳ ಸನ್ನಿಧಿಯಲ್ಲಿ ಹಾಡಲು ಹೇಗೋ ಒಂದವಕಾಶವನ್ನು ಸಂಪಾದಿಸಿಕೊಂಡ.

ಈ ಸಂಗತಿಯನ್ನು ಸಕಾಲದಲ್ಲಿ ಸುಬ್ಬಣ್ಣನವರ ಕಿವಿಗೆ ಊದುವ ಮಿತ್ರರಿಗೆ ಅಭಾವವೇನೂ ಇರಲಿಲ್ಲ. ಇರಲಿ, ನೋಡೋಣ, ಎಂದುಕೊಂಡರು ಅವರು. ಅಂದು ಪ್ರಭುಗಳನ್ನು ಭೇಟಿಮಾಡಿದಾಗ, 'ಸುಬ್ಬು! ಉತ್ತರ ದೇಶದಿಂದ ಒಬ್ಬ ಹಿಂದೂಸ್ತಾನಿ ಗಾಯಕ ಬಂದಿದ್ದಾನೆ. ನಾಳೆ ಮಧ್ಯಾಹ್ನ ಮೂರು ಘಂಟೆಗೆ ಅವನ ಸಂಗೀತವನ್ನು ಏರ್ಪಡಿಸು' ಎಂದರು ದೊರೆಗಳು. ಅಗತ್ಯ ವಾಗಿ ಆಗಲಿ ಎಂದರು ಸುಬ್ಬಣ್ಣ. ಅಂದೇ ಸಂಜೆ ಆ ವಿದ್ವಾಂಸನಿಗೆ ಹೇಳಿ ಕಳುಹಿಸಿ, 'ನಾಳೆ ಬೆಳಗ್ಗೆ ಎಂಟು ಘಂಟೆಗೆ ನಿಮ್ಮ ಸಂಗೀತವಾಗಬೇಕೆಂದು ಪ್ರಭುಗಳ ಅಪ್ಪಣೆಯಾಗಿದೆ. ನೀವು ಅರ್ಧ ಘಂಟೆಗೆ ಮುಂಚೆ ಅರಮನೆಯ ಅಂಬಾವಿಳಾಸದ ಹೊರ ಕೊಠಡಿಯಲ್ಲಿ ಸಿದ್ಧವಾಗಿರಬೇಕು' ಎಂದು ತಿಳಿಸಿ ದರು. ಎಷ್ಟಾದರೂ ಅರಮನೆಯ ಸಮಾಚಾರ ಎಂದು ಆ ವಿದ್ವಾಂಸ ಬೆಳಗ್ಗೆ ಏಳು ಘಂಟೆಗೇನೇ ಗೊತ್ತಾಗಿದ್ದ ಸ್ಥಳದಲ್ಲಿ ಹಾಜರಾದ. ಧನುರ್ಮಾಸದ ಸಮಯ. ವಿಪರೀತ ಚಳಿ. ಎಷ್ಟುಹೊತ್ತಿಗೆ ಕರೆ ಬರುತ್ತದೋ ಎಂಬ ಆತುರ. ಎಲ್ಲವೂ ಸೇರಿ, ಆ ಚಳಿಯಲ್ಲೇ ಬೆವರತೊಡಗಿದ್ದ ಆ ವಿದ್ವಾಂಸ. ಪದ್ಧತಿ ಯಂತೆ ಸುಬ್ಬಣ್ಣನವರು ಬೆಳಗ್ಗೆ ಎಂಟು ಘಂಟೆಯ ಸಮಯಕ್ಕೆ ಅರಮನೆಗೆ ದಯಮಾಡಿಸಿದರು. ಪ್ರಭುಗಳನ್ನು ಕಂಡು ಕಛೇರಿಯ ಏರ್ಪಾಡುಗಳೆಲ್ಲ ಸಿದ್ಧವಾಗಿವೆ' ಎಂದು ಅರಿಕೆಮಾಡಿದರು. ಅರಮನೆಯಿಂದ ಹಿಂದಿರುಗುವಾಗ್ಗೆ, ಆ ವಿದ್ವಾಂಸರ ಬಳಿಗೆ ಹೋಗಿ—'ಪ್ರಭುಗಳಿಗೆ ಅರಿಕೆ ಮಾಡಿದ್ದಾಗಿದೆ.

ಇನ್ನು ಸ್ವಲ್ಪ ಹೊತ್ತಿನಲ್ಲೇ ಹೇಳಿ ಕಳುಹಿಸುತ್ತಾರೆ'—ಎಂದು ತಿಳಿಸಿ ಹೊರಟರು.

ಅಷ್ಟು ಹೊತ್ತಾಯಿತು, ಇಷ್ಟು ಹೊತ್ತಾಯಿತು, ದಾದಿಲ್ಲ, ಫಿರ್ಯಾದಿಲ್ಲ. ವಿದ್ವಾಂಸನಿಗೆ ಕಾದುಕಾದು ತಲೆ ಕಾಯುವುದಕ್ಕೆ ಮೊದಲಾಯಿತು. ಹೊಟ್ಟೆ ತಾಳ ಹಾಕುವುದಕ್ಕೆ ಮೊದಲಾಯಿತು. ಪಕ್ಕದಲ್ಲೇ ಇದ್ದ ಬಿಡದಿಗೆ ಅರ್ಧರ್ಧ ಘಂಟೆಗೂ ಹೋಗಿ ಟೀ ಬಸಿದುಕೊಳ್ಳುವುದು, ಬೀಡಿ ಸೇದಿ ಬರುವುದು— ಹೀಗೆ ನಡೆಯಿತು ಮಧ್ಯಾಹ್ನ ಮೂರು ಘಂಟೆಯವರೆಗೂ! ಅಷ್ಟು ಹೊತ್ತಿಗೆ ಸುಬ್ಬಣ್ಣನವರು ಮತ್ತೆ ಅರಮನೆಗೆ ಬಂದರು. 'ಸುಬ್ಬಣ್ಣ ಮಹಾರಾಜ್....' ಎಂದೆನ್ನುತ್ತ ದೈನ್ಯದಿಂದ ಅವರನ್ನು ವಿದ್ವಾಂಸ ನೋಡುತ್ತಿದ್ದಂತೆಯೇ, ಸುಬ್ಬಣ್ಣ ನವರು 'ಏಕೆ? ಇಲ್ಲಿಯವರೆಗೂ ಅಪ್ಪಣೆಯೇ ಆಗಲಿಲ್ಲವೆ? ಏನನ್ಯಾಯ ಇದು! ನೀವು ಬಂದು ಸಿದ್ಧವಿರುವುದಾಗಿ ನಾನು ಆಗಲೇ ತಿಳಿಸಿ ಹೋಗಿದ್ದೆ ನಲ್ಲ! ಮರತೇಬಿಟ್ಟರೋ ಏನೋ! ಒಳ್ಳೆಯದು. ನಾನು ಹೋಗಿ ಮತ್ತೆ ಅರಿಕೆಮಾಡುತ್ತೇನೆ' ಎಂದು ಹೇಳಿ ಒಳಗೆ ಹೋಗಿ, ಪ್ರಭುಗಳನ್ನು ಭೇಟಿಮಾಡಿ 'ಅಪ್ಪಣೆಯಾದರೆ ಆ ವಿದ್ವಾಂಸರನ್ನು ಬರಮಾಡುತ್ತೇನೆ' ಎಂದರು.

ವಿದ್ವಾಂಸರಿಗೆ ಕರೆ ಬಂದಿತು. ಕಾದು ಸತ್ತು ಸುಣ್ಣವಾಗಿದ್ದ ಆತನಿಗೆ, ಹಾಡುವದಂತಿರಲಿ, ಕುಳಿತುಕೊಳ್ಳಲೂ ತ್ರಾಣವಿರಲಿಲ್ಲ. ಹಾಡಲು ಬಾಯಿ ಬಿಡುವುದೇ ತಡ, ಬರಿಯ ಹೊಟ್ಟೆಯಲ್ಲಿ ಟೀ, ಬೀಡಿ ಹೊಗೆ ತುಂಬಿಕೊಂಡಿ ದ್ದರ ಪರಿಣಾಮವೋ ಏನೋ, ವಾಂತಿ ಪ್ರಾರಂಭವಾಯಿತು. 'ಏನು ಸುಬ್ಬಣ್ಣ ಇದು?' ಎನ್ನುತ್ತ ಪ್ರಭುಗಳು ಮೇಲೆದ್ದರು. 'ನಾನು ಏನು ಹೇಳಲಿ ಮಹಾಸ್ವಾಮಿ? ಹೊಟ್ಟೆಗಿಲ್ಲದ ಈತ ಯಾವ ಊರ ದಾಸಯ್ಯನೋ ಯಾರು ಕಂಡರು? ಇವನ ಕಛೇರಿಯನ್ನೇಕೆ ಮಹಾಸ್ವಾಮಿಯವರು ಕೇಳಬಯಸಿದರೋ ಕಾಣೆ' ಎಂದರು ಸುಬ್ಬಣ್ಣ. ಪೆಚ್ಚುಮೊರೆ ಹಾಕಿಕೊಂಡು ಹೊರಬಿದ್ದ ಆ ಪರಸ್ಥಳದ ವಿದ್ವಾಂಸ ತನ್ನ ದುರ್ದೈವವನ್ನು ಕಂಡುಕಂಡವರ ಮುಂದೆಲ್ಲ ತೋಡಿಕೊಂಡ. ಇವನ ಕತೆಯನ್ನು ಕೇಳಿದೊಡನೆಯೇ, ಇದೆಲ್ಲ ಸುಬ್ಬಣ್ಣ ನವರು ಹೂಡಿದ ನಾಟಕವೇ ಇರಬೇಕು ಎಂದರ್ಥವಾಯಿತು. 'ಹೋಗಿ, ಸುಬ್ಬಣ್ಣನವರ ಮೊರೆ ಹೋಗು' ಎಂದು ಉಪದೇಶಮಾಡಿದರು, ಆತನಿಗೆ. ಬಂದು ಸುಬ್ಬಣ್ಣನವರ ಕಾಲ ಮೇಲೆ ಬಿದ್ದ ಆ ಬಡಪಾಯಿ! ಅಲ್ಲಿಂದಾಚೆಗೆ ನಾಲ್ಕೈದು ದಿನಗಳ ಮೇಲೆ, ಬಂದು ಸೂಕ್ತಸಮಯವನ್ನು ಸಾಧಿಸಿ 'ಮಹಾಸ್ವಾಮಿ! ಆ ಪರಸ್ಥಳದ ವಿದ್ವಾಂಸನ ವಿಷಯ ಏನೋ ಎಂತೋ ಎಂದಿದ್ದೆ. ಮೊನ್ನೆ ಆತನ ಕಛೇರಿಯೊಂದನ್ನು ಕೇಳಿದೆ. ಅಮೋಘವಾಗಿ

ಹಾಡುತ್ತಾನೆ. ಅಂದು ಪಾಪ, ದೇಹಸ್ಥಿತಿ ನೆಟ್ಟಗಿರಲಿಲ್ಲವೋ ಏನೋ! ಅಪ್ಪಣೆಯಾದರೆ ನಾಳೆ ಅರಮನೆಗೆ ಬರಹೇಳುತ್ತೇನೆ' ಎಂದು ಪ್ರಭುಗಳಿಗೆ ಅರಿಕೆಮಾಡಿದರು. ಮಾರನೆಯ ದಿನ ಕಛೇರಿ ನಡೆಯಿತು. ರಾಜಮರ್ಯಾದೆಯನ್ನು ಪಡೆದ ಆ ವಿದ್ವಾಂಸ ಸುಬ್ಬಣ್ಣನವರಿಗೆ ಕೃತಜ್ಞತೆಯನ್ನು ಸಮರ್ಪಿಸಿದ.

ದಿವಾನ್ ಶೇಷಾದ್ರಿಅಯ್ಯರ್ ಅವರ ಮನೆಯಲ್ಲಿ ಮದುವೆಯ ಊಟ. ಶೇಷಣ್ಣ, ಸುಬ್ಬಣ್ಣ, ನಾನು ಎಲ್ಲರೂ ಭೋಜನಕ್ಕೆ ಹೋಗಿದ್ದೆವು. ಊಟಕ್ಕೆ ಕುಳಿತುಕೊಳ್ಳುವ ಮುನ್ನ 'ಇಲ್ಲಿ ಬನ್ನಿ ಆಚಾರ್ಯರೆ' ಅಂತ ಸುಬ್ಬಣ್ಣ ನನ್ನನ್ನು ಕರೆದರು. 'ಏನು ವಿಷಯ?' ಅಂದೆ. 'ನೀವು ಸುಮ್ಮನೆ ಬನ್ನಿ ನನ್ನ ಸಂಗಡ. ವಿಷಯ ಏನೂ ಅಂತ ತಾನೇ ಅರ್ಥವಾಗುತ್ತೆ. ಇಷ್ಟೇಕೆ ಆತುರ?' ಅಂದರು. ಮೂಕನಂತೆ ಅವರನ್ನು ಹಿಂಬಾಲಿಸಿದೆ. ನೆಟ್ಟಗೆ ಅಡಿಗೆಯ ಮನೆಗೆ ಕರೆದುಕೊಂಡು ಹೋದರು.

"ಭಟ್ಟರೆ!"

"ಏನು ಯಜಮಾನರೇ?"

"ನೋಡಿ, ನೀವು ಬಡಿಸುವಾಗ ಒಂದು ಕೆಲಸ ಮಾಡಬೇಕು. ಇಲ್ಲಿ ನೋಡಿ (ನನ್ನ ಕಡೆ ತೋರಿಸಿ) ಇವರಿಗೂ ನನಗೂ ನಡುವೆ ನಮ್ಮ ಸ್ನೇಹಿತರೊಬ್ಬರು ಊಟಕ್ಕೆ ಕುಳಿತಿದ್ದಾರೆ, ಅವರಿಗೆ ಮೈಯಲ್ಲಿ ಸ್ವಸ್ಥವಿಲ್ಲ; ಆದರೆ ವಯೋಧರ್ಮ, ಬಹಳ ಚಪಲ. ಅನ್ನ ಸಾರು ಎರಡು ಹೊರತು ಬೇರೆ ಯಾವುದನ್ನೂ ಅವರ ಎಲೆಗೆ ಬಡಿಸಬೇಡಿ."

"ಹಾಗೆಯೇ ಆಗಲಿ ರಾಯರೆ" ಅಂದರು ಭಟ್ಟರು.

ಕಷ್ಟಪಟ್ಟು ನಗುವನ್ನು ತಡೆದುಕೊಂಡೆ. ಶೇಷಣ್ಣನವರ ಅಕ್ಕಪಕ್ಕಗಳಲ್ಲಿ ಅವರ ಯೋಗಕ್ಷೇಮದ ಜವಾಬ್ದಾರಿಯನ್ನು ವಹಿಸಿದ್ದ ಸುಬ್ಬಣ್ಣನವರೂ ನಾನೂ ಕುಳಿತೆವು. ಭಟ್ಟರು ಪರಿಚಾರಕರಿಗೆ ವಿಷಯ ತಿಳಿಸಿದ್ದರು. ಅದೇ ರೀತಿ, ವಿವಿಧ ಭಕ್ಷ್ಯಭೋಜ್ಯಗಳನ್ನು ನನ್ನೆಲೆಗೆ ಬಡಿಸಿ, ಮಧ್ಯದೆಲೆಯನ್ನು ಬಿಟ್ಟು, ಸುಬ್ಬಣ್ಣನವರ ಎಲೆಗೆ ಬಡಿಸುತ್ತಿದ್ದರು. ಶೇಷಣ್ಣನವರಿಗೆ ಇದರ ಕಾರಣ ತಿಳಿಯಲಿಲ್ಲ. ಪದಾರ್ಥಗಳ ವಾಸನೆ ಮೂಗಿಗಡರುತ್ತಿದೆ, ಬಾಯಲ್ಲಿ ನೀರೂರುತ್ತಿದೆ; ಆದರೆ ಬಾಯಿಬಿಟ್ಟು ಕೇಳಲು ಬಿಂಕ. ಕೊನೆಗೆ ತಡೆಯಲಾರದೇ ಬಡಿಸುವವರನ್ನು ಕೇಳಲೆತ್ನಿಸಿದರು. ಆದರೆ, ಬಿಕ್ಕಲು, ಪಾಪ! ಇವರು ಪ್ರಶ್ನೆ ಕೇಳುವಷ್ಟರಲ್ಲಿ ಬಡಿಸುವವನು ನಾಲ್ಕು ಎಲೆ ದಾಟಿ ಮುಂದಿರುತ್ತಿದ್ದ. ಏನೂ ತಿಳಿಯದವರಂತೆ ಸುಬ್ಬಣ್ಣನವರು ತಿಂದು ತೇಗು

ತ್ತಿದ್ದರು. ಅಯ್ಯೋ ಪಾಪ, ಅಂತ ನನಗೆ ಅನ್ನಿಸಿದರೂ ಸುಬ್ಬಣ್ಣನವರ ಅಪ್ಪಣೆಯ ಮೇರೆಗೆ ಸುಮ್ಮನಿರಬೇಕಾಯಿತು.

ಊಟ ಮುಗಿಯುವ ವೇಳೆಗೆ ದಿವಾನ್‌ರವರು ಎಲ್ಲರ ಪಂಕ್ತಿಗೂ ಬಂದು ಉಪಚಾರದ ಮಾತುಗಳನ್ನಾಡುತ್ತಿದ್ದರು. ಶೇಷಣ್ಣನವರ ಎಲೆ ಖಾಲಿ ಇದ್ದುದನ್ನು ನೋಡಿ ಆಶ್ಚರ್ಯವಾಯಿತು ಅವರಿಗೆ. ಹಿಂದೆಯೇ ಬರುತ್ತಿದ್ದ ಭಟ್ಟರು ಸುಬ್ಬಣ್ಣನವರು ಹೇಳಿದ, ಸಮಾಚಾರವನ್ನು ತಿಳಿಯಪಡಿಸಿದರು. 'ಏನು ಶೇಷಣ್ಣನವರೇ! ಪಾಪ, ಮೈಯಲ್ಲಿ ಸ್ವಸ್ಥವಿಲ್ಲವಂತೆ! ಎಷ್ಟು ದಿನದಿಂದ, ಏನಾಗಿದೆ?' ಅಂತ ಪ್ರಶ್ನಿಸಿದರು, ದಿವಾನರು. ಶೇಷಣ್ಣ ಕೋಪದ ಕಿಡಿಗಳನ್ನು ಕಾರುತ್ತ, ಒಂದು ಬಾರಿ ನನ್ನ ಕಡೆಗೂ, ಇನ್ನೊಂದು ಬಾರಿ ಸುಬ್ಬಣ್ಣನವರ ಕಡೆಗೂ ನೋಡಿದರು. ಸುಬ್ಬಣ್ಣನವರ ನಗೆಗಡಲು ತಡೆಯಿಲ್ಲದೆಯೇ ಹೊರಹೊಮ್ಮಿತು. ಶೇಷಣ್ಣನವರ ಊಟ ಮೊದಲಿನಿಂದ ಪ್ರಾರಂಭವಾಯಿತು!

ಒಂದಾವೃತ್ತಿ ಬೆಟ್ಟದ ಮೇಲೆ ತೆಪ್ಪೋತ್ಸವದಲ್ಲಿ ನಾನೂ ಕೃಷ್ಣಪ್ಪನವರೂ ಜೊತೆಯಲ್ಲಿ ಹಾಡಬೇಕೆಂದು ಮಹಾರಾಜರ ಅಪ್ಪಣೆಯಾಯಿತು. ಆಗಲೂ ಒಂದು ಪೇಚಾಟ ತಲೆದೋರಿತು. ನಾರಾಯಣ ರಾಗದ 'ಮಹಿಷಾಸುರ ಮರ್ದಿನಿ' ಎಂಬ ದೀಕ್ಷಿತರ ಕೃತಿಯನ್ನು ಹಾಡುವಂತೆ ಹೇಳಿದರು ಪ್ರಭುಗಳು. ಇಬ್ಬರಿಗೂ ಆ ಕೀರ್ತನೆ ಪಾಠವಿರಲಿಲ್ಲ. 'ಪಲ್ಲವಿಯ ಥಾಟೆ ಮಾತ್ರ ನನಗೆ ಗೊತ್ತು' ಎಂದು ಪಿಟೀಲು ನುಡಿಸುತ್ತಿದ್ದ ದೊಡ್ಡ ವೆಂಕಟರಮಣಯ್ಯನವರು ಹಾಡಿ ತೋರಿಸಿದರು. ಸರಿ ಅಂದಿದ್ದೆ, ತೆಪ್ಪ ಮಹಾಸ್ವಾಮಿಯವರಿದ್ದ ದಡದಿಂದ ಈಚೆ ದಡಕ್ಕೆ ಬಂದಾಗ ಆ ಪಲ್ಲವಿಯಷ್ಟನ್ನೇ ಗಟ್ಟಿಮಾಡಿಕೊಂಡು, ತೆಪ್ಪ ಮಹಾಸ್ವಾಮಿಯವರ ಹತ್ತಿರ ಹೋದ ಹೋದ ಹಾಗೆ ಕೃಷ್ಣಪ್ಪನವರು ಒಂದಾವರ್ತಸ್ವರ, ನಾನೊಂದಾವರ್ತಸ್ವರ ಹಾಡಿ ಪಲ್ಲವಿಯನ್ನೆತ್ತುತ್ತಿದ್ದೆವು. ತೆಪ್ಪ ಮಹಾರಾಜರಿಂದ ದೂರವಾಯಿತೆಂದರೆ ಸುಮ್ಮನಾಗುತ್ತಿದ್ದೆವು. ಹೀಗಾಗಿ ಅಂದಿನ ಪರೀಕ್ಷೆ ಮುಗಿಯಿತು. 'ಸದ್ಯ ಬಡಜೀವ ಇಂದಿಗೆ ಬದುಕಿತು' ಅಂತಂದುಕೊಂಡು ಒಬ್ಬರನ್ನೊಬ್ಬರು ನೋಡಿ ನಕ್ಕೆವು. ಮಾರನೆಯ ದಿನವೇ ಬಂತು ಕರೆ ಇಬ್ಬರಿಗೂ ಅರಮನೆಯಿಂದ. 'ನಿನ್ನೆ ತಾವು ಹಾಡಿದ ಕೀರ್ತನೆ ಬಲು ಸೊಗಸಾಗಿತ್ತು. ಅನುಪಲ್ಲವಿ, ಚರಣಗಳನ್ನೂ ಕೇಳಬೇಕೆಂಬ ಅಪೇಕ್ಷೆಯಿದೆ ನಮಗೆ. ಪೂರ್ತಾ ಕೀರ್ತನೆಯನ್ನು ಪಾಠಮಾಡಿಕೊಂಡು ನಾಳಿದ್ದು ಸಂಜೆ ಹಾಡಿದರೆ ಸಂತೋಷ' ಎಂದರು ಪ್ರಭುಗಳು. ತುಂಟು ನಗೆಯೊಂದು ತುಟಿಯ

ಜಿಗುಪ್ಸೆ ಕವಿದುಕೊಂಡ ಸನ್ನಿವೇಶದಲ್ಲಿ ರಾಮಚಂದ್ರನನ್ನು ಮರೆಹೊಕ್ಕು ಹಾಡಿದ ಕೀರ್ತನೆ:

ಭಾವಯೇಹಂ ರಘುವೀರಂ।
ಶ್ರೀಕರಂ ಸೇವಕಾರ್ತಿಹರಣಚತುರಂ ಕರುಣಾಕರಂ ॥ ಪಲ್ಲವಿ ॥
ಜೀವನೇತಾರಂ ಜಾನಕೀ ಮನೋಹರಂ।
ರಾವಣಾದ್ಯರಿಹರಂ ರತಿಪತಿಸುಂದರಂ ॥ ಅನು ಪಲ್ಲವಿ ॥
ವಾಸರಾಧಿಪತಿಕುಲಸಂಜಾತಂ।
ಭಾಸಮಾನಮಣಿಹಾರಶೋಭಿತಂ ॥
ಭೂಸುರೌಘಾರ್ಚಿತಂ ವಾಸವಾದಿಸನ್ನುತಂ।
ವಾಸುದೇವಂ ಹರಿಂ ವಾತಾತ್ಮಜಾವನರತಂ ॥ ಚರಣ ॥

ಅರಮನೆಯ ಚಂದ್ರಶಾಲೆಯಲ್ಲಿ ಪ್ರತಿ ದಿನ ಸಂಜೆ ಸಂಗೀತ ವಿದ್ವಾಂಸರು ಸೇರಿ ಅವರವರಿಗೆ ಗೊತ್ತುಮಾಡಿದ್ದ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವ ನಿಯಮವಿದ್ದಿತು. ನಾನೂ ಸಹ ಕೆಲವರಿಗೆ ಪಾಠ ಹೇಳುತ್ತಿದ್ದೆ. ಪಾಠಪ್ರವಚನಗಳು ಮುಗಿದು ಶಿಷ್ಯರು ತೆರಳಿದಮೇಲೆ ನಾವು ನಾವು ಸೇರಿ ಲೋಕಾಭಿರಾಮವಾಗಿ ಕೆಲಕಾಲ ಮಾತಾಡಿ ಆ ಬಳಿಕ ಹೊರಡುತ್ತಿದ್ದೆವು. ಹೀಗಿರುವಲ್ಲಿ, ಒಂದು ದಿನ ಕಥನಕುತೂಹಲ ರಾಗ ಪ್ರಸ್ತಾಪತ್ವೇನ ಚರ್ಚೆಗೆ ಬಂದಿತು. ಅಲ್ಲಿದ್ದ ವಿದ್ವಾಂಸರೊಬ್ಬರು ನಾನು ಹೇಳಿದ ಯಾವುದೋ ಒಂದು ಮಾತಿಗೆ ಪ್ರತಿಯಾಗಿ "ಮಾತನಾಡಿದಷ್ಟು ಸುಲಭವಲ್ಲ ಕೆಲಸಮಾಡಿ ತೋರಿಸುವುದು ಆಚಾರ್ಯರೇ!" ಎಂದು ಸ್ವಲ್ಪ ಕೆಣಕಿದರು. ಅವರ ಮಾತಿನಿಂದ ನನಗೂ ಸ್ವಲ್ಪ 'ಚುರ್' ಎಂದಿತು! "ಆಡಿದ್ದನ್ನು ಮಾಡಿಯೇ ತೋರಿಸುತ್ತೇನೆ. ಸ್ವಲ್ಪ ಕಾಗದ ಸೀಸದಕಡ್ಡಿಯನ್ನು ತೆಗೆದುಕೊಂಡು ಬರೋಣವಾಗಲಿ" ಎಂದು ವಿದ್ವಾಂಸರ ಸವಾಲಿಗೆ ಪ್ರತ್ಯುತ್ತರವಿತ್ತೆ. ಆ ಹಠದ ಭರದಲ್ಲಿಯೇ ಕಥನ ಕುತೂಹಲ ರಾಗದಲ್ಲಿ ಒಂದು ಸ್ವರಜತಿ, 'ನೀವೇ ರಕ್ಷಕುಡು' ಎಂಬ ಒಂದು ವರ್ಣ ಮತ್ತು 'ನೀಕೇಲದಯರಾದು ರಾಮ' ಎಂಬ ಒಂದು ಕೀರ್ತನೆ ರಚಿತವಾದವು.

"ಆಚಾರ್ಯರ ಕೀರ್ತನೆಗಳನ್ನು ಅಭ್ಯಾಸಮಾಡಬೇಕಾದರೆ ಸಾಧಕ ಬೇರೆ ಬೇಕೆ!" ಎಂದು ಇದೇ ವಿದ್ವಾಂಸರು ಒಮ್ಮೆ ಕುಚೋದ್ಯದ ಮಾತುಗಳನ್ನಾಡಿದುದಾಗಿ ನನಗೆ ವರದಿಯಾಯಿತು. ಅಂದು ಅವರು ಆ ಕೊಂಕು ನುಡಿಗಳನ್ನಾಡದೇ ಇದ್ದಲ್ಲಿ, ಮೋಹನ ರಾಗದ 'ರಾರಾ ರಾಜೀವಲೋಚನರಾಮ', ಶಂಕರಾಭರಣರಾಗದ 'ಹರಿನಿಭಜಿಂಚೆ ಭಾಗ್ಯಮು', ಕಾಂಬೋಧಿ ರಾಗದ

'ಮರಿಮರಿವಚ್ಚುನ ಮಾನವ ಜನ್ಮಮು,' ಕಲ್ಯಾಣಿರಾಗದ "ಕನಿಕರ ಮುತೋನನ್ನು ಬ್ರೋವರಾದ," ಮುಂತಾದ ಕೀರ್ತನೆಗಳು ಜನ್ಮತಾಳುತ್ತಿದ್ದವೋ ಇಲ್ಲವೋ ! ತತ್ಕಾಲದಲ್ಲಿ ಅವರ ಮೇಲಿನ ಜಿದ್ದಿನಿಂದ ಆ ಕೀರ್ತನೆಗಳನ್ನು ರಚಿಸಿದೆ ನಾದರೂ ಕೆಲಕಾಲದ ಮೇಲೆ ಆ ರಚನೆಗಳಿಗೆ ಕಾರಣಕರ್ತರಾದ ಆ ಮಿತ್ರರಿಗೆ ಮನಸ್ಸಿನಲ್ಲೇ ವಂದಿಸಿದೆ.

ಮೈಸೂರಿನಲ್ಲಿ ತ್ಯಾಗರಾಜರ ಆರಾಧನೋತ್ಸವವನ್ನು ವೈಭವದಿಂದ ಆಚರಿಸಲು ಮೊದಲಾದುದು ಮುತ್ತಯ್ಯಭಾಗವತರ ನೇತೃತ್ವದಲ್ಲಿ. ಹಳೆಯ ಅಗ್ರಹಾರದ ಕೊಳಲುಗೋಪಾಲಕೃಷ್ಣಸ್ವಾಮಿ —ದೇವಸ್ಥಾನದಲ್ಲಿ ಮೊದಲ ವರ್ಷದ ಉತ್ಸವವು ಜರುಗಿತು. ಪ್ರತಿಯೊಬ್ಬ ವಿದ್ವಾಂಸರೂ ಉತ್ಸವದಲ್ಲಿ ಭಾಗ ವಹಿಸಿ ತ್ಯಾಗಯ್ಯನವರ ಕೀರ್ತನೆಗಳನ್ನು ಹಾಡಿ, ನುಡಿಸಿ, ತಮ್ಮ ತಮ್ಮ ಭಕ್ತಿ ಕಾಣಿಕೆಗಳನ್ನು ಸಮರ್ಪಣೆಮಾಡಿದರು. ರಾಮಭಕ್ತಾಗ್ರಣಿಯಾಗಿ ಮೆರೆದು ಕರ್ಣಾಟಕಸಂಗೀತ ಸೌಧಕ್ಕೆ ಕಲಶಪ್ರಾಯರೆನಿಸಿಕೊಂಡ ಆ ಮಹಾನುಭಾವರ ಪವಿತ್ರಸ್ಮರಣಾರ್ಥವಾಗಿ ಒಂದು ಕೀರ್ತನೆ ಮಾಡಿ ಅವರ ಅಡಿದಾವರೆಯಲ್ಲಿ ಅದನ್ನು ಸಮರ್ಪಿಸಬೇಕೆಂಬ ಬಯಕೆ ಮೂಡಿತು ನನ್ನಲ್ಲಿ. ಹಾಡಲು ನನ್ನ ಸರದಿ ಬರುವ ಸಮಯಕ್ಕೆ ಒಂದು ಕೀರ್ತನೆಯನ್ನು ಮನಸ್ಸಿನಲ್ಲೇ ರೂಪಿಸಿ ಕೊಂಡು ನನ್ನ ಸರದಿ ಬಂದಾಗ ಅಯ್ಯನವರ ಸನ್ನಿಧಿಯಲ್ಲಿ ಅದನ್ನು ಅರ್ಪಿಸಿದೆ. ಆ ಕೃತಿ ಇದು :

ಶ್ರೀಮದಾದಿ ತ್ಯಾಗರಾಜ ಗುರುವರಂ ನಮಾಮ್ಯಹಂ ॥ ಪ ॥
ಭೂಮಿಜಾರಮಣ ಚರಣಕಮಲ ಭಜನದುರಂಧರಂ ॥ ಅ. ಪ ॥
ಸಕಲಲೋಕಸಂಸೇವಿತ ಸಂಗೀತ ಸಾಹಿತ್ಯ
ಸಾರಭರಿತ ಸುಲಲಿತಪದ ಸಮ್ಮೇಳನ ಸಂಶೋಭಿತ ।
ಸಂಕೀರ್ತನ ಸುರಜನಸಮುಪಾರ್ಜಿತ ಸತ್ಕೀರ್ತಿಂ
ಸುರಮುನಿವರಕಾರುಣ್ಯ ಸಂಜಾತ ಸುಜ್ಞಾನಂ ।
ಸಾಮಗಾನಲೋಲ ವಾಸುದೇವ ಹೃದಯಸುಸ್ಥಿತಂ
ಸುಜನ ಹೃದಯಜಲಧಿಚಂದ್ರಮಮಲಸಂಜಾತಂ ॥

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಕ್ಷಿಣ ದೇಶದಿಂದ ಮೈಸೂರಿಗೆ ಸುಪ್ರಸಿದ್ಧ ನಾಗಸ್ವರ ವಿದ್ವಾಂಸರೊಬ್ಬರು ಆಗಮಿಸಿದ್ದರು. ಅವರ ಪಾಂಡಿತ್ಯಕ್ಕೆ ಮೆಚ್ಚಿ ಪ್ರಭುಗಳು ಅವರಿಗೆ ವಿಶೇಷ ಸನ್ಮಾನ ದಯ ಪಾಲಿಸಿದರು. ಪ್ರಭುಗಳೊಡನೆ ಮಾತನಾಡುವ ಒಂದು ಸಂದರ್ಭದಲ್ಲಿ ಆ ವಿದ್ವಾಂಸರು "ಕರ್ಣಾಟಕ ಸಂಗೀತಕ್ಕೆ ಎಪ್ಪತ್ತೆರಡು ಮೇಳಗಳ ಆವಶ್ಯಕತೆಯೇ

ಇಲ್ಲ. ಲೆಕ್ಕಕ್ಕೆ ಎಪ್ಪತ್ತೆರಡು ಮೇಳಕರ್ತರಾಗಗಳಿವೆಯೇ ಹೊರತು ಮೂವತ್ತಾರು ಮೇಳಕರ್ತಗಳಲ್ಲಿ ರಚನೆಗಳೇ ಇಲ್ಲ. ಅವನ್ನು ಸಾಮಾನ್ಯವಾಗಿ ಯಾರೂ ಬಳಸುವದಿಲ್ಲ. ಆದ್ದರಿಂದ ಆ ಮೂವತ್ತಾರು ರಾಗಗಳನ್ನು ಧಾರಾಳವಾಗಿ ಕಿತ್ತುಹಾಕಿ ಮೇಳಕರ್ತರಾಗಗಳ ಸಂಖ್ಯೆಯನ್ನು ಅರ್ಧಕ್ಕೆ ಇಳಿಸಬಹುದು" ಎಂದರಂತೆ. ಅವರ ವಾದಸರಣಿ ಪ್ರಭುಗಳಿಗೆ ಹಿಡಿಸಲಿಲ್ಲ. ಅವರೊಡನೆ ಆ ಕ್ಷಣವೇ ವಾದ ಮಾಡುವುದು ಸರಿಯಲ್ಲವೆಂದುಕೊಂಡು ಸುಮ್ಮನಾದರು. ಆ ವಿದ್ವಾಂಸರನ್ನು ಕಳುಹಿಸಿಕೊಟ್ಟ ಒಡನೆಯೇ ಆಸ್ಥಾನವಿದ್ವಾಂಸರನ್ನು ಬರಮಾಡಿಕೊಂಡು ನಡೆದ ಸಂಗತಿಗಳೆಲ್ಲವನ್ನೂ ವಿವರಿಸಿ "ಯಾವ ಯಾವ ಮೇಳಕರ್ತಗಳಲ್ಲಿ ರಚನೆಗಳಿಲ್ಲವೋ ಅವುಗಳಲ್ಲೆಲ್ಲ ವರ್ಣ, ಕೀರ್ತನೆಗಳನ್ನು ಕೂಡಲೇ ರಚಿಸತಕ್ಕದ್ದು. ಆ ರಾಗಗಳು ಬಳಕೆಯಲ್ಲಿಲ್ಲದೇ ಇಲ್ಲ; ತಿಳಿಯದೇ ದೊಡ್ಡವರು ಎಪ್ಪತ್ತೆರಡು ಮೇಳಕರ್ತಗಳನ್ನು ಏರ್ಪಡಿಸಿಲ್ಲ; ಎಂಬ ಅಂಶವನ್ನು ಆ ಪರಸ್ಥಳದ ವಿದ್ವಾಂಸರಿಗೆ ತಿಳಿಸಬೇಕಾಗಿದೆ" ಎಂದು ಅಪ್ಪಣೆಕೊಡಿಸಿದರು. ಈ ಸನ್ನಿವೇಶದಲ್ಲಿ ಋಷಭಪ್ರಿಯರಾಗದ 'ಮಹಾತ್ಮುಲೇ ತೆಲಿಯಲೇರು' ಮುಂತಾದ ಕೀರ್ತನೆಗಳು ರೂಪಗೊಂಡವು.

ಹೀಗೆ ಕೆಲವು ಸನ್ನಿವೇಶಗಳ ನಿಮಿತ್ತ ಹಲಕೆಲವು ಕೀರ್ತನೆಗಳು ರಚಿತವಾದರೆ, ಮನೋಧರ್ಮ ಒದಗಿಬಂದಾಗ ತಾವಾಗಿ ರೂಪಗೊಂಡ ಕೀರ್ತನೆಗಳು ಇನ್ನುಳಿದವು. ಶ್ರೀರಾಮನಾಮ ಸಂಕೀರ್ತನದಿಂದ ಮೊದಲುಗೊಂಡು ನಡೆದು ಬಂದ ಈ ಸಂಗೀತ ರಚನೆಯ ಕಾರ್ಯ, ನನ್ನ ಈ ಇಳಿವಯಸ್ಸಿನಲ್ಲಿ ಶ್ರೀಮದ್ರಾಮಾಯಣದ ನೃತ್ಯನಾಟಕ ಸಂಗೀತ ಸಂಯೋಜನೆಗೆ ಮೀಸಲಾದುದು ನನ್ನ ಪೂರ್ವ ಸುಕೃತ. ಜೀವನದ ಒಂಭತ್ತು ದಶಕಗಳನ್ನು ಹುಟ್ಟಿ ಬೆಳೆದ ಮೈಸೂರಿನಲ್ಲಿ ಕಳೆದು, ಆ ಬಳಿಕ ಮದ್ರಾಸಿಗೆ ತೆರಳಿ, ಈ ಮಹತ್ಕಾರ್ಯವನ್ನು ಕೈಗೊಳ್ಳುತ್ತೇನೆಂಬುದನ್ನು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ. ಈ ನನ್ನ ಭಾಗ್ಯಕ್ಕೆ ಕಾರಣಕರ್ತರಾದವರು ನನ್ನ ಪರಮಮಿತ್ರರಾಗಿದ್ದ ಟೈಗರ್ ವರದಾಚಾರ್ಯರು ಮತ್ತು ನನ್ನನ್ನು ತನ್ನ ಹೆತ್ತ ತಂದೆಗಿಂತ ಹೆಚ್ಚು ಅಕ್ಕರೆಯಿಂದ ನೋಡಿಕೊಳ್ಳುತ್ತಿರುವ ಶ್ರೀಮತಿ ರುಕ್ಮಿಣೀದೇವಿ. ಕಲಾಕ್ಷೇತ್ರದ ಉಪಯೋಗಕ್ಕಾಗಿ ಕೆಲವು ನೃತ್ಯನಾಟಕಗಳನ್ನು ನುರಿತ ವಿದ್ವಾಂಸರಿಂದ ಮಾಡಿಸಬೇಕೆಂದು ರುಕ್ಮಿಣೀದೇವಿ ಮೊದಲೇ ನಿಶ್ಚಯಿಸಿಕೊಂಡಿದ್ದರಂತೆ. ಅದರಂತೆ ಟೈಗರ್ ವರದಾಚಾರ್ಯರಿಗೆ ಕುಮಾರಸಂಭವವನ್ನೂ ಅವರ ತಮ್ಮ ಕೃಷ್ಣಮಾಚಾರಿಯವರಿಗೆ ಕುತ್ರಾಲ್ ಕುರವಂಜಿಯನ್ನೂ ನಿಯಮಿಸಿ, ನನ್ನ ಪಾಲಿಗೆ ಶ್ರೀಮದ್ರಾಮಾಯಣವನ್ನು ಬಿಟ್ಟದ್ದು ದೈವೇಚ್ಛೆ!

ರಾಮಾಯಣ ನೃತ್ಯನಾಟಕದ ಮೊದಲನೆಯ ಘಟ್ಟ ಸೀತಾಸ್ವಯಂವರ. ಈ ಭಾಗವನ್ನು ರಂಗಮಂಟಪದ ಮೇಲೆ ತರುವ ಪೂರ್ವಭಾವಿಯಾಗಿ ನಡೆದ ಒಂದು ಪ್ರಸಂಗವನ್ನು ನೆನೆದರೆ ಈಗಲೂ ನನಗೆ ರೋಮಾಂಚನವಾಗುತ್ತದೆ. ರಸಿಕಮಹಾಶಯರ ಮುಂದೆ ಪ್ರದರ್ಶಿಸುವುದಕ್ಕೆ ಮುನ್ನ ತಿರುಪತಿಯ ಶ್ರೀನಿವಾಸನ ಚರಣಕಮಲದಲ್ಲಿ ಅದನ್ನು ಸಮರ್ಪಿಸಬೇಕೆಂಬ ಆಸೆ ನನ್ನಲ್ಲಿ ಮೂಡಿತು. ರುಕ್ಮಿಣೀದೇವಿಯವರಿಗೆ ನನ್ನ ಆಶಯವನ್ನು ತಿಳಿಸಿದೆ. ಅಗತ್ಯವಾಗಿ ಆಗಬಹುದೆಂದು ಹೇಳಿ ಒಡನೆಯೇ ತಿರುಪತಿಗೆ ಹೋಗಲು ಎಲ್ಲ ವ್ಯವಸ್ಥೆಗಳನ್ನೂ ಆಕೆ ಅಣಿಮಾಡಿದರು. ತಿರುಪತಿಗೆ ಹೋದದ್ದೇನೋ ಆಯಿತು. ದೇವಸ್ಥಾನವನ್ನು ತಲುಪಿದಾಗ ಮಧ್ಯಾಹ್ನ ಸುಮಾರು ನಾಲ್ಕು ಘಂಟೆಯ ಸಮಯ. ಗರ್ಭಗುಡಿಯ ಬಾಗಿಲು ಹಾಕಿತ್ತು. ಬೆಳಗಿನ ಪೂಜೆಪುರಸ್ಕಾರಗಳಾದ ಬಳಿಕ ಗರ್ಭಗುಡಿಯ ಬಾಗಿಲನ್ನು ಮುಚ್ಚಿದರೆ ಮತ್ತೆ ತೆರೆಯುವುದು ಸಂಜೆಯೆ. ಹೀಗಾಗಿ, ದೇವರೆದುರು ಕುಳಿತು ರಾಮಾಯಣವನ್ನು ಗಾಯನ ಮಾಡಿ ನೇರವಾಗಿ ಸಮರ್ಪಿಸಬೇಕೆಂಬ ನನ್ನ ಹೆಬ್ಬಯಕೆಗೆ ದೇವಸ್ಥಾನದ ಸಂಪ್ರದಾಯ ಅಡ್ಡವಾಯಿತು. ನನಗೂ ದೇವರಿಗೂ ನಡುವೆ ಗರ್ಭಗುಡಿಯ ಬಾಗಿಲು! "ಆಚಾರ್ಯರೇ! ದೇವಸ್ಥಾನದ ನಿಯಮ ತಿಳಿದೇ ಇದೆ ನಿಮಗೆ. ತ್ಯಾಗಯ್ಯನವರೂ ಸಹ ಗರ್ಭಗುಡಿಯ ಹೊರಗಡೆಯೇ ನಿಂತು ದೇವರನ್ನು ಆರಾಧಿಸಬೇಕಾಯಿತು—ಎಂಬ ಸಂಗತಿ ತಮಗೆ ತಿಳಿಯದೆ ಇಲ್ಲ. ದಯಮಾಡಿ ಕ್ಷಮಿಸಬೇಕು" ಎಂದರು ದೇವಸ್ಥಾನದ ಅಧಿಕಾರಿಗಳು. 'ಸರಿ, ದೈವಚಿತ್ತ' ಎಂದು ಹೊರಗಡೆಯೇ ಕುಳಿತು ಹಾಡಲು ಮೊದಲು ಮಾಡಿದೆವು. ಅಂದು ಯಾರೋ ಭಕ್ತಮಹಾಶಯರು ದೇವರಿಗೆ ಗರುಡಸೇವೆಯನ್ನು ಏರ್ಪಡಿಸಿದ್ದರು. ಉತ್ಸವದೇವರಿಗೆ ದೇವಾಲಯದ ಹೊರಪ್ರಾಕಾರದಲ್ಲಿ ನಡೆಯುವ ಸೇವೆ ಅದು. ಜನಕ ಮಹಾರಾಜ ಸೀತಾದೇವಿಯನ್ನು ಶ್ರೀರಾಮಚಂದ್ರನಿಗೆ ಧಾರೆಯೆರೆದುಕೊಡುವ ಸನ್ನಿವೇಶವನ್ನು ಕುರಿತ ಶ್ಲೋಕವನ್ನು ಹಾಡುವ ಸಮಯಕ್ಕೆ ಸರಿಯಾಗಿ ಹೊರಗೆ ಬಿಜಮಾಡಿಸಿದ್ದ ಉತ್ಸವಮೂರ್ತಿ ದೇವಸ್ಥಾನಕ್ಕೆ ಹಿಂದಿರುಗಿತು. ಗರ್ಭಗುಡಿಗೆ ದೇವರನ್ನು ಕರೆದುಕೊಂಡುಹೋಗಲು ಯತ್ನವಿಲ್ಲದೆಯೆ ಗರ್ಭಗುಡಿಯ ಬಾಗಿಲನ್ನು ತೆರೆಯಬೇಕಾಯಿತು. ಆರತಿಯ ಮಂಗಳದ ಬೆಳಕಿನಲ್ಲಿ ಶ್ರೀನಿವಾಸನ ದಿವ್ಯದರ್ಶನವಾಯಿತು! ನನ್ನ ಅಲ್ಪಸೇವೆ ದೇವರ ಮನಸ್ಸಿಗೆ ಬಂದಿತಲ್ಲ ಎಂದು ಮನಸ್ಸು ಹಿಗ್ಗಿತು. ಎಲ್ಲರ ಕಣ್ಣುಗಳಲ್ಲೂ ಆನಂದಬಾಷ್ಪ! 'ಶ್ರೀನಿವಾಸ, ನಿನ್ನ ಚಿತ್ತ' ಎಂದು ಸಾಷ್ಟಾಂಗನೆರಗಿದೆ!

ಕಡೆಯ ನುಡಿ

ತಾತನವರು ಬರೆಯಿಸಿದ ಈ ಪುಸ್ತಕವನ್ನು ಕಾರಣಾಂತರದಿಂದ ಅವರು ಜೀವಂತರಾಗಿರುವಾಗಲೇ ಹೊರತರಲಾಗಲಿಲ್ಲ. ಇದು ನಮ್ಮ ದುರದೃಷ್ಟ. ನನ್ನ ತಾತಂದಿರು ಈ ರೀತಿ ಅನಿರೀಕ್ಷಿತವಾಗಿ ದೇಹತ್ಯಾಗಮಾಡುವರೆಂದು ಕನಸು ಮನಸಿನಲ್ಲಿಯೂ ಯಾರೂ ಎಣಿಸಿರಲಿಲ್ಲ. ತಾತನವರಿಗೆ ಇಳಿವಯಸ್ಸು, ನಿಜ, ಆದರೂ ಅವರ ದೇಹಸ್ಥಿತಿ ಯಾವ ಕಳವಳಕ್ಕೂ ಎಡೆಗೊಟ್ಟಿರಲಿಲ್ಲ. ಅವರು ತಮ್ಮ ತೊಂಬತ್ತನೆಯ ಜನ್ಮದಿನೋತ್ಸವದಂದು 'ನಾ ಕಂಡ ಕಲಾವಿದರು' ಎಂಬ ತಮ್ಮ ಮೊದಲ ಪುಸ್ತಕವನ್ನು ಕನ್ನಡಿಗರಿಗೆ ನೀಡಿದಂತೆ, ತೊಂಬತ್ತೇಳನೆಯ ಜನ್ಮದಿನೋತ್ಸವದ ನೆನಪಾಗಿ ಈ ಪುಟ್ಟ ಪುಸ್ತಕವನ್ನು ಕನ್ನಡಿಗರಿಗೆ ಉಡುಗೊರೆಯಾಗಿ ನೀಡಬೇಕೆಂದು ಬಯಸಿದರು. ಆದರೆ ಇದು ದೈವಚಿತ್ತಕ್ಕೆ ಬರಲಿಲ್ಲ. ಕಳೆದ ಮೇ ತಿಂಗಳ ಹದಿನೇಳರಂದು ರಾತ್ರಿ ಸುಮಾರು ಎಂಟು ಘಂಟೆ ಇಪ್ಪತ್ತೈದು ನಿಮಿಷಕ್ಕೆ ಇದ್ದಕ್ಕಿದ್ದಂತೆಯೇ, ಅವರ ಇಹಲೋಕ ಜೀವನ ಕೊನೆಯಾಯಿತು. ಮಾರನೆಯ ದಿನವೇ, ಅವರ ತೊಂಬತ್ತೇಳನೆಯ ಜನ್ಮದಿನ. ಈ ವರ್ಷ ಅಧಿಕ ಜ್ಯೇಷ್ಠಮಾಸ ಬರಲಾಗಿ, ಅವರ ಜನ್ಮದಿನವನ್ನು ನಿಜ ಜ್ಯೇಷ್ಠದಲ್ಲಿ ಆಚರಿಸಬೇಕೆಂದು ನಾವು ಯೋಚಿಸಿದ್ದೆವು. ಅವರಿಚ್ಛೆಯಂತೆ ಆ ಸಂದರ್ಭದಲ್ಲಿ ಈ ಪುಸ್ತಕ ಪ್ರಕಟವಾಗಬೇಕಾಗಿತ್ತು.

ತಾತ ಯಾವಾಗಲೂ "ದೇವರೇ ನನಗೆ ಅನಾಯಾಸ ಮರಣವನ್ನು ಕರುಣಿಸಪ್ಪ" ಎಂದು ಕೇಳಿಕೊಳ್ಳುತ್ತಿದ್ದರು. ನನ್ನ ತಾಯಿಯನ್ನು ಕರೆದು "ಪದ್ದಮ್ಮ! ನನ್ನ ಕೈಕಾಲು ಗಟ್ಟಿಯಾಗಿರುವಾಗಲೇ ದೇವರು ನನ್ನನ್ನು ಕರೆದುಕೊಳ್ಳಬೇಕಮ್ಮ! ನನ್ನಿಂದ ಯಾರಿಗೂ ಸ್ವಲ್ಪವೂ ತೊಂದರೆಯಾಗಬಾರದಮ್ಮ!" ಎಂದು ಪದೇಪದೇ ಹೇಳುತ್ತಿದ್ದರು. ಅವರ ಇಚ್ಛೆಯನ್ನು ದೇವರು ಕರುಣಿಸಿದ. ಕೊನೆಯುಸಿರುವವರೆಗೂ ತಮ್ಮ ಸಾವಿನ ಸುಳಿವನ್ನು ಸಹ ಇತರರಿಗೆ ಕೊಡಲಿಲ್ಲ. ಅಂದು ಅವರ ನಿತ್ಯನಿಯಮಗಳು ಎಂದಿನಂತೆಯೇ ಜರುಗಿದವು. ಬೆಳಗ್ಗೆ ಸ್ನಾನ ಸಂಧ್ಯಾವಂದನೆಯಾದ ಮೇಲೆ ವಿದ್ಯಾರ್ಥಿಗಳಿಗೆ ಸಂಗೀತಪಾಠ ನಡೆಯಿತು. ಇಂದ್ರಾಣಿ ಎಂಬ ವಿದ್ಯಾರ್ಥಿನಿಗೆ ಅವರ ನೆಚ್ಚಿನ ಭೈರವಿ ರಾಗದ ಅಟ್ಟತಾಳದ ವರ್ಣವನ್ನು ಪಾಠಹೇಳಿ ತಮ್ಮ ಗುರುಗಳು ಹಾಡುತ್ತಿದ್ದ ಶೈಲಿಯನ್ನೂ ವಿಶೇಷ ಸಂಗತಿಗಳನ್ನೂ ಹಾಡಿ ತೋರಿಸಿ ವಿವರಿಸಿದರು. ಮಧ್ಯಾಹ್ನದ ಭೋಜನವಾದ ಮೇಲೆ ಪದ್ಧತಿಯಂತೆ ಭಗವದ್ಗೀತೆಯ ಪಾರಾಯಣ ನಡೆಯಿತು. ಸಾಯಂಕಾಲ

ಕಲಾಕ್ಷೇತ್ರದ ವಿದ್ವಾಂಸರು, ಮಿತ್ರರು ತಾತನವರೊಂದಿಗೆ ಸರಸಸಲ್ಲಾಪಕ್ಕಾಗಿ ಸೇರಿದರು. ತಾತನವರು ಕಲಾಕ್ಷೇತ್ರಕ್ಕೆ ಕಾಲಿಟ್ಟ ದಿನದಿಂದ ಅವರ ದೇಹಸ್ಥಿತಿಯ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊತ್ತಿದ್ದ ಡಾಕ್ಟರ್ ಗೋಪಾಲನ್ ಮತ್ತು ತಾತನವರಿಗೆ ಅತ್ಯಂತ ಪ್ರಿಯರಾದ ವಿದ್ವಾನ್ ಬೂದಲೂರು ಕೃಷ್ಣಮೂರ್ತಿಶಾಸ್ತ್ರಿಗಳೂ ಆ ಮಿತ್ರವೃಂದದಲ್ಲಿ ಇದ್ದರು. ಸಂಜೆ ಏಳು ಘಂಟೆಯ ವರೆಗೂ ಮಾತುಕತೆ ಸಾಗಿತು. ವಿಷಯ ಎಂದಿನಂತೆ ಸಂಗೀತ ಮತ್ತು ಸಾಹಿತ್ಯ. ಹೆಜ್ಜೆಹೆಜ್ಜೆಗೂ ಹಾಸ್ಯ, ವಿನೋದ. ಇಷ್ಟಾದ ಬಳಿಕ ತಾತನವರ ಅಪ್ಪಣೆಪಡೆದು ಒಬ್ಬೊಬ್ಬರಾಗಿ ತೆರಳಲುದ್ಯುಕ್ತರಾದರು. ಆ ಸಮಯದಲ್ಲಿ ಬೂದಲೂರು ಕೃಷ್ಣಮೂರ್ತಿಶಾಸ್ತ್ರಿಗಳನ್ನು ಸಮೀಪಕ್ಕೆ ಕರೆದು, ಶಾಸ್ತ್ರಿಗಳೇ! ನಾನು ಬಂದ ಕೆಲಸವಾಯಿತು. ನಾನಿನ್ನು ಹೋಗಿಬರುತ್ತೇನೆ. ನನ್ನ ಕೊನೆಯ ಒಂದು ಮಾತನ್ನು ನೀವು ನಡೆಸಿಕೊಡಬೇಕು. ಎಲ್ಲ ಸಂಗೀತ ವಿದ್ವಾಂಸರಿಗೂ— ಅವರು ಚಿಕ್ಕವರಾಗಲಿ, ದೊಡ್ಡವರಾಗಿರಲಿ, ನನ್ನ ನಮಸ್ಕಾರಗಳನ್ನು ತಿಳಿಸ ಬೇಕು. ಎಂದರೋ ಮಹಾನುಭಾವುಲು! ಎಲ್ಲರ ಆಶೀರ್ವಾದದ ಬಲದಿಂದ ಮುಂದಿನ ಜನ್ಮದಲ್ಲಾದರೂ ನನಗೆ ನಿಜವಾದ ಸಂಗೀತ ಬರುವಂತಾಗಬೇಕು' ಎಂದರು. ತಾತ ಏಕೆ ಹೀಗೆ ಮಾತನಾಡುತ್ತಿದ್ದಾರೆ ಎಂದು ಯಾರಿಗೂ ಆಗ ಅರ್ಥವಾಗಲಿಲ್ಲ. "ತಾವು ದೊಡ್ಡವರು. ಈ ರೀತಿ ಅಪ್ಪಣೆ ಕೊಡಿಸಬಾರದು. ತಮ್ಮ ಶತಮಾನೋತ್ಸವವನ್ನು ದೇವರು ಖಂಡಿತ ನಡಸಿಕೊಡುತ್ತಾನೆ" ಎಂದು ಶಾಸ್ತ್ರಿಗಳು ಉತ್ತರಿಸಿ, ಸಾಷ್ಟಾಂಗ ನಮಸ್ಕಾರಮಾಡಿ ಮೇಲೆದ್ದರು. ಆ ಬಳಿಕ ಡಾಕ್ಟರ್ ಗೋಪಾಲನ್ ಅವರನ್ನುದ್ದೇಶಿಸಿ, ತಾತ, "ಏನು ಡಾಕ್ಟರೇ! ಹೇಗಿದೆ ನನ್ನ ದೇಹಸ್ಥಿತಿ?" ಎಂದು ಕೇಳುತ್ತ ಒಂದು ತುಂಟುನಗೆ ನಕ್ಕರು. "ನಿಮ್ಮ ದೇಹಸ್ಥಿತಿ ಏನಾಗಿದೆ, ತಾತ? ಅತ್ಯುತ್ತಮವಾಗಿದೆ! ನಾಡಿ, ಶ್ವಾಸಕೋಶ, ಹೃದಯಸ್ಥಿತಿ ಎಲ್ಲವೂ ಸಮರ್ಪಕವಾಗಿವೆ. ನೂರುವರ್ಷ ನಿಮಗೆ ಕಟ್ಟಿಟ್ಟದ್ದು" ಎಂದರು ಡಾಕ್ಟರರು. "ಸರಿ, ಸರಿ. ಇನ್ನೊಂದು ಗಳಿಗೆಗೆ ಕಣ್ಣುಮುಚ್ಚಿಕೊಳ್ಳು ವವರೆಗೂ ಸಹ ನೀವು ಹಾಗೆಯೇ ಹೇಳುತ್ತೀರಿ. ಎಷ್ಟಾದರೂ ಅದು ನಿಮ್ಮ ವೃತ್ತಿಯ ಲಕ್ಷಣವಲ್ಲವೇ!" ಎಂದು ತಾತ ಅವರನ್ನು ಪರಿಹಾಸ್ಯಮಾಡಿದರು. ಆಗಲೂ ಸಹ ಯಾರಿಗೂ ಏನೂ ಅರ್ಥವಾಗಲಿಲ್ಲ. ಬಂದಿದ್ದವರೆಲ್ಲ ಸುಮಾರು ಏಳೂವರೆಘಂಟೆಯ ಹೊತ್ತಿಗೆ ಹೊರಟು ಹೋದರು. ದೇವರಿಗೆ ಸಾಯಂಕಾಲದ ಮಂಗಳಾರತಿಯಾಯಿತು. "ನಾಲ್ಕುಹೆಜ್ಜೆ ಓಡಾಡುತ್ತೇನೆ. ಯಾಕೋ ಬೇಸರ ವಾಗಿದೆ" ಎಂದರು ತಾತ. ಅದೂ ಆಯಿತು. ಆ ಬಳಿಕ ನನ್ನ ತಾಯಿಯನ್ನು ಕರೆದು "ಈ ಹೊತ್ತು ನಾನು ಊಟಮಾಡುವುದಿಲ್ಲ, ಪದ್ಮಮ್ಮ! ಉಳಿದವ

ರೆಲ್ಲರಿಗೂ ಊಟ ಹಾಕಿಬಿಡು. ನನಗೆ ಒಂದು ಲೋಟ ಹಾಲು ಸಾಕು” ಎಂದರು. ಇಷ್ಟು ಹೊತ್ತಿಗೆ ರಾತ್ರಿ ಎಂಟಾಯಿತು. “ಎಲ್ಲಿ, ಸ್ವಲ್ಪ ತಂಬೂರಿಯನ್ನು ಶ್ರುತಿಮಾಡಿ, ‘ಇಂಥ ಪ್ರಭುವ ಕಾಣೆನೊ’ ದೇವರನಾಮವನ್ನು ಹಾಡು” ಎಂದರು ತಾತ. ಎಂಟೂಕಾಲು ಘಂಟೆಯವರೆಗೂ ಹಾಡಿದ್ದಾಯಿತು. ಅಲ್ಲಿಯವರೆಗೂ ಮಂಚದಮೇಲೆ ಮಲಗಿದ್ದವರು, ಮಂಚದಿಂದಿಳಿದು ಎದುರಿಗೆ ಹಾಸಿದ್ದ ಚಾಪೆಯಮೇಲೆ ಒಂದು ತಲೆದಿಂಬನ್ನು ಹಾಕಿಕೊಂಡು ಮಲಗಿ, ತಂಬೂರಿಯ ನಾದವನ್ನು ಕೇಳುತ್ತ ಆನಂದಿಸುತ್ತಿದ್ದರು. ಎಂಟು ಇಪ್ಪತ್ತೈದರ ಸಮಯ. ತಾತ ಮೇಲೇಳಲು ದಿಂಬಿನಿಂದ ಸ್ವಲ್ಪ ತಲೆ ಎತ್ತಿದರು. ‘ಯಾಕೋ ಸ್ವಲ್ಪ ತಲೆ ತಿರುಗುವಂತಾಗುತ್ತದೆ’ ಎಂದರು. “ಹಾಗಾದರೆ, ಮೇಲೆ ಏಳಬೇಡಿ ತಾತ! ದಿಂಬಿನ ಮೇಲೆ ತಲೆಯಿಟ್ಟು ಮೆಲ್ಲಗೆ ಹಾಗೆಯೇ ಮಲಗಿ” ಎನ್ನಲು, ಅವರು ಮತ್ತೆ ದಿಂಬಿನ ಮೇಲೆ ತಲೆಯಿಟ್ಟರು. ತಿರುಗಿ ಮೇಲೇಳಲೇ ಇಲ್ಲ; ಗಟ್ಟಿಯಾಗಿ ಒಮ್ಮೆ ಉಸಿರನ್ನೆಳೆದುಕೊಂಡಂತೆ ಮಾಡಿದರು. ಗಾಬರಿಯಿಂದ ಕೂಗಿಕೊಂಡೆ. ನನ್ನ ತಾಯಿ ಒಳಗಿನಿಂದ ಓಡಿ ಬಂದರು. ಎಲ್ಲವೂ ಮುಗಿದಿತ್ತು. ಬಾಯಿಯಲ್ಲಿ ಎರಡು ತೊಟ್ಟು ಗಂಗೋದಕವನ್ನು ಹಾಕಿದರು, ನನ್ನ ತಾಯಿ. ಪುಣ್ಯಮಯವಾದ ಬಾಳಿನ ನಂದಾದೀಪ ನಂದಿತು! ಈ ಪುಸ್ತಕ ಅವರ ಜೀವಿತ ಕಾಲದಲ್ಲಿ ಕನ್ನಡ ಬಂಧುಗಳ ಕೈ ಸೇರಲಾಗಲಿಲ್ಲ. ಸಹೃದಯ ವಾಚಕರು ಪುಸ್ತಕವನ್ನು ಓದಿ ಆನಂದಿಸಿದರೆ ಅವರ ಆತ್ಮಕ್ಕೆ ಶಾಂತಿಯಾದೀತು!

ಚಿರಂಜೀವಿ

VIJAYA EVENING COLLEGE LIBRARY
BANGALORE-560 004.
Accn. No. 6860
Cost. Rs 6.50
Date
T. C. Hanief
Librarian.

Call No. Accn. No. 6860

Author : ಕೆ. ವಾಸುದೇವಾಚಾರ್ಯ

Title : ನೆನಪುಗಳು

Card No.	Borrowing Date	Signature

ವಿಜಯ ಸಂಜೆ ಕಾಲೇಜು ಗ್ರಂಥಾಲಯ

ಆರ್.ವಿ. ರಸ್ತೆ, ಬಸವನಗುಡಿ,

ಬೆಂಗಳೂರು - 560 004.

ಕೆ. ವಾಸುದೇವಾಚಾರ್ಯ

Title ನೆನಪುಗಳು

ACCN. NO. 6860

ಕೆ. ವಾಸುದೇವಾಚಾರ್ಯ

ನೆನಪುಗಳು 6 50

ವಾಗ್ಗೇಯಕಾರ ವಾಸುದೇವಾಚಾರ್ಯ 7 50

ನಾ ಕಂಡ ಕಲಾವಿದರು ಅಚ್ಚಿನಲ್ಲಿ

ಎಸ್. ಕೃಷ್ಣಮೂರ್ತಿ

ಸಂಗೀತ ಕಳಾನಿಧಿ 13 00

ದೇವಕಿಮೂರ್ತಿ

ಉಪಾಸನೆ (ಕಾದಂಬರಿ) 9 00

ಒಡಕು–ದೋಣಿ 10 00

ಆಹುತಿ 12 00

ತ.ರಾ. ಸುಬ್ಬರಾವ್ (ತ.ರಾ.ಸು)

ದುರ್ಗಾಸ್ತಮಾನ 50 00

ಬಿಡುಗಡೆಯ ಬೇಡಿ 18 00

ಶಿಲ್ಪಶ್ರೀ

ನಾಗರಹಾವು, ಎರಡು ಹೆಣ್ಣು ಒಂದು
ಗಂಡು, ಸರ್ಪ ಮತ್ಸರ

ಬಿ. ಎಲ್. ವೇಣು

ಪ್ರೇಮ ಮದುವೆ ಮತ್ತು ಶೀಲ 12 00 20 00

ಅಜೇಯ

ಪರಾಜಿತ

ಸುಧಾಮೂರ್ತಿ

ಅತಿರಿಕ್ತೆ (ಕಾದಂಬರಿ)

ಕಾವ್ಯಾಲಯ : ಪ್ರಕಾಶಕರು : ಮೈಸೂರು 14